ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮಾರ್ಚ್ 13 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 323 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಹೌದು, ಐದು ವರ್ಷವೂ ನಾನೇ ಮುಖ್ಯಮಂತ್ರಿ...!

ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಘೋಷಣೆ



ಬೆಂಗಳೂರು, ಮಾ.12–ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರವಾಗಿ ಬಹಿರಂಗವಾಗಿಯೇ ಜಟಾಪಟಿ ನಡೆಯುತ್ತಿದೆ. ಇದೇ ವಿಚಾರ ವಿಪಕ್ಷ ಬಿಜೆಪಿಗೂ ಅಸ್ತ್ರವಾಗಿದೆ.

ಈ ನಡುವೆ ಇಂದು ವಿಧಾನಸಭೆ ಕಲಾಪದ ವೇಳೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಐದು ವರ್ಷವೂ ನಾನೇ ಮುಖ್ಯಮಂತ್ರಿಯಾಗಿರ್ತೇನೆ. ಮುಂದೆಯೂ ನಾವೇ ಅಧಿಕಾರ ಹಿಡಿತೀವಿ ಎಂದು ಗುಡುಗಿದ್ದಾರೆ. ಗ್ಯಾರಂಟಿ ವಿಚಾರವಾಗಿ ಬಿಜೆಪಿ ಶಾಸಕರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸುತ್ತಿದ್ದ ವೇಳೆ ವಿಪಕ್ಷ ನಾಯಕ ಆರ್.ಅಶೋಕ್, ಸಿದ್ದರಾಮಯ್ಯ ಇನ್ನು ಎಷ್ಟು ದಿನ ಸಿಎಂ ಆಗಿರುತ್ತಾರೋ ಗೊತ್ತಿಲ್ಲ ಎಂದು ಕಾಲೆಳೆದರು. ಇಂತಹದ್ದೇ ಅವಕಾಶಕ್ಕಾಗಿ ಕಾಯುತ್ತಿದ್ದವರಂತೆ ಸಿದ್ದರಾಮಯ್ಯ, ಐದೂ ವರ್ಷ ನಾನೇ ಮುಖ್ಯಮಂತ್ರಿಯಾಗಿರುತ್ತೇನೆ. ಮುಂದಿನ ಚುನಾವಣೆಯಲ್ಲೂ ನಾವೇ ಬರ್ತೇವೆ ಎಂದರು. ಆದರೆ ಅಷ್ಟಕ್ಕೇ ಬಿಡದ ಅಶೋಕ್, ನೀವೇ ಸಿಎಂ ಆಗಿ ಇರುತ್ತೀರಾ ಎಂದು ಮತ್ತೆ ಪ್ರಶ್ನಿಸಿದಾಗ, ನಾನೇ ಸಿಎಂ ಆಗಿರ್ತೀನಿ ಎಂದು ಸಿದ್ದರಾಮಯ್ಯ ಹೇಳಿದರು.

ಮತ್ತೆ ಕೆಣಕಿದ ಅಶೋಕ್, ಸಿದ್ದರಾಮಯ್ಯನವರು ಐದು ವರ್ಷ ಸಿಎಂ ಆಗಿರ್ಲಿ ಎಂದು ನಾವೂ ಭಾವಿಸುತ್ತೇವೆ. ಆದರೆ ಈಗ ರಾಜ್ಯದಲ್ಲಿ ಅನೇಕ ಕಾಂಗ್ರೆಸ್ ನಾಯಕರೇ ಪವರ್ ಷೇರಿಂಗ್ ವಿಚಾರವಾಗಿ ಮಾತನಾಡುತ್ತಿದ್ದಾರೆ. ಅಧಿಕಾರ ಬದಲಾವಣೆ ಬಗ್ಗೆಯೇ ಹೇಳಿಕೆ ನೀಡುತ್ತಿದ್ದಾರೆ ಎಂದಾಗ ಎದ್ದು ನಿಂತ ಸಿದ್ದರಾಮಯ್ಯ, ಹೌದಪ್ಪಾ... ನಾನೇ ಐದು ವರ್ಷವೂ ಸಿಎಂ ಆಗಿ ಇರುತ್ತೇನೆ ಎಂದು ಕಡ್ಡಿ ಮುರಿದಂತೆ ಹೇಳಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ಕಾಂಗ್ರೆಸ್ ವಲಯದಲ್ಲೇ ಭಾರಿ ಚರ್ಚೆ ನಡೆಯುತ್ತಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಬೆಂಬಲಿಗ ಶಾಸಕರು ಹಾಗೂ ಸಚಿವರು ತಮ್ಮದೇ ಆದ ಶೈಲಿಯಲ್ಲಿ ತಮ್ಮ ನಾಯಕರ ಪರವಾಗಿ ಹೇಳಿಕೆಗಳನ್ನು ನೀಡುತ್ತಾ ಹಾದಿರಂಪ–ಬೀದಿರಂಪ ಮಾಡಿಕೊಂಡಿದ್ದಾರೆ. ಇದರಿಂದ ಬೇಸತ್ತ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಮುಖ್ಯಮಂತ್ರಿ ಬದಲಾವಣೆ ಸಂಬಂಧ ಯಾರೂ ಬಹಿರಂಗ ಹೇಳಿಕೆ ■ 6ನೇ ಪುಟಕ್ಕೆ

ದುಬೈನಿಂದ ಚಿನ್ನ ಕಳ್ಳ ಸಾಗಾಣೆ ಪ್ರಕರಣ

ನಾಳೆ ರನ್ಯಾ ಜಾಮೀನು ಭವಿಷ್ಯ



ಬೆಂಗಳೂರು, ಮಾ.12–ದುಬೈನಿಂದ ಚಿನ್ನ ಕಳ್ಳ ಸಾಗಾಣೆ ಪ್ರಕರಣದಲ್ಲಿ ಸಿಲುಕಿರುವ ನಟಿ ರನ್ಯಾ ಜಾಮೀನು ಆದೇಶವನ್ನು ಆರ್ಥಿಕ ಅಪರಾಧಗಳ ವಿಶೇಷ ಕೋರ್ಟ್ ಮಾ.14ಕ್ಕೆ ಕಾಯ್ದಿರಿಸಿದೆ.

ರನ್ಯಾ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಸ್ಫೋಟಕ ವಿಚಾರಗಳು ಬಯಲಿಗೆ ಬರುತ್ತಿವೆ. ಕಳೆದ ವರ್ಷದ ಕೊನೆಯಲ್ಲಿ 2 ಬಾರಿ ದುಬೈನಲ್ಲಿ ಚಿನ್ನ ಖರೀದಿ ಮಾಡಿದ್ದ ರನ್ಯಾ ರಾವ್, ಅದನ್ನು ಸ್ವಿಟ್ಜರ್‌ಲೆಂಡ್‌ಗೆ ಕೊಂಡೊಯ್ಯುವುದಾಗಿ ಅಲ್ಲಿನ ಕಸ್ಟಮ್ಸ್ ಅಧಿಕಾರಿಗಳನ್ನು ಯಾಮಾರಿಸಿದ್ದರು. ಆದರೆ ರನ್ಯಾ ರಾವ್ ನೇರವಾಗಿ ಭಾರತಕ್ಕೆ ಬಂದಿದ್ದರು ಎಂಬುದು ಆಕೆಯ ಟ್ರಾವೆಲ್ ಹಿಸ್ಟರಿ ಪರಿಶೀಲಿಸಿದಾಗ ಗೊತ್ತಾಗಿದೆ ಎಂದು ಡಿಆರ್‌ಐ, ಬಂಧನದ ಮೆಮೋನಲ್ಲಿ ತಿಳಿಸಿದೆ. ರನ್ಯಾ ರಾವ್ ನಿರಂತರವಾಗಿ ಚಿನ್ನ ■ 6ನೇ ಪುಟಕ್ಕೆ

ಕಷ್ಟದಲ್ಲಿ ನೆರವಾಗುತ್ತಾ ಬಂದ ಸ್ನೇಹಿತೆಯನ್ನ ಚಿನ್ನದ ಸರಕ್ಕಾಗಿ ಕೊಂದ ಮಹಿಳೆ!

● ಮೈಸೂರಿನ ಜೆಸಿ ನಗರದಲ್ಲಿ ಅಮಾನುಷ ಘಟನೆ ● ಕದ್ದ ಸರವನ್ನು 1.5 ಲಕ್ಷಕ್ಕೆ ಅಡವಿಟ್ಟು 36 ಸಾವಿರ ಬಾಡಿಗೆ ಬಾಕಿ ಪಾವತಿ ● ಈ ಹಿಂದೆಯೂ ಸಾಕಷ್ಟು ಬಾರಿ ನೆರವು ನೀಡಿದ್ದ ಗೆಳತಿಯ ನಿರ್ದಯವಾಗಿ ಕೊಂದ ಘೋರ ಸಂಗತಿ ಬಯಲು



ಹತ್ಯೆಗೀಡಾದ ಸುಲೋಚನ



ಹಂತಕಿ ಶಕುಂತಲಾ

ಮೈಸೂರು, ಮಾ.12(ಆರ್‌ಕೆ)– ಆ ವೃದ್ಧೆ ಪರೋಪಕಾರಿ. ಯಾರಾದರೂ ಕಷ್ಟ ಹೇಳಿಕೊಂಡರೆ ಮರುಗುವ ಜೀವ. ಇಂತಹ ಮನೋಭಾವದ ವೃದ್ಧೆ ತನ್ನಿಂದ ಸಹಾಯ ಪಡೆದವಳಿಂದಲೇ ಹತ್ಯೆಗೀಡಾಗಿದ್ದಾರೆ.

ಇಂತಹ ಅಮಾನುಷ ಹತ್ಯೆ ನಡೆದಿರುವುದು ಮೈಸೂರಿನ ಜೆ.ಸಿ. ನಗರದಲ್ಲಿ. ಮೌಂಟೆಡ್ ಪೊಲೀಸ್ ಘಟಕದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಗಂಗಣ್ಣ ಅವರ ಪತ್ನಿ ಸುಲೋಚನ (62) ಹತ್ಯೆಗೀಡಾದವರಾಗಿದ್ದು, ಇವರಿಂದ ಹಲವಾರು ಬಾರಿ ಸಹಾಯ ಪಡೆದಿರುವ ಗೃಹಿಣಿ ಶಕುಂತಲಾ (45), ತನಗೆ ಕಷ್ಟ ಕಾಲದಲ್ಲಿ ಸಹಾಯ ಮಾಡಿದ್ದ ವೃದ್ಧೆಯನ್ನು ಕೊಂದ ನಿರ್ದಯಿ. ಇದೀಗ ಜೈಲು ಪಾಲಾಗಿದ್ದಾಳೆ.

ವಿವರ: ಸುಲೋಚನಾ ಮತ್ತು ಶಕುಂತಲಾ ಒಂದೇ ಬಡಾವಣೆಯಲ್ಲಿ ವಾಸವಾಗಿದ್ದು, ಹಲವು ವರ್ಷಗಳಿಂದ ಆತ್ಮೀಯ ಒಡನಾಟ ಹೊಂದಿದ್ದರು. ಹೋಟೆಲ್‌ವೊಂದರ ಬಾಣಸಿಗನ ಪತ್ನಿಯಾದ ಶಕುಂತಲಾ ತನ್ನ ಕಷ್ಟ–ಸುಖಗಳನ್ನು ಸುಲೋಚನಾ ಅವರೊಂದಿಗೆ ಹಂಚಿಕೊಳ್ಳುತ್ತಿದ್ದಳು.

ಬಾಣಸಿಗನಾದ ಪತಿ ಹಾಗೂ ಇಬ್ಬರು ಪುತ್ರಿಯರೊಂದಿಗೆ ವಾಸವಾಗಿದ್ದ ಶಕುಂತಲಾಳಿಗೆ, ತನ್ನ ಪತಿಗೆ ಬರುವ ಅಲ್ಪ ವೇತನದಿಂದ ಜೀವನ ಸಾಗಿಸುವುದು ಕಷ್ಟಕರವಾಗಿತ್ತು. ಈ ವಿಷಯ ತಿಳಿದಿದ್ದ ಸುಲೋಚನಾ ಅವರು ಆಕೆಗೆ ಒಮ್ಮೆ 2.5 ಲಕ್ಷ ರೂ. ನಗದು ನೀಡಿ ಸಹಾಯ ಮಾಡಿದ್ದರು. ಇತ್ತೀಚೆಗೆ ಕಷ್ಟ ಹೇಳಿಕೊಂಡಾಗ ತನ್ನ ಎರಡು ಚಿನ್ನದ ಬಳೆಗಳನ್ನು ಆಕೆಗೆ ■ 6ನೇ ಪುಟಕ್ಕೆ

ಕಷ್ಟ ಅಂದಾಗಲೆಲ್ಲಾ ಕೈ ಹಿಡಿದಿದ್ದೇ ತಪ್ಪಾ!

ಮೈಸೂರು, ಮಾ.12(ಆರ್‌ಕೆ)–ಇದೊಂದು ರೀತಿ ಚಿನ್ನದ ಮೊಟ್ಟೆ ಇಡುವ ಕೋಳಿಯ ಕೊಂದ ಪರಿ. ಕಷ್ಟ ಹೇಳಿಕೊಂಡಾಗಲೆಲ್ಲಾ ಮರುಗಿ ತನಗೆ ನೆರವಾದ ಗೆಳತಿಯನ್ನು ಆಕೆಯ ಬಳಿ ಇದ್ದ ಮತ್ತಷ್ಟು ಚಿನ್ನಕ್ಕಾಗಿ ಕೊಂದು ಹಾಕಿದ ನಿರ್ದಯ ಸಂಗತಿ.

ಸುಲೋಚನಾ ಅವರು ಶಕುಂತಲಾ ಕಷ್ಟವೆಂದು ಹೇಳಿದಾಗಲೆಲ್ಲಾ ಹಣ ಕೊಟ್ಟು, ಇಲ್ಲ ಚಿನ್ನ ನೀಡಿ ಸಹಾಯ ಮಾಡುತ್ತಿದ್ದರು. ಕೆಲ ತಿಂಗಳ ಹಿಂದೆ 2.5 ಲಕ್ಷ ರೂ. ನಗದು ಕೊಟ್ಟಿದ್ದಲ್ಲದೆ, ಹತ್ಯೆಗೂ ಒಂದು ವಾರ ಮುನ್ನ 2 ಚಿನ್ನದ ಬಳೆಗಳನ್ನು ಆಕೆಗೆ ನೀಡಿ ಅದನ್ನು ಗಿರವಿ ಇಟ್ಟು ಹಣ ಪಡೆದು ಕಷ್ಟ ತೀರಿಸಿಕೊಳ್ಳುವಂತೆ ತಿಳಿಸಿದ್ದಾರೆ. ಇನ್ನೂ ಆ ಬಳೆಗಳನ್ನು ಸುಲೋಚನಾ ಅವರಿಗೆ ಶಕುಂತಲಾ ಬಿಡಿಸಿಕೊಟ್ಟಿಲ್ಲ. ■ 6ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 13 ಮಾರ್ಚ್ 2025

ಕ್ರೈಂ ಬಾಕ್ಸ್

8 ಲಕ್ಷ ರೂ. ಬೆಲೆಯ ಚಿನ್ನಾಭರಣ, ವಜ್ರದ ಬ್ರೇಸ್‌ಲೆಟ್ ಕಳವು

ಬೆಂಗಳೂರು ಪೊಲೀಸರಿಂದ ಮೈಸೂರಿನ ಮಾಜಿ ಶಿಕ್ಷಕಿ ಸೆರೆ

ಮೈಸೂರು, ಮಾ. 12(ಆರ್‌ಕೆ)– ಆಭರಣ ವಸ್ತುಪ್ರದರ್ಶನದಲ್ಲಿ 8 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು ವಜ್ರದ ಬ್ರೇಸ್‌ಲೆಟ್ ಕಳವು ಮಾಡಿದ ಮೈಸೂರಿನ ಮಾಜಿ ಶಿಕ್ಷಕಿಯನ್ನು ಬೆಂಗಳೂರಿನ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಉದಯಗಿರಿ ನಿವಾಸಿ ಜಹೀರಾ ಫಾತಿಮಾ(64) ಬಂಧಿತ ಕಳವು ಆರೋಪಿ. ಹೃದಯ ಸಂಬಂಧಿ ಖಾಯಿಲೆಯಿಂದ ಬಳಲುತ್ತಿರುವ ಆಕೆ, ಪತಿ ಸಾವಿನ ನಂತರ ಏಕಾಂಗಿಯಾಗಿ ವಾಸಿಸುತ್ತಿದ್ದು, ಗಲ್ಫ್‌ನಲ್ಲಿ ಕೆಲ ವರ್ಷ ಶಿಕ್ಷಕಿಯಾಗಿ ಕೆಲಸ ಮಾಡಿದ್ದರು.

ಕೋವಿಡ್ ಸಮಯದಲ್ಲಿ ಹಿಂದಿರುಗಿದ್ದ ಆಕೆಗೆ ಯಾವುದೇ ಕೆಲಸ ವಿರಲಿಲ್ಲ. ಬೆಂಗಳೂರಲ್ಲಿ ಆಭರಣ ಪ್ರದರ್ಶನವಿರುವುದನ್ನು ಸಾಮಾಜಿಕ ಮಾಧ್ಯಮದ ಮೂಲಕ ತಿಳಿದು, ಗ್ರಾಹಕರಂತೆ ಸುಬ್ರಹ್ಮಣ್ಯನಗರದ ಡಾ.ರಾಜ್‌ಕುಮಾರ್ ರಸ್ತೆಯ ಹೋಟೆಲ್‌ವೊಂದರಲ್ಲಿ ಗೋಲ್ಡ್ ಎಕ್ಸಿಬಿಷನ್‌ಗೆ ಭೇಟಿ ನೀಡಿದ್ದ ಫಾತಿಮಾ, ಡೈಮಂಡ್ ಬ್ರೇಸ್‌ಲೆಟ್ ಮತ್ತು ಎರಡು ಚಿನ್ನದ ಬಳೆಗಳನ್ನು ಕಳವು ಮಾಡಿದ್ದಾಳೆ ಎಂದು ಚಿನ್ನದ ಅಂಗಡಿ ಮ್ಯಾನೇಜರ್ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಸಿಸಿ ಟಿವಿ ಫುಟೇಜ್‌ಗಳನ್ನು ಪರಿಶೀಲಿಸಿದಾಗ ಜಹೀರಾ ಫಾತಿಮಾ ಆಭರಣ ಕಳವು ಮಾಡಿರುವ ಸುಳಿವು ಸಿಗುತ್ತಿದ್ದಂತೆಯೇ ಆಕೆಯನ್ನು ಬಂಧಿಸಿ ವಿಚಾರಣೆ ನಡೆಸಿದ್ದರು. ಆರಂಭದಲ್ಲಿ ಆರೋಪ ನಿರಾಕರಿಸಿದ ಫಾತಿಮಾ, ನಂತರ ತಾನು ಆಭರಣಗಳನ್ನು ಕಳವು ಮಾಡಿ ಮೈಸೂರಿನ ಎರಡು ಅಂಗಡಿಗಳಲ್ಲಿ ಗಿರವಿ ಇಟ್ಟಿರುವುದಾಗಿ ಒಪ್ಪಿಕೊಂಡಳು ಎಂದು ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಂಚನೆ ಆರೋಪ

ಉದ್ಯಮಿ ವಿರುದ್ಧ 2 ಪ್ರಕರಣ ದಾಖಲು

ಮೈಸೂರು, ಮಾ. 12(ಆರ್‌ಕೆ)– ಮೈಸೂರಿನ ದೇವರಾಜ ಅರಸು ರಸ್ತೆಯ ಉದ್ಯಮಿ ಪ್ರದೀಪ್ ಸಿಂಗ್ ವಿರುದ್ಧ ದೇವರಾಜ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ವಂಚನೆ ಪ್ರಕರಣ ದಾಖಲಾಗಿವೆ.

ವೈಯಕ್ತಿಕ ಉಪಯೋಗಕ್ಕಾಗಿ ವ್ಯಕ್ತಿಯೊಬ್ಬರಿಂದ ಪಡೆದುಕೊಂಡಿದ್ದ ಫಾರ್ಚುನರ್ ಕಾರನ್ನು ಹಿಂದಿರುಗಿಸದೇ ವಂಚಿಸಿ ಪ್ರದೀಪ್ ಸಿಂಗ್ ನಾಪತ್ತೆಯಾಗಿದ್ದಾರೆ ಎಂದು ಬೆಂಗಳೂರಿನ ರಜಿಯಾ ಖಾನಂ ಎಂಬುವರು ದೂರು ನೀಡಿದ್ದಾರೆ.

ಖಾಸಗಿ ಫೈನಾನ್ಸ್‌ನಿಂದ 21 ಲಕ್ಷ ರೂ. ಸಾಲ ಪಡೆದು ಖರೀದಿಸಿದ್ದ ಸೆಕೆಂಡ್ ಹ್ಯಾಂಡ್ ಫಾರ್ಚುನರ್ ಕಾರನ್ನು ನನ್ನ ಮೈದುನ ಉಪಯೋಗಿಸುತ್ತಿದ್ದರು ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

2024ರ ನವೆಂಬರ್ ತಿಂಗಳಲ್ಲಿ ಪ್ರದೀಪ್ ಸಿಂಗ್ ತಮ್ಮ ಕುಟುಂಬದೊಂದಿಗೆ ಧಾರ್ಮಿಕ ಸ್ಥಳಗಳಿಗೆ ತೆರಳಲು ಕಾರನ್ನು ಪಡೆದು ಹಿಂದಿರುಗಿಸಿಲ್ಲ. ಈಗ ಅವರು ಮೊಬೈಲ್ ಸಂಪರ್ಕಕ್ಕೂ ಸಿಗುತ್ತಿಲ್ಲ. ಕಾರ್‌ನ ಮೂಲ ದಾಖಲೆಗಳನ್ನು ಕಾರಿನಲ್ಲೇ ಇರಿಸಿದ್ದೇನೆ ಎಂದು ರಜೀಯಾ ಖಾನಂ ದೂರಿನಲ್ಲಿ ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ 20 ಲಕ್ಷ ರೂ. ಚೀಟಿ ಹಣ ಕೊಡದೇ ಪ್ರದೀಪ್ ಸಿಂಗ್ ವಂಚಿಸಿದ್ದಾರೆ ಎಂದು ಮೈಸೂರಿನ ಎನ್.ಆರ್. ಮೊಹಲ್ಲಾ ನಿವಾಸಿ ಸೈಯದ್ ಸಲೀಂ ಎಂಬುವರು ದೂರು ನೀಡಿದ್ದಾರೆ. ಈ ಎರಡು ಪ್ರತ್ಯೇಕ ವಂಚನೆ ಪ್ರಕರಣಗಳನ್ನು ದೇವರಾಜ ಠಾಣೆ ಇನ್ಸ್‌ಪೆಕ್ಟರ್ ರಘು ದಾಖಲಿಸಿಕೊಂಡಿದ್ದಾರೆ.

ಏ.7ರಂದು ಪಿ.ಆರ್.ತಿಪ್ಪೇಸ್ವಾಮಿ ಕಲಾ ಸಂಭ್ರಮ–25; ಪಿಆರ್‌ಟಿ ಪ್ರಶಸ್ತಿ ಪ್ರದಾನ



ಪಿ.ಆರ್.ತಿಪ್ಪೇಸ್ವಾಮಿ

ಮೈಸೂರು, ಮಾ.12(ಜಿಎ)–ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನದ ವತಿಯಿಂದ ಏ.7ಕ್ಕೆ 'ಪಿ.ಆರ್. ತಿಪ್ಪೇಸ್ವಾಮಿ ಕಲಾಸಂಭ್ರಮ–25' ಮತ್ತು ಪಿಆರ್‌ಟಿ ಕಲಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ್ ಕದಂಬ ಈ ವಿಷಯ ತಿಳಿಸಿ, ಹಿರಿಯ ಕಲಾವಿದರಾದ ಪಿ.ಆರ್.ತಿಪ್ಪೇಸ್ವಾಮಿ ಅವರ ನೆನಪಿನಾರ್ಥ ಪ್ರತಿ ವರ್ಷದಂತೆ ಈ ಬಾರಿಯೂ 'ಪಿ.ಆರ್.ತಿಪ್ಪೇಸ್ವಾಮಿ ಕಲಾ ಸಂಭ್ರಮ–25' ಮತ್ತು ಪಿಆರ್‌ಟಿ ಕಲಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಪ್ರತಿಷ್ಠಾನ ಏರ್ಪಡಿಸುತ್ತಿದ್ದು, ಕಾರ್ಯಕ್ರಮದಲ್ಲಿ ಬೆಂಗಳೂರಿನ ಹಿರಿಯ ಕಲಾವಿದೆ ಸುಧಾ ಮನೋಹರ್ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಮುಖವೀಣೆ ಅಂಜನಪ್ಪ ಅವರನ್ನು ಪಿಆರ್‌ಟಿ ಕಲಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದರು.


ಹಿರಿಯ ಕಲಾವಿದೆ ಸುಧಾ ಮನೋಹರ್ ಅವರು ಮೂಲತಃ ಧಾರವಾಡ ಜಿಲ್ಲೆಯವರಾಗಿದ್ದು, ಚಿತ್ರಕಲಾ ಪರಿಷತ್ತಿನಲ್ಲಿ ಹಾಗೂ ಸ್ವಿಜರ್ಲ್ಯಾಂಡ್‌ನಲ್ಲಿ ಕಲಾ ಶಿಕ್ಷಣ ಮುಗಿಸಿ, ನಂತರ ಅದೇ ಕಾಲೇಜಿನಲ್ಲಿ ಉಪನ್ಯಾಸಕಿ, ಪ್ರಾಚಾರ್ಯರಾಗಿ ಕರ್ನಾಟಕ ಕಲಾ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಮತ್ತೊಂದೆಡೆ ಮುಖವೀಣೆ ಅಂಜನಪ್ಪ ಅವರು ಜನಪದ ಪ್ರಕಾರದ ಮುಖವೀಣೆ ವಾದನವನ್ನು ಶಾಸ್ತ್ರೀಯವಾಗಿ ನುಡಿಸುವ ಮೂಲಕ ಜಾನಪದ ವಾದ್ಯಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿಕೊಟ್ಟಿದ್ದಾರೆ. ಏಕಕಾಲದಲ್ಲಿ ಐದು ವಾದನಗಳನ್ನು ನುಡಿಸುವ ಮೂಲಕ ಮಂತ್ರಮುಗ್ಧರನ್ನಾಗಿಸಿದ್ದಾರೆ. ಇಂತಹ ಇಬ್ಬರು ಕಲಾವಿದರಿಗೆ ಈ ಬಾರಿಯ ಪಿಆರ್‌ಟಿ ಕಲಾ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಸಿ.ಮಹದೇವಶೆಟ್ಟಿ, ಹೆಚ್.ಆರ್.ಚಂದ್ರಶೇಖರಯ್ಯ ಉಪಸ್ಥಿತರಿದ್ದರು.

ಎಲ್‌ಐಸಿ ಸಾಧಕ ಮಹಿಳಾ ಪ್ರತಿನಿಧಿಗಳ ಸಮಾವೇಶ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಭಾರತೀಯ ಜೀವ ವಿಮಾ ನಿಗಮದ ಸಾಧಕ ಮಹಿಳಾ ಪ್ರತಿನಿಧಿಗಳ ಸಮಾವೇಶವನ್ನು ಮೈಸೂರು ಮೆಡಿಕಲ್ ಕಾಲೇಜಿನ ಬಯೋ ಕೆಮಿಸ್ಟ್ರಿ ಪ್ರೊಫೆಸರ್ ಹಾಗೂ ಅಲೈಡ್ ಹೆಲ್ತ್ ಸೈನ್ಸ್‌ನ ಪ್ರಾಂಶುಪಾಲರಾದ ಡಾ.ಎಸ್.ಮೀರಾ ಉದ್ಘಾಟಿಸಿದರು. ಭಾರತೀಯ ಜೀವ ವಿಮಾ ನಿಗಮದ ಹಿರಿಯ ವಿಭಾಗಾಧಿಕಾರಿ ಕೃಷ್ಣವೇಣಿ, ಎಲ್‌ಐಸಿ ಹಿರಿಯ ಅಧಿಕಾರಿಗಳು ಹಾಜರಿದ್ದರು.

ರಾಜ್ಯ ಮಟ್ಟದ ಬ್ಯಾಸ್ಕೆಟ್ಬಾಲ್ ಚಾಂಪಿಯನ್‌ಶಿಪ್‌ಗೆ ಆಯ್ಕೆ



ಮೈಸೂರು: ಕೆಬಿಸಿ ಕ್ಲಬ್‌ನ ಉದಯೋನ್ಮುಖ ಆಟಗಾರ ರೆನಿಷ್ ಮ್ಯಾಥ್ಯೂ ಬಾಲಕರ ಹದಿನಾರು ವಯಸ್ಸಿನೊಳಗಿನ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್ ಶಿಪ್‌ಗೆ ಆಯ್ಕೆಯಾಗಿದ್ದಾನೆ. ಈತ ಈಗಾಗಲೇ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಈತ ಶ್ರೀರಾಂಪುರದ ಸೆಂಟ್ ರೊಸೆಲೊ ಸೆಂಟ್ರಲ್ ಶಾಲೆಯ ವಿದ್ಯಾರ್ಥಿಯಾಗಿದ್ದಾನೆ.

ನಿಧನ



ವಿ.ಎಸ್.ಶೇಷಾದ್ರಿ

ಮೈಸೂರು, ಮಾ. 12– ರಾಜ್ಯ ಸರ್ಕಾರಿ ನೌಕರರ ಸಂಘ, ಮೈಸೂರು ಜಿಲ್ಲೆಯ ಮಾಜಿ ಕಾರ್ಯದರ್ಶಿ ಮತ್ತು ಮೈಸೂರಿನ ಜೆ.ಪಿ.ನಗರ 2ನೇ ಹಂತ, ಡಿ ಬ್ಲಾಕ್, 2ನೇ ಮುಖ್ಯ ರಸ್ತೆ, ಮನೆ ನಂ.221ರ ನಿವಾಸಿ ವಿ.ಎಸ್.ಶೇಷಾದ್ರಿ ನಿನ್ನೆ (ಮಾ.11) ನಿಧನರಾದರು. ಮೃತರು ಪತ್ನಿ ಸರಸ್ವತಿ ಶೇಷಾದ್ರಿ, ಪುತ್ರಿ ಸೌಮ್ಯ, ಅಳಿಯ ಶರತ್, ಪುತ್ರ ರಾಜೇಶ್, ಸೊಸೆ ಉಮಾ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಾಳೆ (ಮಾ.13) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆತ್ಮವಿಶ್ವಾಸ, ನೆನಪಿನ ಶಕ್ತಿ, ಪರೀಕ್ಷೆ ತಂತ್ರಗಾರಿಕೆಯಿಂದ ಗೆಲುವು ನಿಶ್ಚಿತ

ಪರೀಕ್ಷಾ ತರಬೇತಿ ಶಿಬಿರಾರ್ಥಿಗಳಿಗೆ ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಸಲಹೆ

ಮೈಸೂರು, ಮಾ.12(ಜಿಎ)–ಆತ್ಮವಿಶ್ವಾಸ, ಸಮಯಪಾಲನೆ, ನೆನಪಿನ ಶಕ್ತಿ, ಪರೀಕ್ಷೆ ಬರೆಯುವ ತಂತ್ರ ಕಲಿತರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗೆಲುವು ನಿಶ್ಚಿತ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಪರೀಕ್ಷಾ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಶುಭ ಹಾರೈಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವಾಗ ಆತಂಕ ಬಿಟ್ಟು, ಭರವಸೆ ಹೆಚ್ಚಿಸಿಕೊಳ್ಳಿ, ಏಕಾಗ್ರತೆ ಮತ್ತು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಎಂದರು.

ಪರೀಕ್ಷೆ ಬಗ್ಗೆ ತಿಳಿವಳಿಕೆ ಇರಬೇಕು. ಪಠ್ಯಕ್ರಮ, ಪರೀಕ್ಷೆ ಮಾದರಿ, ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳ ಅಧ್ಯಯನದ ಜೊತೆಗೆ ಪ್ರತಿನಿತ್ಯ ದಿನಪತ್ರಿಕೆ, ನಿಮ್ಮಿಷ್ಟದ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಿ. ಅಹಂಕಾರ ಬಿಡಿ, ಮಾನವೀಯತೆ ಬೆಳೆಸಿಕೊಳ್ಳಿ ಎಂದು ಹೇಳಿದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಪರೀಕ್ಷಾ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಡಾ.ಮಾಲತಿ ಪ್ರಿಯಾ, ಮುಕ್ತಭಂಡಾರ ಅಧ್ಯಯನ ಪುಸ್ತಕ ಬಿಡುಗಡೆಗೊಳಿಸಿದರು.

ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯಾ ಮುಕ್ತ ಭಂಡಾರ ಅಧ್ಯಯನ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಹೆಚ್ಚಬೇಕು. ಇಲ್ಲಿಯೂ ಸಹ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದೀರಾ, ಮಹಿಳೆಯರ ಶ್ರದ್ಧೆ ಮತ್ತು ನಿಷ್ಠೆ ಇಂದಿನ ಕೆಲಸಗಳಿಗೆ ತುಂಬಾ ಅನಿವಾರ್ಯವಾಗಿದೆ. ಮೊಬೈಲ್ ಗೀಳು ಯುವ ಸಮೂಹ ಹಾಗೂ ಸಮಾಜವನ್ನು ಹಾಳು ಮಾಡುತ್ತಿದೆ. ಸಮಯವೇ ಸಿಗುತ್ತಿಲ್ಲ ಎಂದು ಬೊಬ್ಬೆ ಹೊಡೆಯುವ ಜನರು ಮೊಬೈಲ್‌ನಲ್ಲಿ ರೀಲ್ಸ್ ಸ್ಕ್ರಾಲ್ ಮಾಡೊದು ಬಿಟ್ಟು ನೋಡಿ, ನಿಮ್ಮ ಸಮಯ ಎಲ್ಲಿ ಕಳೆದು ಹೋಗುತ್ತಿದೆ ಎಂದು ಗೊತ್ತಾಗುತ್ತದೆ. ಮುಖ್ಯವಾಗಿ ಯುವ ಸಮೂಹ ಮೊಬೈಲ್ ಗೀಳಿನಿಂದ ಹೊರಬಂದು ಪರಿಶ್ರಮಪಟ್ಟು ಅಧ್ಯಯನ ಮಾಡಬೇಕು ಎಂದು ತಿಳಿಸಿದರು.

ಕೆಎಸ್‌ಒಯು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಶಿಬಿರಾರ್ಥಿಗಳು ಸತತ ಪ್ರಯತ್ನ ಪಟ್ಟು ಅಧ್ಯಯನ ಮಾಡಬೇಕು. ನಿಮ್ಮ ನಿರಂತರ ಪ್ರಯತ್ನದಿಂದ ಎಲ್ಲವೂ ಸಾಧ್ಯ, ಗುರು–ಹಿರಿಯರು ಹಾಗೂ ಅನುಭವಿಗಳು ಹೇಳುವ ಅನುಭವಗಳನ್ನು ಚಾಚುತಪ್ಪದೆ ಪಾಲಿಸಬೇಕು. ಅರಿವೇ ಗುರು ಎನ್ನುವ ಹಾಗೆ ನಿಮ್ಮನ್ನು ನೀವೆ ಆತ್ಮಾವಲೋಕನ ಮಾಡಿಕೊಳ್ಳಿ. ಯಶಸ್ಸಿಗೆ ಗುರಿ ದೊಡ್ಡದಾಗಿರಲಿ. ಎಲ್ಲರೂ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಭವಿಷ್ಯದಲ್ಲಿ ದೇಶಕ್ಕೆ ಮಾದರಿಯಾಗುವ ಅಧಿಕಾರಿಗಳಾಗಿ ಎಂದು ಶುಭಹಾರೈಸಿದರು.

> "ಓದುವ ಸಮಯದಲ್ಲಿ ನಿಮ್ಮ ಸುತ್ತಮುತ್ತಲಿನ ಪರಿಸರ, ಜನ ಸಾಮಾನ್ಯರ ಸಮಸ್ಯೆ, ಜೈವಿಕ ಬದಲಾವಣೆಗಳ ಬಗ್ಗೆ ತಿಳಿದುಕೊಳ್ಳಿ, ಪ್ರತಿ ವರ್ಷದ ಪ್ರಶ್ನೆ ಪತ್ರಿಕೆ ತಾಳೆಹಾಕಿ ಜೊತೆಗೆ ಪ್ರತಿದಿನ ನಿಮ್ಮ ಶಬ್ದಕೋಶ ಹೆಚ್ಚಿಸಿಕೊಳ್ಳಿ. ಸಮಸ್ಯೆ ಎಂತದ್ದೆ ಇರಲಿ ಎದುರಿಸುವ ಧೈರ್ಯ ಬೆಳೆಸಿಕೊಳ್ಳಿ, ಪರೀಕ್ಷೆ ಬಗ್ಗೆ ಗಮನದ ಜೊತೆಗೆ ಕಣ್ಣಿನ ನೋಟ ಗುರಿಯ ಕಡೆ ಇರಲಿ. –ಶೇಖ್ ತನ್ವೀರ್ ಆಸೀಫ್

ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಪರೀಕ್ಷಾಂಗ ಕುಲಸಚಿವ ಹೆಚ್.ವಿಶ್ವನಾಥ್, ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಸಿದ್ದೇಶ್ ಹೊನ್ನೂರ್, ಬಿ.ಗಣೇಶ ಕೆ.ಜಿ.ಕೊಪ್ಪಲ್ ಉಪಸ್ಥಿತರಿದ್ದರು.

ಎಸ್.ಆರ್.ರವಿಕುಮಾರ್‌ಗೆ ಡಾ.ವಿಷ್ಣುವರ್ಧನ್ ಪ್ರಶಸ್ತಿ ಪ್ರದಾನ



ಶ್ರೀ ಆದಿಶಕ್ತಿ ಶೈಕ್ಷಣಿಕ, ಸಾಮಾಜಿಕ ಹಾಗೂ ಕಲಾ ಸಂಸ್ಥೆ ವತಿಯಿಂದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಮಾಜಿ ನಿರ್ದೇಶಕ ಎಸ್.ಆರ್.ರವಿಕುಮಾರ್ ಹಾಗೂ ಇನ್ನಿತರರಿಗೆ ಡಾ.ವಿಷ್ಣುವರ್ಧನ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ನರಸಿಂಹಲು, ಮಾಜಿ ಅಧ್ಯಕ್ಷ ಚಿನ್ನೇಗೌಡ, ನವಲಿ ಹಿರೇಮಠ್, ಟೆನ್ನಿಸ್ ಕೃಷ್ಣ, ಬೀರಾದರ್, ಮಿಮಿಕ್ರಿ ದಯಾನಂದ, ಚಂದ್ರು, ಸುಹಾಸ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.


ಮಾ.16, ಸಖಿ ಸಂಭ್ರಮ: ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು

ಮೈಸೂರು, ಮಾ. 12– ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರಿನ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮಾ. 16ರ ಭಾನುವಾರದಂದು ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 10ರಿಂದ ಕನ್ನಡ ಹಳೆಯ ಚಲನಚಿತ್ರ ಗೀತಗಾಯನ ಸ್ಪರ್ಧೆ (1980ಕ್ಕಿಂತ ಹಳೆಯದ್ದು), ಗಾದೆ ಮತ್ತು ಒಗಟುಗಳಿಗೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆ, ಹಣ್ಣು, ಹೂ, ಸೊಪ್ಪುಗಳಿಂದ ತಯಾರಿಸಿದ ದೇಸಿ ಪಾನೀಯ ಸ್ಪರ್ಧೆ (ಮನೆಯಿಂದಲೇ ಮಾಡಿ ತಂದು ಇಡುವುದು), ತರಕಾರಿಗಳಿಂದ ಮಾಡಲ್ಪಟ್ಟ ಬಜ್ಜಿ ಸ್ಪರ್ಧೆ (ಮನೆಯಿಂದಲೇ ತಯಾರಿಸಿಕೊಂಡು ಬರುವುದು), ಸಖಿಯರಿಬ್ಬರೂ ಸೇರಿ ಆಡುವ ದೋಸ್ತಿ ನಂಬರ್ 1 ಸ್ಪರ್ಧೆಗಳಿವೆ. ಪ್ರತೀ ಸ್ಪರ್ಧೆಗೂ ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ಹೀಗೆ ಸಂಗ್ರಹವಾದ ಶುಲ್ಕವನ್ನು ವಿದ್ಯಾನಿಧಿ ಯೋಜನೆ ಹಾಗೂ ಸಖಿ ಸ್ವಾವಲಂಬಿ ಯೋಜನೆಗಳಿಗೆ ವಿನಿಯೋಗಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರಿಗೆ 'ಸ್ಫೂರ್ತಿ ಸಖಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಎಲ್ಲಾ ಕಾರ್ಯಕ್ರಮಗಳು ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ಮಾಹಿತಿಗೆ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್, 9964790442, 8310306882 ಸಂಪರ್ಕಿಸಿ.

ತಂದೆ–ತಾಯಿ ಸಾಕದಿದ್ದರೆ ಆಸ್ತಿ ಇಲ್ಲ

- ಅವರ ಆರೈಕೆ ಮಾಡದೇ ಇದ್ದಲ್ಲಿ ಮಕ್ಕಳು, ಸಂಬಂಧಿಗಳಿಗೆ ಬರೆದ 'ವಿಲ್' ರದ್ದು
- ಹಿರಿಯ ನಾಗರಿಕರ ಸಂರಕ್ಷಣೆ ಪುನರುಚ್ಚರಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ



ಕೃಷ್ಣಬೈರೇಗೌಡ

ಬೆಂಗಳೂರು, ಮಾ.12(ಕೆಎಂಶಿ)– ತಂದೆ, ತಾಯಿ ಆರೈಕೆ ಮಾಡದ ಮಕ್ಕಳಿಗೆ ಅವರ ಆಸ್ತಿ ಧಕ್ಕಲ್ಲ. ಅವರು ತಮ್ಮ ಮಕ್ಕಳು ಇಲ್ಲವೆ ಸಂಬಂಧಿಕರಿಗೆ ಚರ–ಸ್ಥಿರ ಆಸ್ತಿ ಮರಣಶಾಸನ (ವಿಲ್) ಬರೆದಿದ್ದರೂ ಅದನ್ನು ರದ್ದು ಮಾಡುವ ಅವಕಾಶವನ್ನು ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ–2007 ನೀಡಿದೆ ಎಂದು ಸಚಿವ ಕೃಷ್ಣಬೈರೇಗೌಡ ವಿಧಾನ ಪರಿಷತ್‌ಗೆ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಸದಸ್ಯೆ ಬಲ್ಕೀಸ್ ಬಾನು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಇತ್ತೀಚಿನ ದಿನಗಳಲ್ಲಿ ಮಕ್ಕಳು ತಮ್ಮ ತಂದೆ ತಾಯಿಯ ಆರೈಕೆ ಮಾಡದ ಹಲವು ಪ್ರಕರಣಗಳು ಬೆಳಕಿಗೆ ಬಂದಿವೆ. ಆರೈಕೆ ಮಾಡದ ಮಕ್ಕಳು ಅಥವಾ ಸಂಬಂಧಿಕರ ಹೆಸರಿಗೆ ಅವರು ಮಾಡಿರುವ ವಿಲ್ ಅಥವಾ ದಾನ ಪತ್ರವನ್ನು ರದ್ದು ಮಾಡುವ ಅಧಿಕಾರ ಹಿರಿಯ ನಾಗರಿಕರಿಗೆ ಇದೆ ಎಂದರು.

ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ ಯನ್ನು 2007 ರಲ್ಲೇ ಜಾರಿಗೆ ತರಲಾಗಿದೆ, ಈ ಮಾಹಿತಿಯನ್ನು ಪರಿಣಾಮಕಾರಿಯಾಗಿ ಎಲ್ಲರಿಗೂ ತಲುಪಿಸಬೇಕು ಎಂಬ ಉದ್ದೇಶದಿಂದಲೇ ಪರಿಷತ್‌ನಲ್ಲಿ ಕಾಯ್ದೆ ಬಗ್ಗೆ ಉಲ್ಲೇಖಿಸುತ್ತಿದ್ದೇನೆ. ಕಾಯ್ದೆಯ ಪ್ರಕಾರ ಮಕ್ಕಳು ಅಥವಾ ಸಂಬಂಧಿಕರು ಹಿರಿಯ ನಾಗರಿಕರ ಆರೈಕೆ ಮಾಡಬೇಕು, ಔಷಧಿ ಸೇರಿದಂತೆ ಮಾಸಿಕ ಖರ್ಚಿಗೆ ಹಣ ನೀಡಬೇಕು, ತಪ್ಪಿದರೆ ಕಾಯ್ದೆಯ ವಿಧಿ–9ರಡಿ ಸಂಬಂಧಪಟ್ಟ ಅಧಿಕಾರಿಗಳ ಬಳಿ ದೂರು ಸಲ್ಲಿಸಬಹುದಾಗಿದೆ.

ದೂರು ಸಾಬೀತಾದರೆ, ಸೆಕ್ಷನ್ 23ರನ್ವಯ ಪೋಷಕರು ತಮ್ಮ ಮಕ್ಕಳ ಅಥವಾ ಸಂಬಂಧಿಕರ ಹೆಸರಿನಲ್ಲಿ ಬರೆದಿರುವ ವಿಲ್ ಅಥವಾ ದಾನಪತ್ರ ರದ್ದುಗೊಳಿಸಿ ಮತ್ತೆ ಪೋಷಕರ ಹೆಸರಿಗೇ ಮರುಸ್ಥಾಪಿಸಲು ಕಾನೂನಿನಲ್ಲಿ ಅವಕಾಶವಿದೆ. ಈ ಜವಾಬ್ದಾರಿಯನ್ನು ಉಪವಿಭಾಗಾಧಿಕಾರಿಗಳಿಗೆ ನೀಡಲಾಗಿದ್ದು, ಈಗಾಗಲೇ ಸಾವಿರಾರು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ ಎಂದರು.

ರನ್ಯಾ ರಾವ್ ವಿವಾಹ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಪರಮೇಶ್ವರ್ ಹಾಜರು

ಫೋಟೋ ಬಿಡುಗಡೆ ಮಾಡಿ ನಂಟಿನ ಬಗ್ಗೆ ಬಿಜೆಪಿ ಪ್ರಶ್ನೆ; ಇದೊಂದು ಬಿಜೆಪಿಯ ಗೇಮ್ ಪ್ಲ್ಯಾನ್

ಬೆಂಗಳೂರು, ಮಾ.12(ಕೆಎಂಶಿ)– ಚಿನ್ನ ಕಳ್ಳಸಾಗಣೆ ಪ್ರಕರಣದ ಆರೋಪಿ ರನ್ಯಾರಾವ್ ಮದುವೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇರುವ ಛಾಯಾಚಿತ್ರವನ್ನು ರಾಜ್ಯ ಬಿಜೆಪಿ ಬಿಡುಗಡೆ ಮಾಡಿರುವುದಕ್ಕೆ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇದು ಬಿಜೆಪಿ ಗೇಮ್‌ಪ್ಲ್ಯಾನ್ ಎಂದು ಟೀಕಿಸಿದ್ದಾರೆ.

ಮದುವೆ ಚಿತ್ರ ಸಮೇತ ಟ್ವೀಟ್ ಮಾಡಿರುವ ಬಿಜೆಪಿ, ಗೋಲ್ಡ್ ಸ್ಮಗ್ಲರ್ ರನ್ಯಾರಾವ್ ಜೊತೆ ನಂಟಿರುವ ಸಚಿವರು ಯಾರೆಂಬುದನ್ನು ಕರ್ನಾಟಕ ಕಾಂಗ್ರೆಸ್ ಬಹಿರಂಗಪಡಿಸುವುದೇ ಎಂದು ಪ್ರಶ್ನಿಸಿದೆ.


ಇದರ ಬಗ್ಗೆ ಸುದ್ದಿಗಾರರಲ್ಲಿ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷರು, ರನ್ಯಾರಾವ್ ಪ್ರಕರಣದಲ್ಲಿ ಸಚಿವರ ಕೈವಾಡ ಇದೆ ಎಂಬುದು ಕೇವಲ ಊಹಾಪೋಹ, ಇದು ಬಿಜೆಪಿಯ ಗೇಮ್‌ಪ್ಲ್ಯಾನ್ ಎಂದರು. ಯಾವ ಸಚಿವರ ಹೆಸರಿದೆ, ಯಾರಾದರೂ ನೋಡಿದ್ದಾರಾ, ಕೇಳಿದ್ದಾರಾ. ನಾವು ಮದುವೆ ಸೇರಿದಂತೆ ಶುಭ ಕಾರ್ಯಕ್ರಮಗಳಿಗೆ ಹೋಗುತ್ತಿರುತ್ತೇವೆ, ಅಲ್ಲಿ ಅನೇಕರು ನಮ್ಮ ಜತೆ ಫೋಟೋ ತೆಗೆಸಿಕೊಳ್ಳುತ್ತಾರೆ ಎಂದ ಡಿಸಿಎಂ ಡಿಕೆಶಿ, ಯಾರೋ ನನ್ನ ಪಕ್ಕ ಬಂದು ನಿಂತುಕೊಂಡ ತಕ್ಷಣ ನನಗೂ, ಅವರಿಗೂ ಸಂಬಂಧ ಇದೆ ಎಂದು ಭಾವಿಸಲು ಸಾಧ್ಯವೇ. ನಮ್ಮ ಜತೆ ಫೋಟೋ ತೆಗೆಸಿಕೊಂಡವರು ಅಪರಾಧ ಮಾಡಿದರೆ, ನಾವು ಅದಕ್ಕೆ ಬೆಂಬಲ ನೀಡಿದ್ದೇವೆ ಎಂದು ಹೇಳಲು ಸಾಧ್ಯವೇ, ಇನ್ನು ಸಚಿವರು ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಸ್ಪಷ್ಟ ಮಾಹಿತಿ ಇದ್ದರೆ ಚರ್ಚೆ ಮಾಡಿ ಎಂದು ಸವಾಲು ಹಾಕಿದರು.

ಅಪರಾಧ ಮಾಡುವಂತೆ ಯಾವ ಮಂತ್ರಿಯೂ ಬೆಂಬಲಿಸುವುದಿಲ್ಲ, ಈ ಪ್ರಕರಣದಲ್ಲಿ ಶಿಷ್ಟಾಚಾರ ಉಲ್ಲಂಘನೆ ಬಗ್ಗೆ ಮುಖ್ಯಮಂತ್ರಿ ಆಂತರಿಕ ತನಿಖೆಗೆ ಆದೇಶಿಸಿದ್ದಾರೆ.



ಗೋಲ್ಡ್ ಸ್ಮಗ್ಲಿಂಗ್ ಆರೋಪಿ ರನ್ಯಾ ರಾವ್ ವಿವಾಹ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ. ಜಿ.ಪರಮೇಶ್ವರ್ ಭಾಗವಹಿಸಿರುವುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.03.2025 ಗುರುವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025ರಿಂದ 16.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸಯಾಟಿಕ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ :** ಮೈಸೂರು ನಗರ ಹಳೇ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಗಿರಿಜಾಕಲ್ಯಾಣ ನಂತರ ಗಜಾರೋಹಣ, ಸ್ಥಳ: ದೇವಸ್ಥಾನದ ಪ್ರಾಂಗಣ, ಹಳೇ ಸಂತೇಪೇಟೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಸಹೃದಯ ಬಳಗ :** ಮ. ಸ್ವಾಮಿ ಕಪ್ಪಸೋಗೆ ಅವರ ಸೇರುವ ದಾರಿ ಕಾದಂಬರಿ ಬಿಡುಗಡೆ ಕಾರ್ಯಕ್ರಮ, ಕಾದಂಬರಿ ಬಿಡುಗಡೆ : ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್, ಕಾದಂಬರಿ ಕುರಿತು : ಚಿಂತಕ ಪ್ರೊ. ಸಿ. ನಾಗಣ್ಣ, ಅಧ್ಯಕ್ಷತೆ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಉಪಸ್ಥಿತರು : ಸಾಹಿತಿ ಡಾ. ಶಿವಕುಮಾರ್, ಮಹದೇವಸ್ವಾಮಿ ಕಪ್ಪಸೋಗೆ, ರಸಿಕ ಎಸ್. ಯಡಕೊಳ, ಅಮ್ಮ ರಾಮಚಂದ್ರ, ಸ್ಥಳ: ಕುವೆಂಪು ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ, ಕೇಂದ್ರ ಕಾರಾಗೃಹ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಶ್ರೀಮತಿ ನಾಗಲಕ್ಷ್ಮಿ ಚೌಧರಿ, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಶ್ರೀಮತಿ ಪುಷ್ಪಲತಾ ಟಿ.ಬಿ. ಚಿಕ್ಕಣ್ಣ, ಕು. ಭವ್ಯಾ ನರಸಿಂಹಮೂರ್ತಿ, ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಕಾರ್ಯದರ್ಶಿ ಶ್ರೀಮತಿ ಎಂ.ಜೆ. ರೂಪ, ಸ್ಥಳ: ಕೇಂದ್ರ ಕಾರಾಗೃಹ ಆವರಣ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ– ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ, ಪಿ.ಸುರಭಿ, ವ್ಯಾಖ್ಯಾನ–ಡಾ.ಲತಾ, ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ: ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿಯ ಲಕ್ಷ್ಮಮ್ಮ ಮತ್ತು ಸಂಗಡಿಗರಿಂದ ಕಾಲಭೈರವೇಶ್ವರನ ಹಾಡು ಮತ್ತು ದುರ್ಗಮ್ಮನ ಹಾಡು, 4.30 ರಸಮಂಜರಿ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ, ರೈತ ಉತ್ಪಾದಕ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತಿನ ಪಾಲನೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಬೆಂಗಳೂರಿನ ಆರ್ಥಿಕ ಸಲಹೆಗಾರರಾದ ಯೋಗೀಶ್ ಅಪ್ಪಾಜಯ್ಯ ಹಾಗೂ ಎಸ್.ಶ್ರೀಕಾಂತ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಯುವವಾಣಿ –ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯ ಸಂಬಂಧವಾಗಿ ಗ್ರಾಹಕರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಕುರಿತು ಮಾತುಕತೆ. ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆ ಚಿನಕುರಳಿಯ ಎಸ್.ಟಿ. ಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಆನಂದ, ರೂಫಾನ್ ಫಾಜಿಲ್, ಸೋನು. ಬಿ.ಕೆ, ಸಹನಾ.ಎಲ್.ಟಿ, ನಡೆಸಿಕೊಡುತ್ತಾರೆ–ಶ್ರಾವಣಿ ಗಿರೀಶ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ನಾಟಕ–ಕೊನೆ ಅರಿಯದ ಪಯಣ, ರಚನೆ–ಅಲಕಾ ಕಟ್ಟೆಮನೆ, ನಿರ್ಮಾಣ–ಶ್ರೀನಿವಾಸ ಪ್ರಸಾದ್, 10.30 ಸವಿನೆನಪು

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಕುವೆಂಪು ಕಾವ್ಯಾಧ್ಯಯನ ಪೀಠದ ವತಿಯಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ, ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಆರ್.ರಾಮಕೃಷ್ಣ ಅವರಿಂದ ಕಾನೂರು ಹೆಗ್ಗಡತಿ ಕಾದಂಬರಿ ಸ್ವರೂಪ ಕುರಿತು ಉಪನ್ಯಾಸ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ಎನ್.ಕೆ. ಲೋಲಾಕ್ಷಿ, ಸ್ಥಳ: ಕುವೆಂಪು ಚಿತ್ರಕೂಟ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಧ್ಯಾಹ್ನ 3ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ದೀಕ್ಷಿತ್ ಆರೋಗ್ಯಧಾಮ, ಆಯುರ್ವೇದ ಪಂಚಕರ್ಮ ಆಸ್ಪತ್ರೆ:** ಹೋಳಿ ಹುಣ್ಣಿಮೆಯ ಮಾಸದ ಆನಂದ ಆರೋಗ್ಯ ಕಾರ್ಯಕ್ರಮ, ಅವರ್ಣನೀಯ ಸುಗಮ ಸಂಗೀತ – ವಿದ್ವಾನ್ ನಿತಿನ್ ಆರ್. ಶಾಸ್ತ್ರಿ, ಕಲಾಶ್ರೀ ಗಣೇಶ್ ಭಟ್–ಕೀ ಬೋರ್ಡ್, ವಿದ್ವಾನ್ ರಮೇಶ್ ಧನ್ನೂರ್–ತಬಲ, ವಿದ್ವಾನ್ ಸುಜಯೇಂದ್ರ ರಾವ್–ರಿದಂ ಪ್ಯಾಡ್, ಡಾ.ಸಿ.ಎಸ್.ಅನಿಲ್‌ಕುಮಾರ್ ಅವರಿಂದ ವರ್ಣಶಂಕರ, ವರ್ಣ ಸಂಕರ – ಬಣ್ಣಗಳ ಬಣ್ಣನೆ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ಸಂಜೆ 6ಕ್ಕೆ.

ಪರಿಸರ ಸ್ನೇಹಿ ವಿವಾಹ ಮಹೋತ್ಸವ; ಪಾಲಿಕೆಯಿಂದ

ಹಸಿರು ವಿವಾಹ ಪ್ರಮಾಣಪತ್ರ ವಿತರಣೆ



ವಿವಾಹ ಮಹೋತ್ಸವದಲ್ಲಿ ಪಾಲಿಕೆ ಆಯುಕ್ತರು ನವ ಜೋಡಿಗೆ ಹಸಿರು ವಿವಾಹ ಪ್ರಮಾಣಪತ್ರ ನೀಡಿ ಅಭಿನಂದಿಸಿದರು.

ಮೈಸೂರು,ಮಾ.12(ಪಿಎಂ)– ಹಸಿರು ಶಿಷ್ಟಾಚಾರ ಅನುಷ್ಠಾನ ಮೂಲಕ ಪರಿಸರ ಸ್ನೇಹಿ ವಿವಾಹ ಮಹೋತ್ಸವದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ವಧು–ವರನಿಗೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಹಸಿರು ವಿವಾಹ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು.

ನಗರದ ಕನ್ವೆನ್ಷನ್ ಹಾಲ್‌ವೊಂದರಲ್ಲಿ ಬುಧವಾರ ಪರಿಸರ ಸ್ನೇಹಿ ಕ್ರಮಗಳೊಂದಿಗೆ ಆಯೋಜಿಸಿದ್ದ ವಿವಾಹ ಮಹೋತ್ಸವದಲ್ಲಿ ಸಪ್ತಪದಿ ತುಳಿದ ಎಂ.ಸಂಜನಾ ಮತ್ತು ಸಿ.ಎನ್.ಶಶಾಂಕ್ ಜೋಡಿಗೆ ಹಸಿರು ವಿವಾಹ ಪ್ರಮಾಣಪತ್ರ ನೀಡಲಾಯಿತು.

ಸದರಿ ಮದುವೆಯಲ್ಲಿ ತ್ಯಾಜ್ಯ ವಿಂಗಡಣೆ ಕೇಂದ್ರಗಳನ್ನು ಸ್ಥಾಪಿಸಿ, ಏಕ ಬಳಕೆಯ ಪ್ಲಾಸ್ಟಿಕ್ ನಿರ್ಬಂಧಿಸಲಾಗಿತ್ತು. ಮರುಬಳಕೆಯ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಅಲಂಕಾರಕ್ಕೆ ಮರುಬಳಕೆ ವಸ್ತುಗಳನ್ನು ಬಳಸಲಾಗಿತ್ತು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ವಿವಾಹ ಸಮಾರಂಭಕ್ಕೆ ಭೇಟಿ ನೀಡಿ, ವಧು–ವರನಿಗೆ ಹಸಿರು ವಿವಾಹ ಪ್ರಮಾಣ ಪತ್ರ ನೀಡಿ ಅಭಿನಂದಿಸಿದರು.

ಇದೇ ವೇಳೆ ಮಾತನಾಡಿದ ಅವರು, ಮೈಸೂರಿನ ಸುಸ್ಥಿರ ಬೆಳವಣಿಗೆಗೆ ಮಾದರಿಯಾದ ಈ ಪರಿಸರ ಸ್ನೇಹಿ ವಿವಾಹ ಮಹೋತ್ಸವ ಬೆಂಬಲಿಸಲು ಪಾಲಿಕೆ ಹೆಮ್ಮೆಪಡುತ್ತದೆ. ಇದು ನಮ್ಮ ಪರಿಸರ ಸಂರಕ್ಷಣೆ ಕುರಿತು ಹೆಚ್ಚುತ್ತಿರುವ ಜಾಗೃತಿ, ಜವಾಬ್ದಾರಿಯನ್ನು ಪ್ರತಿಬಿಂಬಿಸುತ್ತದೆ. ಇದು ಹೆಚ್ಚಿನ ನಾಗರಿಕರು ತಮ್ಮ ವಿವಿಧ ಸಮಾರಂಭಗಳಲ್ಲಿ ಪರಿಸರ ಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳಲು ಉತ್ತೇಜಿಸುತ್ತದೆ ಎಂದು ಭಾವಿಸುತ್ತೇನೆಂದು ತಿಳಿಸಿದರು.

ನಾಗರಿಕರು ತಮ್ಮ ದೈನಂದಿನ ಜೀವನದಲ್ಲಿ ಹಾಗೂ ವಿವಿಧ ಸಮಾರಂಭಗಳಲ್ಲಿ ಪರಿಸರ ಸ್ನೇಹಿ ಕ್ರಮಗಳನ್ನು ಅವಳಡಿಸಿಕೊಳ್ಳುವಂತೆ ಪಾಲಿಕೆಯು ಪ್ರೋತ್ಸಾಹಿಸಲಿದೆ ಎಂದು ಪಾಲಿಕೆ ಪ್ರಕಟಣೆ ತಿಳಿಸಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ವಿವಾಹದಲ್ಲಿ ಪ್ಲಾಸ್ಟಿಕ್ ಮುಕ್ತ ಸೇರಿದಂತೆ ಪರಿಸರ ಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಅವರು ಮುಂಗಡವಾಗಿ ಪಾಲಿಕೆಗೆ ಮಾಹಿತಿ ನೀಡಿದ್ದರು. ಇದಕ್ಕೆ ಉತ್ತೇಜಿಸಿದರೆ ನಾಗರಿಕರೂ ಅನುಸರಿಸಲು ಸಹಕಾರಿ ಎಂದು ಮನವಿ ಮಾಡಿದ್ದರು. ಹಾಗಾಗಿ ಪಾಲಿಕೆಯಿಂದ ಪ್ರಮಾಣಪತ್ರ ನೀಡಿ ಅಭಿನಂದಿಸಿದ್ದೇವೆ ಎಂದು ತಿಳಿಸಿದರು.

ಇದಕ್ಕೆ ಪ್ರತ್ಯೇಕ ಕಾರ್ಯಕ್ರಮ ಇಲ್ಲ. ಹಿಂದೆಯೂ ಇದೇ ರೀತಿ ಉತ್ತೇಜಿಸಲಾಗಿದೆ. ಮದುವೆ ಸೇರಿದಂತೆ ಯಾವುದೇ ಸಭೆ ಸಮಾರಂಭವಾದರೂ ಪರಿಸರ ಸ್ನೇಹಿ ಆಯೋಜನೆಯನ್ನು ಪಾಲಿಕೆ ಗುರುತಿಸಲಿದೆ. ಪಾಲಿಕೆಯ ಇಂಜಿನಿಯರ್ ನೇತೃತ್ವದ ತಂಡ ಸದರಿ ವಿವಾಹದಲ್ಲಿ ಪರಿಶೀಲನೆ ನಡೆಸಿ, ಪರಿಸರ ಸ್ನೇಹಿ ಎಂಬುದನ್ನು ಖಾತ್ರಿಪಡಿಸಿಕೊಂಡಿತು. ಈ ರೀತಿಯಲ್ಲಿ ನಿರಂತರವಾಗಿ ಉತ್ತೇಜಿಸಲು ಪಾಲಿಕೆಗೆ ಹೆಚ್ಚಿನ ಒತ್ತಡ ಆಗಬಹುದು. ಹಾಗಾಗಿ ಅರಿವು ಮೂಡಿಸುವ ದೃಷ್ಟಿಯಿಂದ ಆಗಾಗ್ಗೆ ಮಾಡಬಹುದು. ಒಟ್ಟಾರೆ ಪರಿಸರ ಸ್ನೇಹಿ ಕಾರ್ಯಕ್ರಮಗಳನ್ನು ಪಾಲಿಕೆ ಗುರುತಿಸಿ, ಉತ್ತೇಜಿಸಲಿದೆ ಎಂದು ಅವರು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಬಾಳೆಹಣ್ಣಿಗೆ ಎಷ್ಟು?
ಅಂಗಡಿಯಾತ : ಹತ್ತು ರೂಪಾಯಿ
ಗುಂಡ : ನಾಲ್ಕು ರೂಪಾಯಿಗೆ ಕೊಡು.
ಅಂಗಡಿಯಾತ : ನಾಲ್ಕು ರೂಪಾಯಿಗೆ ಸಿಪ್ಪೆ ಕೊಡ್ತೀನಿ ಅಷ್ಟೆ.
ಗುಂಡ : ಹಾಗಾದ್ರೆ, ತಗೋ ಆರು ರೂಪಾಯಿ, ಸಿಪ್ಪೆ ನೀನೇ ಇಟ್ಕೊಂಡು ಹಣ್ಣು ಕೊಡು.

ಮೈಸೂರು ಮಿತ್ರ

ಗುರುವಾರ, 13 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕೋಪ ಬರುವುದು ತಪ್ಪಲ್ಲ, ಅದು ಸುದೀರ್ಘ ಕಾಲ ಉಳಿಯಬಾರದು ಅಷ್ಟೇ. ಬೆಂಕಿಯಿಂದ ಮೈ ಚಳಿ ಕಾಯಿಸಿಕೊಳ್ಳಬೇಕು, ಅದರಲ್ಲೇ ಧುಮುಕಿ ಬಿಡುವುದಲ್ಲ!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೋದೆಯಾ ಪಿಶಾಚಿ ಅಂದರೆ, ಬಂದೇ ಗವಾಕ್ಷೀಲಿ ಅಂದ ಹಾಗೆ

ನಿಮ್ಮ ಪತ್ರಗಳು

■ ಮೈಸೂರು ಬೃಹತ್ ನಗರಪಾಲಿಕೆ ಮುಖ್ಯಮಂತ್ರಿಗಳ ಕನಸಿನ ಕೂಸು

ಮಾನ್ಯರೆ,

ರಾಜ್ಯದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರಗಳ ಪೈಕಿ ಮೈಸೂರು ನಗರ ಎರಡನೇ ಸ್ಥಾನದಲ್ಲಿದೆ. ಇಂತಹ ಸುಸಜ್ಜಿತ ನಗರವನ್ನು ಬೃಹತ್ ನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸುವ ರಾಜ್ಯ ಸರ್ಕಾರದ ನಡೆ ಹೆಮ್ಮೆಯ ಸಂಗತಿ. ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೂರದೃಷ್ಟಿಯ ಫಲವಾಗಿ ಈ ಯೋಜನೆ ತ್ವರಿತವಾಗಿ ಅನುಷ್ಠಾನಕ್ಕೆ ತರಲು ನಗರಾಭಿವೃದ್ಧಿ ಸಚಿವ ಬಿ.ಸುರೇಶ್ ಅವರು ಮುತುವರ್ಜಿ ವಹಿಸಿರುವುದು ಮೈಸೂರಿಗರ ಪಾಲಿಗೆ ಭಾಗ್ಯವೇ ಸರಿ.

ರಾಜ್ಯಾಡಳಿತ ವ್ಯವಸ್ಥೆಯ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮುಂದಾಲೋಚನೆಯಂತೆಯೇ, ಪ್ರಸ್ತುತ ನಾಡಿನ ಹೆಮ್ಮೆಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೂರದೃಷ್ಟಿತ್ವದ ಪರಿಣಾಮವೇ ಈ ಬೃಹತ್ ಮೈಸೂರು ಮಹಾನಗರಪಾಲಿಕೆ ಯೋಜನೆಯಾಗಿದೆ. ಇಂತಹ ಸಂದರ್ಭದಲ್ಲಿ ನಾಡಿನ ಮುಖ್ಯಮಂತ್ರಿಗಳಿಗೆ ಮೈಸೂರಿಗರು ಆಭಾರಿಯಾಗಲೇಬೇಕಿದೆ. ಮೈಸೂರು ನಗರ ಪಾಲಿಕೆಯನ್ನು ಬೃಹತ್ ನಗರಪಾಲಿಕೆಯಾಗಿ ಮಾಡುವ ಹೊತ್ತಿನಲ್ಲಿ ಅದಕ್ಕೆ ಪೂರಕವಾದ ಎಲ್ಲಾ ಯೋಜನೆಗಳು ಒಂದೇ ಹಂತದಲ್ಲಿ ಎಲ್ಲಾ ಅನುಷ್ಠಾನಗೊಂಡಲ್ಲಿ ಮೈಸೂರು ಸುಸಜ್ಜಿತ ನಗರವಾಗುವುದರಲ್ಲಿ ಯಾವುದೇ ರೀತಿಯ ಅನುಮಾನ ಇಲ್ಲ. ಆ ಯೋಜನೆಗಳನ್ನೂ ಕಾರ್ಯಗತಗೊಳಿಸಲು ಮುಖ್ಯಮಂತ್ರಿಗಳು ತಮ್ಮ ಅಧೀನ ಅಧಿಕಾರಿಗಳಿಗೆ ನಿರ್ದೇಶಿಸಬೇಕು ಎಂದು ಮನವಿ ಮಾಡುತ್ತೇನೆ.

ಮೈಸೂರು ನಗರ ಬೃಹತ್ ನಗರಪಾಲಿಕೆ ಆದಲ್ಲಿ ಅದಕ್ಕೆ ಪೂರಕವಾಗಿ ಪೊಲೀಸ್ ವ್ಯವಸ್ಥೆ, ಆರೋಗ್ಯ ಕೇಂದ್ರಗಳು, ಶಾಲೆಗಳು, ಕಸ ವಿಲೇವಾರಿ, ರಸ್ತೆಗಳ ನಿರ್ಮಾಣ, ಸಮರ್ಪಕ ವಿದ್ಯುತ್ ವ್ಯವಸ್ಥೆ, ಕುಡಿಯುವ ನೀರಿಗಾಗಿ ಕಾವೇರಿ ಹಾಗೂ ಕಬಿನಿ ನೀರಿನ ಜಾಲ ವಿಸ್ತರಣೆ, ನಗರ ಸಾರಿಗೆ ವ್ಯವಸ್ಥೆ, ಭವಿಷ್ಯದ ದೃಷ್ಟಿಯಿಂದ ಮೆಟ್ರೋ ಯೋಜನೆ ಸೇರಿದಂತೆ ಪೂರಕವಾದ ಯೋಜನೆಗಳನ್ನು ಏಕಕಾಲದಲ್ಲಿ ಅನುಷ್ಠಾನಕ್ಕೆ ತರಬೇಕು ಎಂದು ಕೋರುತ್ತೇನೆ.

ಮೈಸೂರು ನಗರದ ಹೊರಭಾಗದಲ್ಲಿರುವ ಹೊಸ ಬಡಾವಣೆಗಳಲ್ಲಿ ನೂರಾರು ಸಂಖ್ಯೆಯಲ್ಲಿ ಸಿಎ ನಿವೇಶನಗಳಿದ್ದು, ಅವುಗಳ ಸಮರ್ಪಕ ಬಳಕೆ ಆಗಬೇಕಿದೆ. ಮಾತ್ರವಲ್ಲ, ಕಂದಾಯ ನಿವೇಶನಗಳಲ್ಲಿ ನೆಲೆಸಿರುವವರ ಬವಣೆಗಳನ್ನೂ ಈಡೇರಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕಿದೆ. ಎರಡನೇ ಬಾರಿಗೆ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿರುವ ಸಿದ್ದರಾಮಯ್ಯ ಅವರ ಪಾಲಿಗೆ ಬೃಹತ್ ಮೈಸೂರು ಮಹಾನಗರ ಪಾಲಿಕೆ ಯೋಜನೆ ಎಂಬುದು ಕನಸಿನ ಯೋಜನೆ ಆಗಿದ್ದು, ಮೈಸೂರಿನ ಪಾಲಿಗೆ ಹೆಗ್ಗುರುತೇ ಆಗಿದೆ. ಈ ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಮೈಸೂರಿಗರು ಸರ್ಕಾರದೊಂದಿಗೆ ಕೈಜೋಡಿಸುವ ಮೂಲಕ ಬೃಹತ್ ಯೋಜನೆಯೊಂದರ ಸಮರ್ಪಕ ಅನುಷ್ಠಾನಕ್ಕೆ ನೆರವಾಗಬೇಕೆಂದು ಮನವಿ ಮಾಡುತ್ತೇನೆ.

–ಕೆ.ವಿ. ಮಲ್ಲೇಶ್, ನಗರಪಾಲಿಕೆ ಮಾಜಿ ಸದಸ್ಯ, ಮೈಸೂರು.

■ ಮೈಸೂರಿನಲ್ಲಿ ಹೊಸ ಬಸ್ ನಿಲ್ದಾಣವನ್ನು ಎಲ್ಲಿ ಮಾಡಬೇಕು?



ಮಾನ್ಯರೆ,

ಅನುಕೂಲ ಹಾಗೂ ಅನಾನುಕೂಲಗಳನ್ನು ಪರಿಶೀಲಿಸದೆ ಸಾರ್ವಜನಿಕರ ಅಭಿಪ್ರಾಯಗಳನ್ನು ಕ್ರೋಢೀಕರಿಸದೆ ಮಹಾಯೋಜನೆಯೊಂದು ಮೈಸೂರಿಗೆ ಬರುತ್ತಿದೆ ಎಂದರೆ ಅದು ಬನ್ನಿಮಂಟಪ ಬಸ್‌ನಿಲ್ದಾಣ. ಈ ಕುರಿತು ವಿಭಿನ್ನ ಅಭಿಪ್ರಾಯಗಳು ಸುದ್ದಿ ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿವೆ. ಯಾವುದೇ ಒಂದು ದೊಡ್ಡ ಯೋಜನೆಯು ಅನುಷ್ಠಾನ ಆಗುವ ಮೊದಲು ವಿಸ್ತೃತ ಯೋಜನಾ ವರದಿಯ(ಡಿಪಿಆರ್) ಹಂತದಲ್ಲಿ ಸಾರ್ವಜನಿಕರೊಟ್ಟಿಗೆ ಹಲವು ಸಭೆಗಳನ್ನು ನಡೆಸಿ ಅವರ ಅಭಿಪ್ರಾಯಗಳನ್ನು ಪರಿಗಣಿಸಿ ಬಹುಜನರು ಒಪ್ಪುವಂತಹ ಅಂಶಗಳನ್ನು ಅಳವಡಿಸಿಕೊಂಡು ವಿಶೇಷವಾಗಿ ಸ್ಥಳ ನಿಗದಿಗೆ ಒತ್ತುಕೊಟ್ಟು ಕಾರ್ಯಗತಗೊಳಿಸುವುದು ಸೂಕ್ತ.

'ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು' ಎಂಬಂತಾಗಿದೆ ನೂತನ ಬಸ್ ನಿಲ್ದಾಣ ಯೋಜನೆಯ ಸ್ಥಿತಿ. ಅನುದಾನವನ್ನು ಸರ್ಕಾರ ಕೊಟ್ಟಿದೆ. ಬನ್ನಿಮಂಟಪದ ಬಳಿ ಜಾಗವಿದೆ ಅಲ್ಲೇ ಕಟ್ಟಿ ಎಂದಿದ್ದಾರೆ ಪುಣ್ಯಾತ್ಮರು. ಎಲ್ಲಾ ಬಡಾವಣೆಯ ಜನರು ಹಾಲಿ ಇರುವ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿದ್ದಾರೆ. ಇದು ನಗರದ ಕೇಂದ್ರ ಭಾಗದಲ್ಲಿ ಇದ್ದು, ರೈಲು ನಿಲ್ದಾಣ, ವ್ಯಾಪಾರ ಸ್ಥಳಗಳಾದ ದೇವರಾಜ ಮಾರುಕಟ್ಟೆ, ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ. ಅರಮನೆ, ತಾಲೂಕು ಮತ್ತು ಜಿಲ್ಲಾಧಿಕಾರಿಗಳ ಕಚೇರಿಗೆ ಸಮೀಪವಿದೆ. ಹಾಗಾಗಿ ಇರುವ ಬಸ್ ನಿಲ್ದಾಣವನ್ನು ಕೆಡವಿ ನಡುವೆ ಇರುವ ರಸ್ತೆಯನ್ನು ಸೇರಿಸಿಕೊಂಡು ತಾಲೂಕು ಕಚೇರಿಯವರೆಗೆ ಇರುವ ಉದ್ಯಾನವನ ಮತ್ತು ಸರ್ಕಾರಿ ಗೆಸ್ಟ್‌ಹೌಸ್‌ನ ಭಾಗಶಃ ಜಾಗವನ್ನು ಆಕ್ರಮಿಸಿಕೊಂಡು, ಶಾಲಾ ಕಾಲೇಜುಗಳನ್ನು ಸ್ಥಳಾಂತರಿಸಿ ನಿರ್ಮಿಸುವುದು ಸೂಕ್ತ. ಮತ್ತೊಂದು ಪರ್ಯಾಯ ಸ್ಥಳವೆಂದರೆ ಜೆಕೆ ಗ್ರೌಂಡ್, ಈ ಎರಡು ಸ್ಥಳಗಳಲ್ಲಿ ಎಲ್ಲಿ ಮಾಡಿದರೂ ದಸರಾ ಜಂಬೂಸವಾರಿಗೂ ತೊಂದರೆ ಆಗುವುದಿಲ್ಲ ಹಾಗೂ ಪ್ರವಾಸಿಗರಿಗೆ ಮತ್ತು ಮೈಸೂರಿಗರಿಗೆ ಎಲ್ಲಾ ದೃಷ್ಟಿಯಿಂದಲೂ ಬಹಳವೇ ಉಪಯುಕ್ತವಾಗುವುದು.

ಈಗಾಗಲೇ ಟೆಂಡರ್ ಹಂತದಲ್ಲಿ ಇರುವ ಯೋಜನೆಯನ್ನು ಸ್ಥಗಿತಗೊಳಿಸಿ, ಕಟ್ಟಡದ ಮೇಲೆ ಗುಂಬಜ್‌ಗಳನ್ನು ಇಡುವ ಬದಲು ಆಧುನಿಕ ಶೈಲಿಯ ವಿನ್ಯಾಸದೊಂದಿಗೆ ಸಮಗ್ರವಾಗಿ ನಗರ ಯೋಜನೆಯ ತಜ್ಞರು ಹಾಗೂ ಚಿಂತಕರ ಸಲಹೆಗಳನ್ನು ಪಡೆದು ಮುಂದುವರಿಯುವುದು ಸೂಕ್ತ. ಇಲ್ಲವಾದಲ್ಲಿ ನಿತ್ಯವೂ ನಾಗರಿಕರ ಶಾಪಕ್ಕೆ ತುತ್ತಾಗಬೇಕಾಗುತ್ತದೆ. ಈಗಾಗಲೇ ನೂತನ ಜಿಲ್ಲಾಧಿಕಾರಿಯವರ ಕಚೇರಿ ಕಟ್ಟಡದ ವಿನ್ಯಾಸ ಹಾಗೂ ಸ್ಥಳದ ಆಯ್ಕೆಯಲ್ಲಿ ವೈಫಲ್ಯವಾಗಿರುವ ಬಗ್ಗೆ ಜನರು ನಿಂದಿಸುತ್ತಿರುವುದನ್ನು ಕೇಳುತ್ತಿದ್ದೇವೆ. ಇದು ಮತ್ತೊಂದು ಆಗುವುದು ಬೇಡ. ವಿಳಂಬವಾದರೂ ಪರವಾಗಿಲ್ಲ, ರೂಪಿಸುವ ಯೋಜನೆ ಉತ್ತಮವಾಗಿರಲಿ ಮತ್ತು ಮುಂದಿನ ಐವತ್ತು ವರ್ಷ ಬಳಕೆಗೆ ಯೋಗ್ಯವಾಗಿರುವಂತಿರಲಿ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್,
OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ವಿಶ್ವ ಆರೋಗ್ಯ ಸಂಸ್ಥೆಯಿಂದ ಅಮೆರಿಕ ನಿರ್ಗಮನ!





ಡೊನಾಲ್ಡ್ ಟ್ರಂಪ್

ಇತ್ತೀಚಿನ ಕೆಲವು ದಿನಗಳಿಂದ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯೂಹೆಚ್‌ಓ) ಭಾರಿ ಸುದ್ದಿಯಲ್ಲಿದೆ. ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಡೊನಾಲ್ಡ್ ಟ್ರಂಪ್ ಅವರು ಡಬ್ಲ್ಯೂಹೆಚ್‌ಓಗೆ ಭಾರಿ ಹೊಡೆತ ನೀಡಿದ್ದಾರೆ. ಟ್ರಂಪ್, ಆಡಳಿತಾತ್ಮಕ ಆದೇಶದ ಮೂಲಕ ಡಬ್ಲ್ಯೂಹೆಚ್‌ಓಗೆ ಅಮೆರಿಕ ನೀಡುತ್ತಿದ್ದ ದೇಣಿಗೆಗಳು, ಸಹಾಯಧನಗಳನ್ನು ಸ್ಥಗಿತಗೊಳಿಸಿದ್ದಾರೆ. ಇದರಿಂದ ಡಬ್ಲ್ಯೂಹೆಚ್‌ಓನ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಲಿದೆ. ಡಬ್ಲ್ಯೂಹೆಚ್‌ಓಗೆ ಅಮೆರಿಕವು ದೊಡ್ಡ ಮೊತ್ತದ ದೇಣಿಗೆ ನೀಡುವ ದೇಶವಾಗಿದೆ. ಕಳೆದ ದಶಕದಲ್ಲಿ ಅಮೆರಿಕವು ಡಬ್ಲ್ಯೂಹೆಚ್‌ಓಗೆ 160 ಮಿಲಿಯನ್ ಡಾಲರ್‌ನಿಂದ 815 ಮಿಲಿಯನ್ ಡಾಲರ್‌ವರೆಗೆ ಪ್ರತಿ ವರ್ಷ ದೇಣಿಗೆ ನೀಡಿತ್ತು. ವಿಶ್ವ ಆರೋಗ್ಯ ಸಂಸ್ಥೆಯ ವಾರ್ಷಿಕ ಬಜೆಟ್ ಗಾತ್ರ 2ರಿಂದ 3 ಬಿಲಿಯನ್ ಡಾಲರ್‌ನಷ್ಟಿದೆ. ಡಬ್ಲ್ಯೂಹೆಚ್‌ಓಗೆ ಬರುವ ದೇಣಿಗೆಯಲ್ಲಿ ಶೇ.13ರಷ್ಟು ಅಮೆರಿಕವೇ ನೀಡುತ್ತಿತ್ತು. 2023ರಲ್ಲಿ ಅಮೆರಿಕವು ಸುಮಾರು ಶೇ.22.5ರಷ್ಟು ದೇಣಿಗೆ ನೀಡಿದೆ. ವಿಶ್ವ ಮಟ್ಟದಲ್ಲಿ ನೈರ್ಮಲ್ಯ, ಕಾಪಾಡುವುದು, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು, ಜಾಗತಿಕವಾಗಿ ಜನಸಾಮಾನ್ಯರ ಆರೋಗ್ಯದ ಬಗ್ಗೆ ಕಾಳಜಿ, ಅಗತ್ಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶಗಳಿಗಾಗಿ ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪಿಸಲಾಯಿತು.

ವಿಶ್ವ ಆರೋಗ್ಯ ಸಂಸ್ಥೆಯ ಉದ್ದೇಶ

ವಿಶ್ವ ಆರೋಗ್ಯ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಆರೋಗ್ಯ ಸಮಸ್ಯೆಗಳನ್ನು ಪರಿಶೀಲಿಸುವ, ಪರಿಹರಿಸುವ ವಿಶ್ವಸಂಸ್ಥೆಯ ವಿಶೇಷ ಅಂಗ ಸಂಸ್ಥೆಯಾಗಿದೆ. ದಿನಾಂಕ 07.04.1948ರಂದು ಸ್ಥಾಪನೆಯಾದ ಈ ಸಂಸ್ಥೆಯ ಪ್ರಧಾನ ಕಚೇರಿ ಸ್ವಿಟ್ಜರ್ಲೆಂಡ್‌ನ ಜಿನೇವಾ ನಗರದಲ್ಲಿದೆ. ಈ ಸಂಸ್ಥೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆರೋಗ್ಯ ಸಂಬಂಧಿ ಕಾರ್ಯಗಳನ್ನು ನಿರ್ದೇಶಿಸುವ, ಸಮನ್ವಯ ಸಾಧಿಸುವ ಉದ್ದೇಶ ಹೊಂದಿದೆ. ಸರಕಾರಗಳ ಕೋರಿಕೆ ಮೇರೆಗೆ ದೇಶಗಳ ಆರೋಗ್ಯ ಸೇವೆಗಳನ್ನು ಬಲಪಡಿಸುವಲ್ಲಿ ಸಹಕಾರ, ಸೂಕ್ತ ತಾಂತ್ರಿಕ ಹಾಗೂ ಅಗತ್ಯ ನೆರವು ನೀಡುವುದು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಹಾಗೂ ಲಿಂಗಭೇದವಿಲ್ಲದೆ ಎಲ್ಲರಿಗೂ ಸ್ವಾಸ್ಥ್ಯ ಸೌಲಭ್ಯ ನೀಡಲು ಶ್ರಮಿಸುವುದು ಆರೋಗ್ಯಕರ ಪರಿಸರಕ್ಕಾಗಿ ಜನರ ಜೀವನ ವಿಧಾನಗಳ ಮೇಲೆ ಪ್ರಭಾವ ಬೀರುವುದು ಇದರ ಪ್ರಮುಖ ಧ್ಯೇಯ.

ವಿಶ್ವ ಆರೋಗ್ಯ ಸಂಸ್ಥೆಯ ಕೊಡುಗೆ

ವಿಶ್ವ ಆರೋಗ್ಯ ಸಂಸ್ಥೆಯ ಸತತ ಯತ್ನದ ನಂತರ 1980ರಲ್ಲಿ ಜಗತ್ತಿನಿಂದ ಸಿಡುಬು ರೋಗ ನಿರ್ಮೂಲನವಾಯಿತು. ಪೋಲಿಯೋ ನಿರ್ಮೂಲನೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ನಿರ್ಣಾಯಕ ಹಾಗೂ ಯಶಸ್ವಿ ಪಾತ್ರ ನಿರ್ವಹಿಸಿದೆ. 1988ರಿಂದ ಪೋಲಿಯೋ ಪ್ರಕರಣಗಳು ಶೇ.99ರಷ್ಟು ಕಡಿಮೆಯಾಗಿದೆ. ಧಾರ್ಮಿಕ ಕಾರಣದಿಂದ ಪೋಲಿಯೋ ಹನಿಗಳ ಮೇಲಿನ ಅಪನಂಬಿಕೆಯಿಂದ ಹನಿಗಳನ್ನು ತಿರಸ್ಕರಿಸುತ್ತಿರುವ ಪಾಕಿಸ್ತಾನ, ನೈಜೀರಿಯಾ ಹಾಗೂ ಅಫ್ಘಾನಿಸ್ತಾನ್‌ಗಳು ಈಗಲೂ ಪೋಲಿಯೋದಿಂದ ಬಳಲುತ್ತಿವೆ. ಜಗತ್ತಿನಲ್ಲಿ 21.50 ಕೋಟಿ ಜನರು ಮಲೇರಿಯಾದಿಂದ ಬಳಲುತ್ತಿದ್ದಾರೆ. ಇದರಲ್ಲಿ ಆಫ್ರಿಕಾದಲ್ಲೇ ಶೇ.90ರಷ್ಟು ಮಲೇರಿಯಾ ಪ್ರಕರಣಗಳು ಹಾಗೂ ಸಾವುಗಳು ದಾಖಲಾಗಿವೆ. ಈ ಪ್ರದೇಶದಲ್ಲಿ 2018ರಲ್ಲಿ ಮಲೇರಿಯಾದಿಂದ ಸಾವಿನ ಪ್ರಮಾಣ ಶೇ.60ರಷ್ಟು ಕಡಿಮೆಯಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯು ಇತ್ತೀಚಿನ ವರ್ಷಗಳಲ್ಲಿ ಹೆಚ್‌ಐವಿ, ಮಲೇರಿಯಾ, ಶೀತಜ್ವರ, ಕ್ಷಯ ಮತ್ತು ಎಬೋಲಾದಂತಹ ಸಾಂಕ್ರಾಮಿಕ ರೋಗಗಳ ಮೇಲೆ ಗಮನ ಕೇಂದ್ರೀಕರಿಸಿದೆ. ಪಾಲನೆ ಪೋಷಣೆಗಳಿಗೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯು ಮಾತೃತ್ವ, ಶಿಶು ಆರೋಗ್ಯ, ವೃದ್ಧರ ಆರೈಕೆ ಹಾಗೂ ಎಲ್ಲರಿಗೂ ಆಹಾರ, ಆರೋಗ್ಯ ಮತ್ತು ಶುದ್ಧ ನೀರು ನೀಡುವುದಕ್ಕೆ ಶ್ರಮಿಸುತ್ತಿದೆ. 2003ರಲ್ಲಿ ತೀವ್ರ ತರದ ಉಸಿರಾಟದ ಸಮಸ್ಯೆ ಉಂಟು ಮಾಡುತ್ತಿದ್ದ ಉಸಿರಾಟದ ಸಿಂಡ್ರೋಮ್ SARS ಸಾಂಕ್ರಾಮಿಕ ರೋಗದ ಸಮಯದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ವಿಶ್ವಾದ್ಯಂತ ಕಾಳಜಿಯಿಂದ ಕಾರ್ಯನಿರ್ವಹಿಸಿತು. ಮಕ್ಕಳಿಗಾಗಿ ಆಯೋಜಿಸಲಾಗುತ್ತಿದ್ದ ವಿವಿಧ ವ್ಯಾಕ್ಸಿನೇಷನ್ ಕಾರ್ಯಕ್ರಮಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಭಾರಿ ಯಶಸ್ಸು ಗಳಿಸಿ ಮಿಲಿಯಾಂತರ ಮಕ್ಕಳ ಪ್ರಾಣ ರಕ್ಷಿಸುವಲ್ಲಿ ಯಶಸ್ಸು ಗಳಿಸಿದೆ.

1977ರಿಂದ ವಿಶ್ವ ಆರೋಗ್ಯ ಸಂಸ್ಥೆಯು ಜೀವ ರಕ್ಷಕ ಔಷಧಿಗಳ ಪಟ್ಟಿಯನ್ನು ನಿರ್ವಹಿಸುತ್ತಿದೆ. ಇವುಗಳನ್ನು ಆಸ್ಪತ್ರೆಗಳಲ್ಲಿ ದಾಸ್ತಾನು ಇಡಲು ಪ್ರೋತ್ಸಾಹಿಸುತ್ತಿದೆ. ಅದೇ ರೀತಿ ವೆಂಟಿಲೇಟರ್‌ಗಳು, ಎಕ್ಸ್–ರೇ ಮೊದಲಾದ ಸಾಧನಗಳ ಬಗ್ಗೆ ಸಂಸ್ಥೆಯು ಆಗ್ರಹಿಸುತ್ತಿದೆ. ಈ ರೀತಿ ಸ್ವಸ್ಥ ಜಗತ್ತಿಗಾಗಿ ಕಾರ್ಯನಿರ್ವಹಿಸುತ್ತಿರುವ ವಿಶ್ವ ಆರೋಗ್ಯ ಸಂಸ್ಥೆಗೆ ಅಮೆರಿಕ ದೇಣಿಗೆ ನೀಡುವುದನ್ನು ಸ್ಥಗಿತಗೊಳಿಸಿರುವುದರಿಂದ ಸಂಕಷ್ಟಕ್ಕೀಡಾಗಿದೆ. ಅಮೆರಿಕ ಅಧ್ಯಕ್ಷರಾದ ಟ್ರಂಪ್ ಈ ಆದೇಶ ಹೊರಡಿಸಿರುವುದರ ಹಿನ್ನೆಲೆಯನ್ನು ಪರಾಮರ್ಶಿಸಬೇಕಾಗಿದೆ.

ಟ್ರಂಪ್ ಆದೇಶದ ಹಿನ್ನೆಲೆ ಮತ್ತು ಪರಿಣಾಮಗಳು

ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಚೀನಾದ ಕೈಗೊಂಬೆ ಎಂದು ದೂರಿದ್ದರು. ಟ್ರಂಪ್ ತಮ್ಮ ಮೊದಲ ಅವಧಿಯ ಅಂತಿಮ ಹಂತದಲ್ಲಿ ಜುಲೈ 2020ರಂದು ವಿಶ್ವ ಆರೋಗ್ಯ ಸಂಸ್ಥೆಯಿಂದ ನಿರ್ಗಮಿಸುವುದಾಗಿ ನೋಟೀಸು ನೀಡಿದ್ದರು. ಆದರೆ ವಿಶ್ವ ಆರೋಗ್ಯ ಸಂಸ್ಥೆಗೆ ಒಂದು ವರ್ಷದ ಮೊದಲೇ ತಿಳಿಸಬೇಕಾಗಿತ್ತು. 2020ರಲ್ಲಿ ಟ್ರಂಪ್ ಪರಾಜಿತರಾದರು. ಆ ನಂತರ ಅಧ್ಯಕ್ಷರಾದ ಜೋ ಬೈಡನ್‌ರು ಈ ಆದೇಶ ಹಿಂದಕ್ಕೆ ಪಡೆದಿದ್ದರು. ಈ ಬಾರಿ ತಮ್ಮ ಅಧಿಕಾರಾವಧಿಯ ಆರಂಭದಲ್ಲೇ ಟ್ರಂಪ್‌ರವರು ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರನಡೆಯುವ ಆದೇಶ ನೀಡಿದ್ದಾರೆ.

ಅಮೆರಿಕವು ವಿಶ್ವ ಆರೋಗ್ಯ ಸಂಸ್ಥೆಗೆ ಅತೀ ಹೆಚ್ಚು ದೇಣಿಗೆ ನೀಡುತ್ತಿದ್ದರೂ ಅಮೆರಿಕವನ್ನು ನಿರ್ಲಕ್ಷಿಸಿ ಚೀನಾಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ ಎಂಬುದು ಟ್ರಂಪ್‌ರ ಪ್ರಮುಖ ಆಕ್ಷೇಪವಾಗಿದೆ. 140 ಕೋಟಿ ಜನಸಂಖ್ಯೆ ಇರುವ ಚೀನಾವು ವಿಶ್ವ ಆರೋಗ್ಯ ಸಂಸ್ಥೆಗೆ ಕೇವಲ 39 ಮಿಲಿಯನ್ ಡಾಲರ್ ದೇಣಿಗೆ ನೀಡಿದರೆ 32.50 ಕೋಟಿ ಜನಸಂಖ್ಯೆ ಇರುವ ಅಮೆರಿಕ 500 ಮಿಲಿಯನ್ ಡಾಲರ್ ದೇಣಿಗೆ ನೀಡುತ್ತಿದೆ. ಈ ತಾರತಮ್ಯವನ್ನು ಅಮೆರಿಕ ಒಪ್ಪುವುದಿಲ್ಲ. 2024–25ರ ಡಬ್ಲ್ಯೂಹೆಚ್‌ಓನ 6.8 ಬಿಲಿಯನ್ ಡಾಲರ್ ಬಜೆಟ್‌ನಲ್ಲಿ ಅಮೆರಿಕ ಸಿಂಹಪಾಲು (ಶೇ.18) ನೀಡಿದೆ. ಆದರೆ ವಿಶ್ವ ಆರೋಗ್ಯ ಸಂಸ್ಥೆಯು ವಿಶ್ವ ಆರೋಗ್ಯ ನೀತಿ ರೂಪಿಸುವ ಕಾರ್ಯಕ್ರಮಗಳಲ್ಲಿ ಅಮೆರಿಕವನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಸಂಪೂರ್ಣ ವಿಶ್ವ ಆರೋಗ್ಯ ಸಂಸ್ಥೆಯು ಚೀನಾ ಹಾಗೂ ಅದರ ಮಿತ್ರ ರಾಷ್ಟ್ರಗಳ ಹಿಡಿತದಲ್ಲಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ. ಟ್ರಂಪ್ ತಮ್ಮ ದೇಶ ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಬರಲು ಇನ್ನೂ ನಾಲ್ಕು ಕಾರಣಗಳನ್ನು ನೀಡಿದ್ದಾರೆ. ಕೋವಿಡ್ ನಿರ್ವಹಣೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಸಂಪೂರ್ಣ ವಿಫಲವಾಯಿತು. ವಿಶ್ವ ಆರೋಗ್ಯ ಸಂಸ್ಥೆಗೆ ಅತ್ಯಾವಶ್ಯಕವೆನಿಸಿದ ಕೆಲವು ತುರ್ತು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸುವಲ್ಲಿ ತೋರಿದ ವೈಫಲ್ಯ, ನಿರಂತರವಾಗಿ ದೇಣಿಗೆ, ಸಹಾಯಧನ ನೀಡುವಂತೆ ಅಮೆರಿಕವನ್ನು ಒತ್ತಾಯಿಸುವುದು. ಕೆಲವು ಸದಸ್ಯ ದೇಶಗಳು ಸಂಸ್ಥೆಯಲ್ಲಿ ಮಾಡುತ್ತಿರುವ ಅಸಮಂಜಸ ಹಸ್ತಕ್ಷೇಪ ತಡೆಯುವಲ್ಲಿ ವಿಶ್ವ ಆರೋಗ್ಯ ಸಂಸ್ಥೆ ವಿಫಲವಾದುದು ಟ್ರಂಪ್‌ರನ್ನು ಕೆರಳಿಸಿತ್ತು. ಟ್ರಂಪ್‌ರವರು ವರ್ಣಿಸಿದಂತೆ ಅಮೆರಿಕದಿಂದ ದೇಣಿಗೆ ಪಡೆವ ವಿಶ್ವ ಆರೋಗ್ಯ ಸಂಸ್ಥೆಯು ಚೀನಾದ ಒಡೆತನ ಮತ್ತು ನಿಯಂತ್ರಣದಲ್ಲಿರುವ ಭ್ರಷ್ಟ ಜಾಗತಿಕ ಹಗರಣವಾಗಿದೆ. ಮೂರು ವರ್ಷಗಳ ಹಿಂದೆ ಕೋವಿಡ್ ಮಹಾಮಾರಿ ಅಮೆರಿಕದ ಸರಹದ್ದಿಗೆ ಬಂದಾಗ ವಿಶ್ವ ಆರೋಗ್ಯ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಕೋವಿಡ್ ನಿಯಂತ್ರಿಸಲು ಯಾವುದೇ ಸಂಕೋಚವಿಲ್ಲದೇ, ನಾಚಿಕೆ ಇಲ್ಲದೆ ಚೀನಾದ ನಿರ್ದೇಶನಕ್ಕನುಗುಣವಾಗಿ ವರ್ತಿಸಿತು.

ಅಮೆರಿಕವು ಹಠಾತ್ ದೇಣಿಗೆ ಸ್ಥಗಿತಗೊಳಿಸಿರುವುದರಿಂದ ವಿಶ್ವ ಆರೋಗ್ಯ ಸಂಸ್ಥೆಗೆ ಸಂಪನ್ಮೂಲದ ಕೊರತೆಯಾಗಲಿದೆ. ಬಡ, ಕಡಿಮೆ ಆದಾಯವಿರುವ, ಸಮರ್ಪಕ ಆರೋಗ್ಯ ವ್ಯವಸ್ಥೆಗಳಿಲ್ಲದ ದೇಶಗಳು ಸಂಕಷ್ಟಕ್ಕೀಡಾಗಲಿವೆ. ಜಾಗತಿಕ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅವಶ್ಯಕವೆನಿಸಿರುವ ಕಣ್ಗಾವಲು ಮತ್ತು ಮಹಾಮಾರಿಗಳ ವಿರುದ್ಧ ಸಿದ್ಧತಾ ವ್ಯವಸ್ಥೆಗಳು ಕುಂಠಿತವಾಗಲಿವೆ. ಅಮೆರಿಕವು ಈ ನಿರ್ಣಯದಂತೆ ಜಾಗತಿಕ ಸ್ವಾಸ್ಥ್ಯ, ಏಕತೆ, ಬಂಧುತ್ವದಂತಹ ಮೌಲ್ಯಗಳನ್ನು ಕಡೆಗಣಿಸಿದಂತಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯು ಬಡ ದೇಶಗಳಲ್ಲಿ ನಡೆಸುತ್ತಿರುವ ಲಸಿಕೆ ಹಾಗೂ ರೋಗ ಮುಕ್ತಗೊಳಿಸುವ ಕಾರ್ಯಕ್ರಮಗಳು ಸ್ಥಗಿತಗೊಳ್ಳುವ ಭೀತಿ ಉಂಟಾಗಿದೆ. ಬಡ ದೇಶಗಳನ್ನು ರೋಗಮುಕ್ತ ಗೊಳಿಸುವ ವಿವಿಧ ಅಭಿಯಾನಗಳು ನಿಲುಗಡೆಯಾಗಲಿವೆ. ಈ ಅವಕಾಶ ಬಳಸಿಕೊಂಡು, ಆರೋಗ್ಯ ಕ್ಷೇತ್ರದಲ್ಲಿ ಕುಟಿಲ ಚೀನಾ ತನ್ನಲ್ಲಿರುವ ಸಂಪನ್ಮೂಲ, ಪ್ರಭಾವ ಬಳಸಿ ಈಗಾಗಲೇ ವಿಶ್ವ ಆರೋಗ್ಯ ಸಂಸ್ಥೆಯ ಮೇಲಿರುವ ಹಿಡಿತವನ್ನು ಇನ್ನಷ್ಟು ಬಲ ಗೊಳಿಸುವ ಸಾಧ್ಯತೆಗಳಿವೆ. ಆದ್ದರಿಂದ ಭಾರತವು ಬಡ ಹಾಗೂ ಮಧ್ಯಮ ಆದಾಯವಿರುವ ದೇಶಗಳಿಗಾಗಿ ವಿಶ್ವ ಆರೋಗ್ಯ ಸಂಸ್ಥೆಯನ್ನು ತನ್ನ ಪ್ರಭಾ ವಲಯಕ್ಕೆ ತರಬೇಕಾಗಿದೆ.

ಈ ಸಂದರ್ಭದಲ್ಲಿ ಭಾರತಕ್ಕೆ ಜಾಗತಿಕ ಸ್ವಾಸ್ಥ್ಯ ನಿರ್ವಹಣೆ ಮೇಲೆ ಪ್ರಭಾವ ಬೀರುವ ಅವಕಾಶಗಳಿವೆ. ಕೊರೊನಾ ಕಾಲದಲ್ಲಿ ಭಾರತದ ಲಸಿಕೆ ರಾಜತಾಂತ್ರಿಕತೆ ಮತ್ತು ಜಗತ್ತಿನ ಜನರ ಆರೋಗ್ಯದ ಬಗ್ಗೆ ತೋರಿದ ಕಾಳಜಿಯಿಂದಾಗಿ ವಿಶ್ವ ಆರೋಗ್ಯ ಕ್ಷೇತ್ರದಲ್ಲಿ ಪ್ರಧಾನ ಪಾತ್ರ ವಹಿಸುವ ಅವಕಾಶಗಳಿವೆ. ಅಮೆರಿಕದ ದೇಣಿಗೆಯಿಂದಾಗಿ ವಿಶ್ವ ಆರೋಗ್ಯ ಸಂಸ್ಥೆಯು ಭಾರತದಲ್ಲಿ ಈಗಲೂ ಇರುವ ಹೆಚ್‌ಐವಿ, ಮಲೇರಿಯಾ, ಕ್ಷಯ, ಏಡ್ಸ್ ಮೊದಲಾದ ರೋಗಗಳ ತಡೆಗಟ್ಟುವಿಕೆ, ನಿರ್ಮೂಲನೆಯಲ್ಲಿ ಭಾರತಕ್ಕೆ ಸಹಕಾರ ನೀಡುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದಲ್ಲಿ 2027ರ ವೇಳೆಗೆ ದೇಶದಿಂದ ಮಲೇರಿಯಾ ನಿರ್ಮೂಲನೆಗೊಳಿಸುವ ಗುರಿ ಹೊಂದಿದೆ. ಆದರೆ ಅಮೆರಿಕದ ನಿರ್ಗಮನದಿಂದ ಮಲೇರಿಯಾ ನಿರ್ಮೂಲನದ ಅವಧಿ ಇನ್ನಷ್ಟು ವಿಸ್ತರಿಸುವ ಸಾಧ್ಯತೆಗಳಿವೆ.

ವಿಶ್ವ ಆರೋಗ್ಯ ಸಂಸ್ಥೆಯಿಂದ ನಿರ್ಗಮಿಸಿದ ನಂತರ ಅಮೆರಿಕವು ಅಂತಾರಾಷ್ಟ್ರೀಯ ಆರೋಗ್ಯ ನೀತಿ ರೂಪಿಸುವಲ್ಲಿ ಮುಖ್ಯ ಭೂಮಿಕೆ ನಿಭಾಯಿಸುವ ಅವಕಾಶ ಕಳೆದುಕೊಂಡಿದೆ. ಇದುವರೆಗೆ ತಾನು ನೀಡುವ ಬೃಹತ್ ದೇಣಿಗೆ ಬಲದಲ್ಲಿ ಅಮೆರಿಕನ್ ಔಷಧ ಕಂಪನಿಗಳ ಸ್ವಾರ್ಥ ಸಾಧನೆಗೆ ಅವಕಾಶ ನೀಡುವ ನೀತಿ ರೂಪಿಸುತ್ತಿತ್ತು. ಕೊರೊನಾ ಲಸಿಕೆಯನ್ನು ತಯಾರಿಸಿದ ಅಮೆರಿಕದ ಕಂಪನಿಗಳು ಜಗತ್ತನ್ನು ಲೂಟಿ ಹೊಡೆಯುವ ಅವಕಾಶವನ್ನು ಭಾರತದ ಲಸಿಕೆಯಿಂದ ಕಳೆದುಕೊಂಡಿದ್ದವು. ತನ್ನ ಔಷಧ ಕಂಪನಿಗಳ ಲಾಭಕೋರತನಕ್ಕೆ ವಿಶ್ವ ಆರೋಗ್ಯ ಸಂಸ್ಥೆಯನ್ನು ಅಮೆರಿಕ ಸಾಧನವಾಗಿ ಬಳಸುತ್ತಿತ್ತು. ಟ್ರಂಪ್ ಕ್ರಮದಿಂದ ಅಮೆರಿಕದ ಕಂಪನಿಗಳಿಗೂ ಹೊಡೆತ ಬೀಳಲಿದೆ. ಈ ಅವಕಾಶ ಉಪಯೋಗಿಸಿ ದುರುಳ ಚೀನಾವು ವಿಶ್ವ ಆರೋಗ್ಯ ಸಂಸ್ಥೆಯ ಮೇಲೆ ಪ್ರಭುತ್ವ ಸಾಧಿಸುವ ಅವಕಾಶವಿದೆ. ಈ ದೃಷ್ಟಿಯಿಂದ ಜಗತ್ತಿನ ಜನರಿಗೆ ಉತ್ತಮ ಸ್ವಾಸ್ಥ್ಯ ಬಯಸುವ ಭಾರತ ಎಚ್ಚರಗೊಳ್ಳಬೇಕಾಗಿದೆ.

ಇನ್ನಷ್ಟು ದೇಶಗಳು ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಕ್ಕೆ?

ಅಮೆರಿಕದ ನಂತರ ದ.ಅಮೆರಿಕದ ಬೃಹತ್ ರಾಷ್ಟ್ರ ಅರ್ಜೆಂಟೀನಾವು ವಿಶ್ವ ಆರೋಗ್ಯ ಸಂಸ್ಥೆಯಿಂದ ನಿರ್ಗಮಿಸುವುದಾಗಿ ಖಚಿತಪಡಿಸಿದೆ. ಆಸ್ಟ್ರೇಲಿಯಾದ ಒನ್ ನೇಷನ್ ಪಕ್ಷದ ನಾಯಕಿ ಪಾಲ್ಲಿನ್ ಹೆನ್ಸನ್‌ರವರು 'ಆಸ್ಟ್ರೇಲಿಯಾದ ಹಿತಾಸಕ್ತಿಗಳಿಗೆ ಸ್ಪಂದಿಸದ ಅಂತಾರಾಷ್ಟ್ರೀಯ ಒಪ್ಪಂದಗಳು ಮತ್ತು ಸಂಘಟನೆಗಳನ್ನು ತ್ಯಜಿಸಬೇಕೆಂದು ನಾವು ನಿರಂತರವಾಗಿ ದೇಶದ ರಾಜಕೀಯ ನಾಯಕರಿಗೆ ಒತ್ತಾಯಿಸುತ್ತಾ ಬಂದಿದ್ದೇವೆ. ಈ ವಿಚಾರದಲ್ಲಿ ರಾಜಕೀಯ ಇಚ್ಛಾಶಕ್ತಿ ತೋರಿದ ಟ್ರಂಪ್‌ರನ್ನು ಅನುಸರಿಸಬೇಕಾಗಿದೆ. ಆಸ್ಟ್ರೇಲಿಯನ್‌ರ ಭವಿಷ್ಯವನ್ನು ಆಸ್ಟ್ರೇಲಿಯನ್‌ರೇ ನಿರ್ಧರಿಸುವ ಸಮಯ ಬಂದಿದೆ' ಎಂದು ತಿಳಿಸಿದರು. ಒಟ್ಟಿನಲ್ಲಿ ಅಮೆರಿಕ ವಿಶ್ವ ಆರೋಗ್ಯ ಸಂಸ್ಥೆಯಿಂದ ನಿರ್ಗಮನ, ಬಡ ಮತ್ತು ಕಡಿಮೆ ಆದಾಯವುಳ್ಳ ದೇಶಗಳ ಜನತೆಗೆ ತೀವ್ರ ಸಂಕಷ್ಟ ತರುವ ಸಾಧ್ಯತೆಗಳಿವೆ. ಈ ದೃಷ್ಟಿಯಿಂದ ಹಾಗೂ ಮಾನವೀಯ ಕಾರಣಗಳಿಗಾಗಿ ಅಮೆರಿಕ ತನ್ನ ನಿರ್ಧಾರವನ್ನು ಪುನರ್ ಪರಿಶೀಲಿಸಬೇಕೆಂದು ವಿಶ್ವ ಆರೋಗ್ಯ ಸಂಸ್ಥೆಯ ವಕ್ತಾರ ತಾರಿಕ್ ಜಸರ್ವಿಕ್‌ರು ಟ್ರಂಪ್‌ಗೆ ಮನವಿ ಮಾಡಿದ್ದಾರೆ.


ತಿರುಪತಿ ಅನ್ನಪ್ರಸಾದ ಟ್ರಸ್ಟ್‌ಗೆ 2,200 ಕೋಟಿ ರೂ. ದೇಣಿಗೆ

ತಿರುಮಲ, ಮಾ.12– ತಿರುಮಲ ತಿರುಪತಿ ದೇವಸ್ಥಾನ ಅತ್ಯಂತ ಪ್ರತಿಷ್ಠೆಯಿಂದ ನಡೆಸುತ್ತಿರುವ ಉಚಿತ ಅನ್ನಪ್ರಸಾದ ಟ್ರಸ್ಟ್‌ಗೆ ದೇಣಿಗೆ 2,200 ಕೋಟಿ ರೂ.ಗಳನ್ನು ದಾಟಿದೆ ಎಂದು ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಹೇಳಿದರು. 1985ರಲ್ಲಿ ಆಗಿನ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ತಿರುಮಲದಲ್ಲಿ ಅನ್ನದಾನ ಯೋಜನೆಯನ್ನು ಪ್ರಾರಂಭಿಸಿದರು. ಆರಂಭದಲ್ಲಿ ಇದನ್ನು ವೆಂಕಟೇಶ್ವರ ನಿತ್ಯ ಅನ್ನದಾನ ದತ್ತಿ ಯೋಜನೆ ಎಂದು ಹೆಸರಿಸಲಾಗಿತ್ತು. 1994ರಲ್ಲಿ ಸ್ವತಂತ್ರ ಟ್ರಸ್ಟ್ ಆದ ನಂತರ ಟ್ರಸ್ಟ್‌ನ ಹೆಸರನ್ನು ಶ್ರೀ ವೆಂಕಟೇಶ್ವರ ನಿತ್ಯ ಅನ್ನದಾನಂ ಟ್ರಸ್ಟ್ ಎಂದು ಬದಲಾಯಿಸಲಾಯಿತು. 2014ರಲ್ಲಿ ಟ್ರಸ್ಟ್‌ನ ಹೆಸರನ್ನು ಶ್ರೀ ವೆಂಕಟೇಶ್ವರ ಅನ್ನಪ್ರಸಾದಂ ಟ್ರಸ್ಟ್ ಎಂದು ಬದಲಾಯಿಸಲಾಯಿತು. ಈ ಮೆಗಾ ಉಚಿತ ಆಹಾರ ಯೋಜನೆಗೆ ಪ್ರಪಂಚದಾದ್ಯಂತದ ದೇಣಿಗೆಗಳಿಂದ ಹಣಕಾಸು ಒದಗಿಸಲಾಗುತ್ತಿದೆ.

ಎಸ್.ವಿ.ಅನ್ನ ಪ್ರಸಾದ ಟ್ರಸ್ಟ್ ಸುಮಾರು 9.7 ಲಕ್ಷ ದಾನಿಗಳನ್ನು ಹೊಂದಿದೆ. ಈ ಪೈಕಿ 139 ದಾನಿಗಳು 1 ಕೋಟಿ ರೂ.ಗೂ ಹೆಚ್ಚು ದೇಣಿಗೆ ನೀಡಿದ್ದಾರೆ. ತಿರುಮಲದಲ್ಲಿ ಒಂದೇ ದಿನಕ್ಕೆ ಅನ್ನಪ್ರಸಾದ ವಿತರಿಸಲು ತಗುಲಿದ ವೆಚ್ಚ 44 ಲಕ್ಷ ರೂ. ಇಲ್ಲಿಯವರೆಗೆ 249 ದಾನಿಗಳು ತಲಾ 44 ಲಕ್ಷ ರೂ.ಗಳನ್ನು ದೇಣಿಗೆ ನೀಡಿದ್ದಾರೆ.

ಹರ್ಯಾಣ ಸ್ಥಳೀಯ ಚುನಾವಣೆ: ಬಿಜೆಪಿ ಕ್ಲೀನ್‌ಸ್ವೀಪ್, 10ರಲ್ಲಿ 9 ಸ್ಥಾನಗಳಲ್ಲಿ ಗೆಲುವು

ಕಾಂಗ್ರೆಸ್‌ಗೆ ತೀವ್ರ ಮುಖಭಂಗ



ಗುರುಗ್ರಾಮ, ಮಾ.12– ಹರ್ಯಾಣ ಮಹಾನಗರಪಾಲಿಕೆಗಳ ಮೇಯರ್ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿದ್ದು, 10 ಮೇಯರ್ ಸ್ಥಾನಗಳ ಪೈಕಿ 9 ಸ್ಥಾನಗಳನ್ನು ಗೆದ್ದು ಬೀಗಿದೆ. ಹರ್ಯಾಣ ವಿಧಾನಸಭೆ ಚುನಾವಣೆ ಬಳಿಕ ಮಹಾನಗರ ಪಾಲಿಕೆಗಳ ಮೇಯರ್ ಚುನಾವಣೆಯಲ್ಲೂ ಬಿಜೆಪಿ ತನ್ನ ಪಾರುಪತ್ಯ ಮುಂದುವರೆಸಿದ್ದು, ಇಂದು ಪ್ರಕಟಗೊಂಡ ಚುನಾವಣಾ ಫಲಿತಾಂಶದಲ್ಲಿ ಕ್ಲೀನ್‌ಸ್ವೀಪ್ ಮಾಡಿದೆ.

ಗುರುಗ್ರಾಮ್, ಹಿಸಾರ್, ಕರ್ನಾಲ್, ರೋಹ್ಟಕ್, ಫರಿದಾಬಾದ್, ಯಮುನಾನಗರ, ಪಾಣಿಪತ್, ಅಂಬಾಲ ಮತ್ತು ಸೋನಿಪತ್ ಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ಮಾನೇಸರ್‌ನಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸ್ವತಂತ್ರ ಅಭ್ಯರ್ಥಿ ಡಾ.ಇಂದರ್‌ಜೀತ್ ಯಾದವ್ ಸೋಲಿಸಿದ್ದಾರೆ. ಈ ತಿಂಗಳ ಆರಂಭದಲ್ಲಿ ಮಾನೇಸರ್, ಗುರುಗ್ರಾವ್, ಫರಿದಾಬಾದ್, ಹಿಸಾರ್, ರೋಹ್ಟಕ್, ಕರ್ನಾಲ್, ಯಮುನಾನಗರ, ಪಾಣಿಪತ್, ಅಂಬಾಲ ಮತ್ತು ಸೋನಿಪತ್ ನಗರ ಪಾಲಿಕೆಗಳಲ್ಲಿ ಮೇಯರ್ ಮತ್ತು ವಾರ್ಡ್ ಸದಸ್ಯರ ಹುದ್ದೆಗಳಿಗೆ ಚುನಾವಣೆ ನಡೆದಿತ್ತು. ಅಂಬಾಲ ಮತ್ತು ಸೋನಿಪತ್ ಪುರಸಭೆಗಳ ಮೇಯರ್ ಹುದ್ದೆಗೆ ಉಪಚುನಾವಣೆಗಳು ಸಹ ನಡೆದಿತ್ತು. ಈ ವಿಚಾರವಾಗಿ ಮಾತನಾಡಿದ ಹರ್ಯಾಣ ಸಿಎಂ ನವಾಬ್ ಸಿಂಗ್ ಸೈನಿ, ಜನರು 'ತ್ರಿವಳಿ–ಎಂಜಿನ್' ಸರ್ಕಾರಕ್ಕೆ ತಮ್ಮ ಅನುಮೋದನೆಯ ಮುದ್ರೆ ಹಾಕಿದ್ದಾರೆ.

ನಾನು ಜನರಿಗೆ ನನ್ನ ಹೃದಯದಾಳದಿಂದ ಧನ್ಯವಾದ ಹೇಳುತ್ತೇನೆ ಎಂದಿದ್ದಾರೆ. ಅಂತೆಯೇ ನಮ್ಮ ಸ್ಥಳೀಯ ಸಂಸ್ಥೆ ಸರ್ಕಾರ ಮತ್ತು ಈ 'ತ್ರಿವಳಿ–ಎಂಜಿನ್' ಸರ್ಕಾರವು ಪ್ರಧಾನಿ ನರೇಂದ್ರ ಮೋದಿಯವರ 'ವಿಕಸಿತ ಭಾರತ', 'ಅಭಿವೃದ್ಧಿ ಹೊಂದಿದ ಭಾರತ'ದ ದೃಷ್ಟಿಕೋನವನ್ನು ಈಡೇರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಕೇಂದ್ರದ ನಿಲುವು ಖಂಡಿಸಿ ಪ್ರತಿಭಟನೆ ; ತಮಿಳ್ನಾಡು ಕರೆದಿರುವ ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲ



ಬೆಂಗಳೂರು, ಮಾ.12(ಕೆಎಂಶಿ)–ಕೇಂದ್ರ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನಿಲುವನ್ನು ಪ್ರತಿಭಟಿಸಿ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಕರೆದಿರುವ ಸಭೆ ಮತ್ತು ಹೋರಾಟಕ್ಕೆ ಕರ್ನಾಟಕದ ಬೆಂಬಲವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ಕರ್ನಾಟಕದ ಹಿತಾಸಕ್ತಿಗೆ ವಿರುದ್ಧದ ನಿಲುವು, ಪ್ರಜಾಪ್ರಭುತ್ವ ದುರ್ಬಲಗೊಳಿಸುವ, ಸಂವಿಧಾನ ಒಕ್ಕೂಟ ತತ್ವಕ್ಕೆ ವಿರುದ್ಧವಾದ ಕೇಂದ್ರ ಸರ್ಕಾರದ ಎಲ್ಲಾ ನಡೆಗಳನ್ನು ಮುಲಾಜಿಲ್ಲದೆ ಖಂಡಿಸುವುದಾಗಿ ಸಿದ್ದರಾಮಯ್ಯ ತಿಳಿಸಿದ್ದಾರೆ. ತಮಿಳುನಾಡು ಅರಣ್ಯ ಸಚಿವ ಡಾ.ಕೆ.ಪೊನ್ನುಮುಡಿ ಮತ್ತು ರಾಜ್ಯಸಭಾ ಸದಸ್ಯ ಅಬ್ದುಲ್ಲಾ ಇಸ್ಮಾಯಿಲ್ ಅವರು ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಕೇಂದ್ರ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನೀತಿ ಹಾಗೂ ದಕ್ಷಿಣ ರಾಜ್ಯಗಳನ್ನು ಹತ್ತಿಕ್ಕುವ ಕಾರ್ಯ ಖಂಡನಾ ಸಭೆಗೆ ಆಹ್ವಾನ ನೀಡಿದರು.

ಇವರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ಕ್ಷೇತ್ರ ಪುನರ್‌ವಿಂಗಡಣೆ ಮತ್ತಿತರ ವಿಚಾರದಲ್ಲಿ ಧ್ವನಿ ಎತ್ತುವಂತೆ ಹಾಗೂ ಪ್ರತಿಭಟನೆಗೆ ಸಹಕರಿಸುವಂತೆ ಕೋರಿದ ಮನವಿಗೆ ನನ್ನ ಬೆಂಬಲ ಸೂಚಿಸಿದ್ದೇನೆ. ತಮಿಳುನಾಡು ಮುಖ್ಯಮಂತ್ರಿ ದೂರವಾಣಿ ಮೂಲಕ ತಮ್ಮನ್ನು ಸಂಪರ್ಕಿಸಿ ಈ ವಿಷಯ ಚರ್ಚಿಸಿದರು. ದಕ್ಷಿಣ ರಾಜ್ಯಗಳ ಪ್ರತಿರೋಧಕ್ಕೆ ತಮ್ಮದೂ ಬೆಂಬಲ ಇದೆ ಎಂಬುದನ್ನು ತಿಳಿಸಿದ್ದೇನೆ ಎಂದರು.

ಗ್ಯಾರಂಟಿ ಸಮಿತಿಗಳಿಂದ ಶಾಸಕರ ಘನತೆಗೆ ಧಕ್ಕೆ ಆಗಿಲ್ಲ

ಬೆಂಗಳೂರು, ಮಾ.12(ಕೆಎಂಶಿ)–ಗ್ಯಾರಂಟಿ ಸಮಿತಿಗಳಿಂದ ಶಾಸಕರ ಘನತೆಗೆ ಕುಂದಾಗಿಲ್ಲ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಪ್ರತಿಪಕ್ಷದ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ವಿಧಾನಮಂಡಲದ ಅಧಿವೇಶನ ಮುಗಿಯುತ್ತಿದ್ದಂತೆ ಸಭೆ ಕರೆದು ತಕರಾರುಗಳನ್ನು ಪರಿಹರಿಸಲಾಗುವುದು ಎಂದರು. ಪಕ್ಷ ಅಧಿಕಾರಕ್ಕೆ ಬಂದಾಗ ಕಾರ್ಯಕರ್ತರಿಗೆ ಆಡಳಿತದಲ್ಲಿ ಅವಕಾಶ ನೀಡುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮಹಾರಾಷ್ಟ್ರದಲ್ಲಿ ಎಲ್ಲಾ ಶಾಸಕರ ಕಚೇರಿಗೂ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದು ಉಲ್ಲೇಖಿಸಿದರು.

ತಾಲೂಕುಗಳಲ್ಲಿ ಶಾಸಕರ ಘನತೆ ಮತ್ತು ಅಧಿಕಾರಕ್ಕೆ ಯಾವುದೇ ಚ್ಯುತಿ ಬರುವುದಿಲ್ಲ. ರಾಜ್ಯ, ಜಿಲ್ಲಾ ಮತ್ತು ತಾಲೂಕು ಗ್ಯಾರಂಟಿ ಜಾರಿ ಸಮಿತಿಗಳಲ್ಲಿ ಬದಲಾವಣೆ ಇಲ್ಲ ಎಂದು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಬಿಲ್ಲುಗಳು ಪಾವತಿಯಾಗಿಲ್ಲ, ಸಂಬಳ ಕೊಟ್ಟಿಲ್ಲ, ಸರ್ಕಾರಿ ವಾಹನಗಳಿಗೆ ಡೀಸೆಲ್ ಹಾಕಿಸಲು ಹಣವಿಲ್ಲ

ಮಾಜಿ ಸಚಿವ ಹೆಚ್.ಡಿ. ರೇವಣ್ಣ ವಾಗ್ದಾಳಿ



ಹಾಸನ: ಸ್ಥಳೀಯ ಸಂಸ್ಥೆ ಜಿಲ್ಲಾ ಪಂಚಾಯತ್ ವತಿಯಿಂದ ಅನುಮೋದನೆಗೊಂಡು ಬಿಡುಗಡೆಯಾದ ಅನುದಾನದ ಬಿಲ್ಲುಗಳು ಖಜಾನೆಯಿಂದ ಪಾವತಿಯಾಗಿಲ್ಲ ಮತ್ತು ವಿವಿಧ ಇಲಾಖೆ ಅಧಿಕಾರಿ, ನೌಕರರಿಗೆ ಸಂಬಳ ಪಾವತಿಯಾಗಿಲ್ಲ ಹಾಗೂ ಸರ್ಕಾರಿ ಕಚೇರಿಯ ವಾಹನಕ್ಕೆ ಡೀಸೆಲ್ ಹಾಕಲೂ ಸಹ ಹಣ ಬಿಡುಗಡೆಯಾಗಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ದೂರಿದರು.

ನಗರದ ಪ್ರವಾಸಿಮಂದಿರದಲ್ಲಿ ಮಾಧ್ಯಮದೊಂದಿಗೆ ಮಾತನಾಡಿ, ಹಾಸನದ ಎಲ್ಲಾ ಇಲಾಖೆಯಲ್ಲೂ 8 ತಿಂಗಳಿಂದ ಬಿಲ್ ಆಗಿಲ್ಲ. ಟ್ರಜರಿ ಲಾಕ್ ಮಾಡಲಾಗಿದೆ. ಮೂರು ತಿಂಗಳಿಂದ ಅಧಿಕಾರಿ, ಸಿಬ್ಬಂದಿಗಳಿಗೆ ಸಂಬಳವೇ ಆಗಿಲ್ಲ. ಹಾಸನ ಜಿಲ್ಲೆ ಅನಾಥವಾಗಿದೆ. ಎಲ್ಲಾ ಕಡೆಯು ಖಜಾನೆ ಓಪನ್ ಆಗಿದೆ. ನಮ್ಮ ಜಿಲ್ಲೆಯಲ್ಲಿ ಮಾತ್ರ ಲಾಕ್ ಆಗಿದೆ. ಜಿಲ್ಲೆಯ. 63 ಇಲಾಖೆಯ ಅನುದಾನ ಕೂಡ ಬಿಡುಗಡೆ ಆಗುತ್ತಿಲ್ಲ ಎಂದರು.

ಬಿಲ್‌ಗಳ ಸುಮಾರು 326 ಕೋಟಿ ಹಣ ಪಾವತಿ ಬಾಕಿ ಇದೆ. 2024–25ನೇ ಸಾಲಿನ ಸ್ಥಳೀಯ ಸಂಸ್ಥೆ ಜಿಲ್ಲಾ ಪಂಚಾಯತ್ ವತಿಯಿಂದ ಅನುಮೋದನೆಗೆ ಬಿಡುಗಡೆಯಾದ ಅನುದಾನದ ಬಿಲ್ಲುಗಳು ಖಜಾನೆಯಿಂದ ಪಾವತಿಯಾಗಿಲ್ಲ ಮತ್ತು ವಿವಿಧ ಇಲಾಖೆ ಅಧಿಕಾರಿ, ನೌಕರರಿಗೆ ಸಂಬಳ ಪಾವತಿಯಾಗಿಲ್ಲ ಹಾಗೂ ಸರ್ಕಾರಿ ಕಚೇರಿಯ ವಾಹನಕ್ಕೆ ಡೀಸೆಲ್ ಹಾಕಲೂ ಸಹ ಹಣ ಬಿಡುಗಡೆಯಾಗಿಲ್ಲ ಎಂದು ದೂರಿದರು.

ಸಾರ್ವಜನಿಕರ ತೆರಿಗೆ ಹಣ ಸುಮಾರು 16 ಕೋಟಿ ಗ್ಯಾರಂಟಿ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ವೇತನ ಕೊಡಲು ಸರ್ಕಾರ ಖರ್ಚು ಮಾಡುತ್ತಿದೆ. ಇಂತಹ ದುರಾಡಳಿತ ಎಷ್ಟು ಸರಿ ಎಂದು ಪ್ರಶ್ನಿಸಿದ್ದು, ಕೆಲವರು ಬಜೆಟ್‌ನಲ್ಲಿ ಅದು ಇದು ಕೊಟ್ಟಿದ್ದಾರೆ ಅಂತಾರೆ. ಅದರ ಬಗ್ಗೆ ಮಾತಾಡಲ್ಲ ಎಂದು ಹೆಸರು ಹೇಳದೆ ಸಂಸದ ಶ್ರೇಯಸ್ ವಿರುದ್ಧ ಟೀಕಿಸಿದರು.

ಸರ್ಕಾರದ ಐದು ಗ್ಯಾರಂಟಿ ಜೊತೆಗೆ ಎಣ್ಣೆ ಭಾಗ್ಯ ಕೊಟ್ಟಿಲ್ಲವೇ! ಹೊಳೆನರಸೀಪುರ ತಾಲೂಕಿನಲ್ಲಿ ಈಗಾಗಲೇ 36 ಎಣ್ಣೆ ಅಂಗಡಿ ಆಗಿದೆ. ಹಾಸನದ ರಿಂಗ್ ರೋಡಲ್ಲಿ ಬೇಕಾಬಿಟ್ಟಿ ಮದ್ಯದಂಗಡಿ ಮಾಡಿದ್ದಾರೆ. ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆ ಸಮರ್ಪಕ ಜಾರಿ ಮಾಡುವ ಬದಲು ಎಣ್ಣೆ, ಇಸ್ಪೀಟು, ಮಟ್ಕ ದಂಧೆ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶ್ರೀ ರೇಣುಕಾಚಾರ್ಯ ಜಯಂತಿ ಮೆರವಣಿಗೆಗೆ ಡಿಸಿ ಚಾಲನೆ



ರೇಣುಕಾಚಾರ್ಯ ಜಯಂತಿ ಅಂಗವಾಗಿ ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮ, ಬುಧವಾರ ಮೆರವಣಿಗೆಗೆ ಚಾಲನೆ ನೀಡಿದರು.

ಹಾಸನ: ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು, ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ಮಾಧ್ಯಮದೊಂದಿಗೆ ಮಾತನಾಡಿ, ಶ್ರೀ ಜಗದ್ಗುರು ರೇಣುಕಾ ಚಾರ್ಯ ಜಯಂತಿ ರಥಕ್ಕೆ ಚಾಲನೆ ಕೊಡಲಾಗಿದ್ದು, ಸಮಾಜದ ಎಲ್ಲಾ ಬಂಧು ವರ್ಗದವರಿಗೆ ಜಯಂತಿಯ ಶುಭವಾಗಲಿ. ಜಗದ್ಗುರುಗಳ ಏನೇನು ಉಪದೇಶಗಳಿವೆ. ನಾವೆಲ್ಲರೂ ಪಾಲಿಸುವಂತಾಗಲಿ ಎಂದರು.

ಮೆರವಣಿಗೆಯಲ್ಲಿ ಯಸಳೂರು ತೆಂಕಲಗೂಡು ಮಠಾಧೀಶರಾದ ಶ್ರೀ ಚನ್ನಸಿದ್ದೇಶ್ವರ ಶಿವಚಾರ್ಯಸ್ವಾಮೀಜಿ, ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ, ದೊಡ್ಡಗದವನಹಳ್ಳಿಯ ವೇ.ಡಿ.ಎ. ದೇವರಾಜಶಾಸ್ತ್ರಿ, ಕರ್ನಾಟಕ ರಾಜ್ಯ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಗೌರವಾಧ್ಯಕ್ಷ ಈ. ಕೃಷ್ಣೇಗೌಡ, ಕಾರ್ಯದರ್ಶಿ ಲಕ್ಷ್ಮೀಕಾಂತ್, ತಹಸೀಲ್ದಾರ್ ಉಲಿವಾಲ ಮೋಹನ್ ಕುಮಾರ್, ಡಿವೈಎಸ್ಪಿ ಮುರುಳೀದರ್, ರಮೇಶ್, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ನವೀಲೆ ಪರಮೇಶ್, ತಾಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಉಪಾಧ್ಯಕ್ಷ ಪುನೀತ್ ಪಟೇಲ್, ಭೂವನಾಕ್ಷ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ.ತಾರಾನಾಥ್ ಇನ್ನಿತರರು ಉಪಸ್ಥಿತರಿದ್ದರು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೌಕರರಿಂದ ವಾಕಥಾನ್, ಆರೋಗ್ಯ ಶಿಬಿರ




ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವಾಕಥಾನ್ ನಡೆಯಿತು.

ಹಾಸನ: ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ಹಾಸನದ ಒಬೆಸಿಟಿ ಮತ್ತು ಡಯಾಬಿಟಿಕ್ ವೆಲ್ನೆಸ್ ಸೆಂಟರ್ ಸಹಯೋಗದಲ್ಲಿ ವಾಕಥಾನ್ ನಡಿಗೆ ಮತ್ತು ಉಚಿತ ಆರೋಗ್ಯ ಶಿಬಿರ ನಡೆಸಲಾಯಿತು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪ್ರಾದೇಶಿಕ ಮುಖ್ಯಸ್ಥ ಅರುಣ್ ಕುಲಕರ್ಣಿ ಮಾತನಾಡಿ, ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಹೆಲ್ತ್ ಕ್ಯಾಂಪ್ ಮತ್ತು ವಾಕಥಾನ್ ನಡಿಗೆ ಕಾರ್ಯಕ್ರಮ ನಡೆಸಲಾಗುತ್ತಿದೆ. ನಗರದ ಜಿಲ್ಲಾ ಕ್ರೀಡಾಂಗಣದಿಂದ ಹೊರಟ ವಾಕಥಾನ್ ನಡಿಗೆ ನಗರದ ಪ್ರಮುಖ ರಸ್ತೆಯಲ್ಲಿ ಸಾಗಿ ಜಾಗೃತಿ ಮೂಡಿಸಿದರು ಎಂದರು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮ್ಯಾನೇಜರ್ ರಾಜೇಶ್, ಸಿ.ಅರುಣ್‌ಕುಮಾರ್, ಯೂನಿಯನ್ ಬ್ಯಾಂಕ್ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಟಿ.ಲೋಕೇಶ್ ಇದ್ದರು.

ಎಲ್ಲಾ ದೇವಾಲಯಗಳ ಭೂಮಿ ಮರಳಿ ಪಡೆಯುತ್ತೇವೆ



ಲಕ್ನೋ: ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿವಾದಿತ ಸಂಭಾಲ್ ಕುರಿತು ಪ್ರಮುಖ ಘೋಷಣೆಯೊಂದನ್ನು ಮಾಡಿದ್ದಾರೆ. ರಾಜಧಾನಿ ಲಕ್ನೋದಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ಭಾಷಣದ ವೇಳೆ ಸಂಭಾಲ್‌ನಲ್ಲಿ ಹರಿಹರ ದೇವಾಲಯವನ್ನು ಧ್ವಂಸ ಮಾಡಲಾಗಿದೆ ಎಂಬುದು ಸತ್ಯ ಎಂದರು. ಮುಂದುವರೆದು ಪುರಾಣಗಳಲ್ಲಿ 5000 ವರ್ಷಗಳ ಹಿಂದೆಯೇ ಸಂಭಾಲ್‌ನ ಬಗ್ಗೆ ಉಲ್ಲೇಖಿಸಲಾಗಿದ್ದು, ವಿಷ್ಣುವಿನ ಹತ್ತನೇ ಅವತಾರವು ಈ ಭೂಮಿಯಲ್ಲಿ ಸಂಭವಿಸಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಸನಾತನ ಧರ್ಮದಲ್ಲಿ 68 ತೀರ್ಥಯಾತ್ರಾ ಸ್ಥಳಗಳಿದ್ದವು. ಆದರೆ ನಮಗೆ ಕೇವಲ 18 ಸ್ಥಳಗಳನ್ನು ಮಾತ್ರ ಪತ್ತೆಹಚ್ಚಲು ಸಾಧ್ಯವಾಗಿದೆ. ಅಲ್ಲದೇ, 19 ಬಾವಿಗಳಿದ್ದವು ಮತ್ತು ಅವೆಲ್ಲವನ್ನೂ ನಾವು ಕಂಡುಹಿಡಿದಿದ್ದೇವೆ. ನಮ್ಮ (ಹಿಂದೂಗಳ) ಭೂಮಿಯ ಒಂದು ಇಂಚನ್ನೂ ನಾವು ಬಿಟ್ಟುಕೊಡುವುದಿಲ್ಲ. ಧ್ವಂಸ ಮಾಡಿ ಮಸೀದಿ ನಿರ್ಮಿಸಿರುವ ಎಲ್ಲಾ ದೇವಾಲಯಗಳ ಭೂಮಿಯನ್ನು ಮರಳಿ ಪಡೆಯುತ್ತೇವೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸ್ಪಷ್ಟಪಡಿಸಿದ್ದಾರೆ.

ವಸತಿ ಯೋಜನೆಗಳ ಸಹಾಯಧನ ಹೆಚ್ಚಳಕ್ಕೆ ಕ್ರಮ

ಬೆಂಗಳೂರು, ಮಾ.12–ವಿವಿಧ ವಸತಿ ಯೋಜನೆಯಡಿ ಸರ್ಕಾರ ಕೊಡುವ ಸಹಾಯಧನವನ್ನು ಹೆಚ್ಚಳ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆ. ಆದಷ್ಟು ಬೇಗ ಸಹಾಯಧನ ಹೆಚ್ಚಳಕ್ಕೆ ನಿರ್ಧಾರ ಮಾಡುವುದಾಗಿ ವಸತಿ ಸಚಿವ ಜಮೀರ್ ಅಹಮದ್ ತಿಳಿಸಿದರು.

ವಿಧಾನಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಡಿ.ಟಿ. ಶ್ರೀನಿವಾಸ್ ವಸತಿ ಯೋಜನೆ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು. 2024–25ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ವಸತಿ ಯೋಜನೆಯಡಿ ಒಂದೇ ಒಂದು ಮನೆ ಹಂಚಿಕೆ ಮಾಡಿಲ್ಲ. 2024–25ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಡಿ ಪ್ರಗತಿಯಲ್ಲಿರುವ ಮನೆಗಳನ್ನು ಒಳಗೊಂಡಂತೆ 3 ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ನಿರ್ಧಾರ ಮಾಡಲಾಗಿತ್ತು. ಈವರೆಗೂ 1,49,521 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಎಂದರು. 2024–25ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಅವಾಸ್ ಯೋಜನೆಯಡಿ(ಗ್ರಾಮೀಣ) ರಾಜ್ಯಕ್ಕೆ 7.03 ಲಕ್ಷ ಮನೆ ಗುರಿ ಹಂಚಿಕೆ ಮಾಡಲಾಗಿದೆ. ಈವರೆಗೆ 1.17 ಲಕ್ಷ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಂಜೂರು ಮಾಡಲಾಗಿದೆ. ಬಾಕಿ ಮನೆಗಳ ಹಂಚಿಕೆಗೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ ಎಂದರು. ವಿವಿಧ ವಸತಿ ಯೋಜನೆಯಡಿ ನೀಡಲಾಗುತ್ತಿರುವ ಸಹಾಯಧನ ಹೆಚ್ಚಳ ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆ. ಸಿಎಂ ಬಳಿ ಈ ಬಗ್ಗೆ ಚರ್ಚೆ ಮಾಡಲಾಗಿದೆ. ಸಾಮಾನ್ಯ ವರ್ಗಕ್ಕೆ 3 ಲಕ್ಷ ರೂ. ಮತ್ತು ಪರಿಶಿಷ್ಟ ಜಾತಿ–ಪಂಗಡಗಳಿಗೆ 2 ಲಕ್ಷ ರೂ. ಜಾಸ್ತಿ ಮಾಡಲು ಮನವಿ ಮಾಡಿದ್ದೇವೆ. ವಸತಿ ಯೋಜನೆ ಸಹಾಯಧನ ಹೆಚ್ಚಳ ಮಾಡುವ ಇಚ್ಛೆ ಸರ್ಕಾರಕ್ಕಿದೆ ಎಂದು ತಿಳಿಸಿದರು.

ಬಿಜೆಪಿ ಅವಧಿಯಲ್ಲಿ ಒಂದೇ ಒಂದು ಮನೆ ಕೊಟ್ಟಿದ್ರೆ ನಾನು ರಾಜಕೀಯ ನಿವೃತ್ತಿ



ಬೆಂಗಳೂರು, ಮಾ.12– ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಂದೇ ಒಂದು ಮನೆ ವಸತಿ ಯೋಜನೆಯಡಿ ಕೊಟ್ಟಿಲ್ಲ. ಒಂದು ವೇಳೆ ಬಿಜೆಪಿ ಅವರು ವಸತಿ ಹಂಚಿಕೆ ಮಾಡಿರುವ ದಾಖಲಾತಿ ಕೊಟ್ಟರೆ ನಾನು ರಾಜಕೀಯ ನಿವೃತ್ತಿ ಪಡೆಯುವುದಾಗಿ ವಿಧಾನಪರಿಷತ್‌ನಲ್ಲಿ ವಸತಿ ಸಚಿವ ಜಮೀರ್ ಅಹ್ಮದ್ ಸವಾಲು ಹಾಕಿದರು. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ನವೀನ್, ವಸತಿ ಯೋಜನೆ ಬಗ್ಗೆ ಪ್ರಶ್ನೆ ಮಾಡಿದರು. ಕಾಂಗ್ರೆಸ್ ಸರ್ಕಾರ ವಸತಿ ಯೋಜನೆ ಅಡಿ ಮನೆ ಸರಿಯಾಗಿ ನಿರ್ಮಾಣ ಮಾಡುತ್ತಿಲ್ಲ. ಸಚಿವರು ಸದನಕ್ಕೆ ತೃಪ್ತಿಪಡಿಸಲು ಮಾತ್ರ ಉತ್ತರ ಕೊಡುತ್ತಿದ್ದಾರೆ ಎಂದು ಆರೋಪ ಮಾಡಿದರು.

ಇದರಲ್ಲಿ ರಾಜಕೀಯ ಮಾಡಬೇಡಿ. ಬಿಜೆಪಿ ಅವಧಿಯಲ್ಲಿ ಒಂದೇ ಒಂದು ಮನೆ ಕೊಟ್ಟಿಲ್ಲ. ಮನೆ ಕೊಟ್ಟಿರುವುದುದು ಸಾಬೀತು ಮಾಡಿದರೆ ನಾನು ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ ಎಂದು ಬಿಜೆಪಿ ಸದಸ್ಯರಿಗೆ ಎರಡು ಬಾರಿ ವಸತಿ ಸಚಿವ ಜಮೀರ್ ಅಹಮದ್ ಸವಾಲು ಹಾಕಿದರು.

ಕುಂಭಮೇಳ ಕಾಲ್ತುಳಿತದಲ್ಲಿ ಸಾವು

ಬೆಳಗಾವಿಯ ನಾಲ್ವರ ಕುಟುಂಬಸ್ಥರಿಗೆ ತಲಾ 25 ಲಕ್ಷ ಪರಿಹಾರ

ಬೆಳಗಾವಿ,ಮಾ.12–ಪ್ರಯಾಗ್‌ರಾಜ್ ಮಹಾ ಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಸಾವನ್ನಪ್ಪಿದ ಬೆಳಗಾವಿ ನಾಲ್ವರ ಕುಟುಂಬಸ್ಥರಿಗೆ ಉತ್ತರಪ್ರದೇಶ ಸರ್ಕಾರವು ತಲಾ 25 ಲಕ್ಷ ಪರಿಹಾರ ಬಿಡುಗಡೆ ಮಾಡಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಪ್ರಯಾಗ್‌ರಾಜ್ ಜಿಲ್ಲಾಧಿಕಾರಿ ರವಿ ಮಂದರ್ ಅವರ ಜೊತೆಗೆ ಮಾತುಕತೆ ನಡೆಸಿದ್ದೇನೆ. ಕಾಲ್ತುಳಿತದಲ್ಲಿ ಮೃತರಾದ ಜ್ಯೋತಿ ಹತ್ತರವಾಟ, ಮೇಘಾ ಹತ್ತರವಾಟ, ಮಹಾದೇವಿ ಬಾವನೂರ, ಅರುಣ ಕೋಪರ್ಡೆ ಅವರ ಕುಟುಂಬಸ್ಥರ ಖಾತೆಗಳಿಗೆ ನೇರವಾಗಿ ಪರಿಹಾರ ಧನ ಜಮೆ ಆಗಿದೆ. ನಾವು ಗ್ರಾಮ ಲೆಕ್ಕಾಧಿಕಾರಿ ಮೂಲಕ ಪರಿಶೀಲಿಸಿದ್ದೇವೆ ಎಂದು ಮಾಧ್ಯಮದವರಿಗೆ ಮಾಹಿತಿ ನೀಡಿದರು.

ಮೃತದೇಹಗಳ ವರದಿಯಲ್ಲಿ ಒಂದಿಬ್ಬರ ಹೆಸರಿನಲ್ಲಿ ಅಕ್ಷರದೋಷ ಕಂಡು ಬಂದ ಕುರಿತು ಮೃತರ ಕುಟುಂಬಸ್ಥರು ತಿಳಿಸಿದ್ದರು. ಹಾಗಾಗಿ, ಅದನ್ನು ಅನುಮೋದಿಸಿ, ಸರಿಪಡಿಸಿ ಹೆಸರುಗಳನ್ನು ಪ್ರಯಾಗ್‌ರಾಜ್ ಡಿಸಿಗೆ ವಾಟ್ಸಾಪ್ ಮತ್ತು ಮೇಲ್ ಕಳಿಸಿದ್ದೇನೆ. ಇನ್ನೆರಡು ದಿನಗಳಲ್ಲಿ ಮರಣೋತ್ತರ ವರದಿ ಮತ್ತು ಮರಣ ಪ್ರಮಾಣಪತ್ರವನ್ನು ಕಳಿಸಿಕೊಡುವ ಬಗ್ಗೆ ಅಲ್ಲಿನ ಜಿಲ್ಲಾಡಳಿತ ಭರವಸೆ ನೀಡಿದೆ ಎಂದರು. ಜಿಲ್ಲೆಯಿಂದ ಮಹಾ ಕುಂಭ ಮೇಳಕ್ಕೆ ತೆರಳಿದವರಲ್ಲಿ ಒಟ್ಟು 16 ಮಂದಿ ಸಾವನ್ನಪ್ಪಿದ್ದಾರೆ. ನಾಲ್ವರು ಕಾಲ್ತುಳಿತದಲ್ಲಿ 10 ಮಂದಿ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಹಾಗೂ ಇಬ್ಬರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಆದರೆ, ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ ಮಾತ್ರ ಉತ್ತರಪ್ರದೇಶ ಸರ್ಕಾರ ಪರಿಹಾರ ಘೋಷಿಸಿದೆ.

ಅಧಿಕಾರಿಗಳು ಸಹಕಾರ ಕೊಡುತ್ತಿಲ್ಲ; ಸಚಿವ ಮಂಕಾಳ್ ವೈದ್ಯ ಅಸಹಾಯಕತೆ



ಬೆಂಗಳೂರು,ಮಾ.12–ಹಣಕಾಸು ಇಲಾಖೆ ಅಧಿಕಾರಿಗಳು ನನ್ನ ಇಲಾಖೆಗೆ ಸಹಕಾರ ಕೊಡುತ್ತಿಲ್ಲ. ಅವರು ದುಡ್ಡು ಕೊಡದೇ ನಾನು ಹೇಗೆ ಯೋಜನೆ ಅನುಷ್ಠಾನ ಮಾಡಲಿ ಎಂದು ಮೀನುಗಾರಿಕೆ ಸಚಿವ ಮಂಕಾಳ್ ವೈದ್ಯ ಅಸಹಾಯಕತೆ ವ್ಯಕ್ತಪಡಿಸಿದ ಘಟನೆ ವಿಧಾನಪರಿಷತ್‌ನಲ್ಲಿ ನಡೆಯಿತು.

ಪ್ರಶ್ನೋತ್ತರ ಅವಧಿ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ನಾಗರಾಜ್ ಯಾದವ್ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 2024–25ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆ ಘೋಷಣೆ ಮಾಡಿದ್ದ ಯೋಜನೆ ಅನುಷ್ಠಾನ ಮಾಡಲು ಎಫ್‌ಡಿ (ಹಣಕಾಸು ಇಲಾಖೆ) ಸಹಕಾರ ಕೊಡದ ಕಾರಣ ಕೆಲಸ ಆಗುತ್ತಿಲ್ಲ ಎಂದರು. ಮೀನುಗಾರಿಕೆ ಇಲಾಖೆಗೆ ಸಿಎಂ ಅವರು2024–25ನೇ ಸಾಲಿಗೆ 3 ಸಾವಿರ ಕೋಟಿ ಅನುದಾನ ಕೊಟ್ಟಿದ್ದರು. ನಮ್ಮ ಇಲಾಖೆಯಿಂದ ಯೋಜನೆಗಳಿಗೆ ಡಿಪಿಆರ್ ಸಿದ್ಧಪಡಿಸಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆದರೆ ಆರ್ಥಿಕ ಇಲಾಖೆ ಒಪ್ಪಿಗೆ ಕೊಡದೇ, ಕೇಂದ್ರ ಸರ್ಕಾರದ ಯೋಜನೆ ಅಡಿ ಕೆಲಸ ಪ್ರಾರಂಭ ಮಾಡಬೇಕು ಎಂದು ಸೂಚನೆ ಕೊಟ್ಟಿದ್ದಾರೆ. ಈಗಾಗಲೇ ನಿಗದಿಯಾಗಿದ್ದ ಯೋಜನೆಗಳ ಡಿಪಿಆರ್ ಅನ್ನು ಕೇಂದ್ರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದ ಅನುದಾನ ಬಂದಿಲ್ಲ. ಹೀಗಾಗಿ ಯೋಜನೆ ಪ್ರಾರಂಭ ಮಾಡಲು ಆಗಿಲ್ಲ ಎಂದು ತಿಳಿಸಿದರು.

ದೆಹಲಿ ರೈಲು ನಿಲ್ದಾಣ ಕಾಲ್ತುಳಿತ ಪ್ರಕರಣ

33 ಸಂತ್ರಸ್ತ ಕುಟುಂಬಗಳಿಗೆ 2 ಕೋಟಿ ಪರಿಹಾರ ವಿತರಣೆ



ನವದೆಹಲಿ, ಮಾ.12– ನವದೆಹಲಿಯ ರೈಲು ನಿಲ್ದಾಣದಲ್ಲಿ ಫೆ.15ರಂದು ಸಂಭವಿಸಿದ ಕಾಲ್ತುಳಿತ ಪ್ರಕರಣದ 33 ಸಂತ್ರಸ್ತ ಕುಟುಂಬಗಳಿಗೆ ಒಟ್ಟು 2.01 ಕೋಟಿಯನ್ನು ಹಂಚಲಾಗಿದೆ ಎಂದು ಲೋಕಸಭೆಗೆ ಸರ್ಕಾರ ಮಾಹಿತಿ ನೀಡಿದೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ವೇಳೆ ಮಾಹಿತಿ ನೀಡಿದ ರೈಲು ಸಚಿವ ಅಶ್ವಿನಿ ವೈಷ್ಣವ್, ಕಾಲ್ತುಳಿತ ಪ್ರಕರಣದಲ್ಲಿ ಮೃತಪಟ್ಟ ವ್ಯಕ್ತಿಗಳ ಮಕ್ಕಳಿಗೆ ರೂ.10 ಲಕ್ಷ, ಗಂಭೀರವಾಗಿ ಗಾಯಗೊಂಡವರಿಗೆ ರೂ. 2.5 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ರೂ.1 ಲಕ್ಷದಂತೆ ಪರಿಹಾರ ವಿತರಿಸಲಾಗಿದೆ ಎಂದಿದ್ದಾರೆ. ಪ್ರಯಾಗ್‌ರಾಜ್‌ನಲ್ಲಿ ಜ.13ರಿಂದ ಫೆ.26ರವರೆಗೆ ಆಯೋಜಿಸಿದ್ದ ಮಹಾ ಕುಂಭಮೇಳಕ್ಕೆ ಹೊರಟವರಿಗಾಗಿ ರೈಲ್ವೆ ಇಲಾಖೆಯು ಫೆ. 15ರಂದು ಎರಡು ವಿಶೇಷ ರೈಲುಗಳನ್ನು ವ್ಯವಸ್ಥೆ ಮಾಡಿತ್ತು. ಆದರೆ ರೈಲುಗಳ ಆಗಮನ ಕುರಿತು ನೀಡಿದ ಮಾಹಿತಿಯಲ್ಲಿ ಗೊಂದಲ ಉಂಟಾಗಿದ್ದರಿಂದ ನೂಕುನುಗ್ಗಲು ಉಂಟಾಗಿತ್ತು ಎಂದೆನ್ನಲಾಯಿತು. ಘಟನೆಯಲ್ಲಿ ಒಟ್ಟು ಮೃತಪಟ್ಟವರು ಹಾಗೂ ಗಾಯಗೊಂಡವರ ಮಾಹಿತಿಯನ್ನು ಸಚಿವ ವೈಷ್ಣವ್ ಹಂಚಿಕೊಂಡಿಲ್ಲ. ಆದರೆ ರೈಲ್ವೆ ಇಲಾಖೆ ಅಧಿಕಾರಿಗಳು ನೀಡಿದ ಮಾಹಿತಿಯನ್ವಯ ಕಾಲ್ತುಳಿತ ಪ್ರಕರಣದಲ್ಲಿ 18 ಜನ ಮೃತಪಟ್ಟು 15 ಜನ ಗಾಯಗೊಂಡಿದ್ದಾರೆ ಎಂದು ಹೇಳಿತ್ತು. ಘಟನೆ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ.

ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ನಿರ್ದೇಶಕರು....



ಮೈಸೂರಿನ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ 2025–30ನೇ ಸಾಲಿನ ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಆಯ್ಕೆಯಾದ ಟಿ.ಎನ್.ನಾಗೇಶ್, ಮರೀಗೌಡ, ಎಂ.ಡಿ.ಶಿವರಾಜ್, ಎಂ.ಎಸ್.ಮೋಹನ್, ಸಿದ್ದರಾಜೇಗೌಡ, ನಾಗೇಂದ್ರ ಪ್ರಸಾದ್, ನಾಗರಾಜು, ಸಿ.ವಿ.ರಾಜು, ನಿರಂಜನ್, ಪುಟ್ಟಣ್ಣ, ಶಿವಮಂಜು, ಸುಂದರಿ, ಬೇಬಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಬಿಜೆಪಿ ಸಭಾತ್ಯಾಗದ ನಡುವೆ

ಗ್ರೇಟರ್ ಬೆಂಗಳೂರು ವಿಧೇಯಕ ಅಂಗೀಕಾರ: ಜೆಡಿಎಸ್ ಬೆಂಬಲ

ಬೆಂಗಳೂರು, ಮಾ.12– ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆ ಇಂದು ಪರಿಷತ್‌ನಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ–2024 ಅನ್ನು ಅಂಗೀಕಾರ ಮಾಡಲಾಯಿತು.

ಪರಿಷತ್‌ನಲ್ಲಿ ಗ್ರೇಟರ್ ಬೆಂಗಳೂರು ಬಿಲ್ ಮಂಡಿಸಿದ ಡಿಸಿಎಂ ಡಿ.ಕೆ. ಶಿವಕುಮಾರ್, ಅಧಿಕಾರ ವಿಕೇಂದ್ರೀಕರಣವನ್ನು ಸಮರ್ಥಿಸಿದರು. ಸುಮಾರು 2.50 ಗಂಟೆಗಳ ಕಾಲ ಚರ್ಚೆ ನಡೆಯಿತು. ಕೊನೆಗೆ ಬಿಜೆಪಿ ಸಭಾತ್ಯಾಗದ ನಡುವೆ ವಿಧೇಯಕವನ್ನು ಅಂಗೀಕರಿಸಲಾಯಿತು. ಬಿಲ್‌ಗೆ ವಿರೋಧ ವ್ಯಕ್ತಪಡಿಸಿದ ಬಿಜೆಪಿ ಸಭಾತ್ಯಾಗ ಮಾಡಿದರೆ, ಜೆಡಿಎಸ್ ಸದಸ್ಯರು ಬೆಂಬಲ ಸೂಚಿಸಿದರು.

ಬಿಲ್ ಮಂಡಿಸಿ ಮಾತನಾಡಿದ ಡಿಕೆಶಿ, ಬೆಂಗಳೂರಿಗೆ ದೊಡ್ಡ ಇತಿಹಾಸ ಇದೆ. ಕೆಂಪೇಗೌಡರು ಬೆಂಗಳೂರು ಕಟ್ಟಿದರು. 50 ಕಿಲೋಮೀಟರ್ ಬೆಂಗಳೂರು ಬೆಳೆದಿದೆ. ಬೆಂಗಳೂರು ಅಭಿವೃದ್ಧಿ ಮಾಡಬೇಕು, ಆಡಳಿತ ವಿಕೇಂದ್ರೀಕರಣ ಆಗಬೇಕು. ಉತ್ತಮವಾದ ಆಡಳಿತ ಕೊಡಬೇಕು ಅಂತ ಈ ಬಿಲ್ ತಂದಿದ್ದೇವೆ ಎಂದು ಸಮರ್ಥಿಸಿಕೊಂಡರು.

198 ವಾರ್ಡ್ 2007 ರಲ್ಲಿ ಬಿಬಿಎಂಪಿ ರಚನೆ ಮಾಡಲಾಗಿತ್ತು ಬೆಂಗಳೂರು ಅಭಿವೃದ್ಧಿ ಆಗಬೇಕಾದರೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ಬಿ.ಎಸ್.ಪಾಟೀಲ್ ಅವರಿಂದ ಈ ಬಗ್ಗೆ ವರದಿ ಪಡೆದಿದ್ದೇವೆ. ಆ ವರದಿ ಆಧಾರದಲ್ಲಿ ನಾನು ಬಿಲ್ ಸದನಕ್ಕೆ ತಂದಿದ್ದೇವೆ. ಸದನ ಸಮಿತಿ ರಚನೆ ಮಾಡಬೇಕು ಅಂತ ಅಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಹಿನ್ನಲೆಯಲ್ಲಿ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ಸದನ ಸಮಿತಿ ರಚನೆ ಮಾಡಿದ್ವಿ. 5–6 ತಿಂಗಳು ಸದನ ಸಮಿತಿ ಚರ್ಚೆ ಮಾಡಿ ವರದಿ ಕೊಟ್ಟಿದ್ದಾರೆ. ಸದನ ಸಮಿತಿ ಅವರು ಎಲ್ಲರ ಸಭೆ ಮಾಡಿದ್ದಾರೆ. ಎಲ್ಲರ ಅಭಿಪ್ರಾಯ ಪಡೆದು ವರದಿ ಕೊಟ್ಟಿದ್ದಾರೆ.

ಅಲ್ಲದೇ 74ನೇ ತಿದ್ದುಪಡಿಯನ್ನು ನಾವು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲ. ಬಿಜೆಪಿ ಅವರು ವರದಿ ಒಪ್ಪಿದ್ದಾರೆ. ರಾಜಕೀಯಕ್ಕೆ ವಿರೋಧ ಮಾಡ್ತಿದ್ದಾರೆ ಅಷ್ಟೆ. ಮೇಯರ್ ಅವಧಿ 2.5 ವರ್ಷ ಇರಲಿ. ಇದೊಂದು ಐತಿಹಾಸಿಕ ಬಿಲ್ ತಂದಿದ್ದೇವೆ. ಸದಸ್ಯರು ಸಲಹೆಗಳನ್ನು ಕೊಟ್ಟರೆ ಅದನ್ನು ಸ್ವೀಕಾರ ಮಾಡುತ್ತೇವೆ. ಏನಾದರೂ ತಪ್ಪಿದ್ದರೆ ಅದನ್ನು ಸರಿ ಮಾಡಿಕೊಳ್ಳುತ್ತೇವೆ. ಪಾಲಿಕೆ ಎಷ್ಟು ಮಾಡಬೇಕು ಎಂಬುದರ ಚರ್ಚೆಯೂ ಆಗುತ್ತಿದೆ. ಯಾವುದೇ ಕಾರ್ಪೋರೇಷನ್‌ಗೂ ಬೆಂಗಳೂರು ಬಿಟ್ಟು ಹೆಸರು ಇಡುವುದಿಲ್ಲ. ಬೆಂಗಳೂರು ನಾರ್ಥ್, ಈಸ್ಟ್, ಸೌಥ್ ಅಂತ ಹೆಸರು ಇಡುತ್ತೇವೆ. ಒಂದು ಪಾಲಿಕೆಗೆ 150 ವಾರ್ಡ್ ಇರಲಿದೆ. ಸಿಎಂ ನೇತೃತ್ವದಲ್ಲಿ ಹೈ ಲೆವೆಲ್ ಸಮಿತಿ ಇರಲಿದೆ. ವಾರ್ಡ್ ಕಮಿಟಿಯನ್ನು ಮಾಡ್ತಿದ್ದೇವೆ ಎಂದು ಡಿಕೆಶಿ ಸದನದ ಗಮನಕ್ಕೆ ತಂದರು.

ನಟಿ ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಕೇಸ್

ಸಿಐಡಿ ತನಿಖೆ ಆದೇಶ ಹಿಂಪಡೆದ ರಾಜ್ಯ ಸರ್ಕಾರ!

ಬೆಂಗಳೂರು, ಮಾ.12– ನಟಿ ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣವನ್ನು ಸಿಐಡಿ ತನಿಖೆಗೆ ಕೊಟ್ಟಿದ್ದ ರಾಜ್ಯ ಸರ್ಕಾರ ಕೇವಲ ಎರಡೇ ದಿನದಲ್ಲಿ ಸಿಐಡಿ ತನಿಖೆ ವಾಪಸ್ ಪಡೆದುಕೊಂಡಿದೆ ಈ ಮೂಲಕ ರನ್ಯಾರಾವ್ ಕೇಸಿನಲ್ಲಿ ಸಚಿವರೊಬ್ಬರು ಭಾಗಿಯಾಗಿದ್ದಾರೆ ಎನ್ನುವ ಅನುಮಾನಕ್ಕೆ ರಾಜ್ಯ ಸರ್ಕಾರ ಮತ್ತಷ್ಟು ಪುಷ್ಟಿ ನೀಡಿದಂತಾಗಿದೆ. ಆದರೆ, ಸರ್ಕಾರ ಕೊಡುವ ಕಾರಣವೇ ಬೇರೆ.

ನಟಿ ರನ್ಯಾ ರಾವ್ ಚಿನ್ನದ ಕಳ್ಳ ಸಾಗಣೆಯಲ್ಲಿ ಸಿಕ್ಕಿಬಿದ್ದ ಬೆನ್ನಲ್ಲಿಯೇ ರಾಜ್ಯ ಸರ್ಕಾರದ ಪ್ರೋಟೋಕಾಲ್‌ನಲ್ಲಿ ಎಲ್ಲಿ ತಪ್ಪಾಗಿದೆ ಎಂಬುದನ್ನು ತನಿಖೆ ಮಾಡಲು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಇಲ್ಲಿ ನಟಿ ರನ್ಯಾ ರಾವ್ ಒಂದು ವರ್ಷದಲ್ಲಿ 28ರಿಂದ 30 ಬಾರಿ ದುಬೈಗೆ ಹೋಗಿ ಬಂದಿದ್ದರೂ, ಯಾರಿಗೂ ಸಿಕ್ಕಿಬೀಳದೇ ಹೇಗೆ ಹೊರಗೆ ಬರುತ್ತಿದ್ದರು ಎಂಬುದು ಅನುಮಾನವಾಗಿದೆ. ಈ ಹಿನ್ನೆಲೆಯಲ್ಲಿ ನಟಿ ರನ್ಯಾರಾವ್‌ಗೆ ಪ್ರೋಟೋಕಾಲ್ ಮೂಲಕ ರಕ್ಷಣೆ ಕೊಡುತ್ತಿದ್ದ ವ್ಯಕ್ತಿ ಯಾರೆಂಬುದು ಈ ತನಿಖೆಯಿಂದ ತಿಳಿದುಬರುತ್ತಿತ್ತು. ಆದರೆ, ಇದೀಗ ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದ್ದ ತನಿಖೆಯನ್ನು ವಾಪಸ್ ಪಡೆದುಕೊಂಡಿದೆ. ಈ ಮೂಲಕ ಪ್ರೊಟೋಕಾಲ್‌ನಲ್ಲಿ ಎಲ್ಲಿ ತಪ್ಪಾಗಿದೆ ಎಂಬುದನ್ನು ಮುಚ್ಚಿಹಾಕಲು ಮುಂದಾಗಿದೆಯೇ ಎಂಬ ಅನುಮಾನಕ್ಕೆ ದಾರಿ ಮಾಡಿಕೊಟ್ಟಿದೆ.

ಸರ್ಕಾರದ ಕಾರಣ: ರಾಜ್ಯ ಸರ್ಕಾರ ಸಿಐಡಿ ತನಿಖೆ ಯಿಂದ ರನ್ಯಾ ರಾವ್ ಕೇಸ್ ವಾಪಸ್ ಪಡೆದಿದ್ದಕ್ಕೆ ಕಾರಣವನ್ನೂ ಕೊಟ್ಟಿದೆ. ನಟಿ ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಮಾಡುವುದಕ್ಕೆ ಆರೋಪಿಯ ತಂದೆ ರಾಮಚಂದ್ರರಾವ್ ಅವರಿಂದ ಪ್ರೋಟೋಕಾಲ್ ದುರ್ಬಳಕೆ ಆಗಿದೆಯೇ ಎಂಬುದನ್ನು ತನಿಖೆ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರನ್ನು ನಿಯೋಜನೆ ಮಾಡಲಾಗಿದೆ. ಹೀಗಾಗಿ, ಪುನಃ ಸಿಐಡಿ ತನಿಖೆ ಬೇಡ ಎಂದು ರಾಜ್ಯ ಸರ್ಕಾರ ಆದೇಶ ವಾಪಸ್ ಪಡೆದಿದೆ. ಇನ್ನು ಗೌರವ್ ಗುಪ್ತ ಅವರು ಒಂದು ವಾರದೊಳಗೆ ಪ್ರೊಟೋಕಾಲ್ ದುರ್ಬಳಕೆ ಆಗಿದೆಯೋ ಇಲ್ಲವೋ ಎಂಬುದನ್ನು ವರದಿ ನೀಡುವಂತೆ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ.

ಈಗಾಗಲೇ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಹಾಗೂ ಸಿಬಿಐ ಈ ಪ್ರಕರಣವನ್ನು ತನಿಖೆ ಮಾಡುತ್ತಿವೆ. ಜೊತೆಗೆ, ನಟಿ ರನ್ಯಾ ರಾವ್ ಮನೆಯಲ್ಲಿ 2 ಕೋಟಿ ರೂ.ಗಿಂತ ಅಧಿಕ ಮೌಲ್ಯದ ನಗದು ಹಣ ಹಾಗೂ ಹಲವು ಕೆಜಿ ಚಿನ್ನ ಸಿಕ್ಕಿದೆ. ಈ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಇಲಾಖೆಯೂ ಈ ಪ್ರಕರಣವನ್ನು ತನಿಖೆ ಮಾಡಲು ಮುಂದಾಗಿದೆ. ಆದರೆ, ಮೇಲಿನ ಮೂರು ಇಲಾಖೆಗಳ ತನಿಖೆಯಲ್ಲಿ ಪ್ರೋಟೋಕಾಲ್‌ನಲ್ಲಿ ಯಾರು ತಪ್ಪು ಮಾಡಿದ್ದಾರೆ, ಯಾರ ಕೈವಾಡವಿದೆ ಎಂಬುದರ ತನಿಖೆ ನಡೆಯುವುದಿಲ್ಲ ಎಂದು ಹೇಳಲಾಗುತ್ತಿದೆ. ಇದೀಗ ಮುಂದಿನ ತನಿಖೆ ಹೇಗೆ ನಡೆಯುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ನಟಿ ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಮಾಡುವುದಕ್ಕೆಂದೇ 2 ವರ್ಷಕ್ಕೆ ಮಲ್ಟಿಪಲ್ ಎಂಟ್ರಿ ವೀಸಾ ಹಾಗೂ ಅಲ್ಲಿನ ರೆಸಿಡೆಂಟ್ ವೀಸಾ ಪಡೆದುಕೊಂಡಿದ್ದರು. ಈ ವೀಸಾ ಪಡೆದುಕೊಳ್ಳಲು 83 ಲಕ್ಷ ಖರ್ಚು ಮಾಡಿದ್ದಾರೆ. ಇನ್ನು ನಟಿ ರನ್ಯಾ ಬೆಂಗಳೂರಿನ ಏಟ್ರಿಯಾ ಹೋಟೆಲ್‌ನ ಮಾಲೀಕರ ತಮ್ಮನ ಮಗ ತರುಣ್ ರಾಜ್ ಅವರ ದುಬೈನಲ್ಲಿದ್ದ ಒಂದು ಡೈಮಂಡ್ ಉದ್ಯಮದ ಪಾಲುದಾರಿಕೆಯನ್ನೂ ಹೊಂದಿದ್ದರು. ಈ ಬ್ಯುಸಿನೆಸ್ ಉದ್ದೇಶದಿಂದ ಪದೇ ಪದೆ ನಟಿ ರನ್ಯಾ ರಾವ್ ದುಬೈಗೆ ಹೋಗಿ ಬರಲು ಕಾರಣ ಎಂದು ಹೇಳುತ್ತಿದ್ದರು.


ಚಿಕಿತ್ಸಾ ವೆಚ್ಚಕ್ಕಾಗಿ ಆರ್ಥಿಕ ನೆರವು...



ಮೈಸೂರು ಲಯನ್ಸ್ ಅಂಬಾಸಿಡರ್ ಸಂಸ್ಥೆ ವತಿಯಿಂದ ದಿವ್ಯ ಅವರ ಪತಿಯ ವೈದ್ಯಕೀಯ ಚಿಕಿತ್ಸಾ ವೆಚ್ಚಕ್ಕಾಗಿ 10000 ರೂ.ಗಳನ್ನು ನೀಡಲಾಯಿತು. ಚಿತ್ರದಲ್ಲಿ ಲಯನ್ಸ್ ಜಿಲ್ಲಾ ರಾಜ್ಯಪಾಲ ಸುಬ್ರಮಣ್ಯ, ಸಂಸ್ಥೆ ಅಧ್ಯಕ್ಷ ವಿ.ಶ್ರೀಧರ್, ಡಾ.ಆರ್.ಡಿ. ಕುಮಾರ್, ಜಿಲ್ಲಾ ಸಂಪುಟ ಕಾರ್ಯದರ್ಶಿ ಲಯನ್ ಸಿ.ಡಿ.ಕೃಷ್ಣ, ಲಯನ್ ಪಿ. ರಮೇಶ್, ಲಯನ್ ಪಿ.ಮಲ್ಲಿಕಾರ್ಜುನಪ್ಪ, ಲಯನ್ ಎಚ್.ಆರ್.ರವಿಚಂದ್ರ ಇದ್ದರು.

ಪ್ರಸ್ತುತ ಸ್ತ್ರೀಯರ ಸಮಸ್ಯೆಗೆ 'ಅಕ್ಕನ' ವಿಚಾರಗಳೇ ಪರಿಹಾರ

ಸರಣಿ ಉಪನ್ಯಾಸ ಮಾಲಿಕೆಯಲ್ಲಿ ರಾಜ್ಯ ಮುಕ್ತ ವಿವಿ ಅಕ್ಕ ಮಹಾದೇವಿ ಸಂಶೋಧನಾ ಪೀಠದ ನಿರ್ದೇಶಕಿ ಡಾ.ಕವಿತಾ ರೈ ಅಭಿಮತ



ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮ ಬುಧವಾರ ನಡೆಯಿತು.

ಮೈಸೂರು, ಮಾ. 12–ಈ ನೆಲದ ಚರಿತ್ರೆಯನ್ನು ತಿಳಿದಿದ್ದರೆ ಮಾತ್ರ ಅಕ್ಕಮಹಾದೇವಿಯನ್ನು ಅರ್ಥಮಾಡಿಕೊಳ್ಳಬಹುದು. ಸಾರ್ವತ್ರಿಕ ಅಭಿವ್ಯಕ್ತಿಯನ್ನು ರೂಪಿಸಿದ ಸಂದರ್ಭವೇನಾದರೂ ಇದ್ದರೆ ಅದು ವಚನ ಕಾಲಘಟ್ಟ. ಈ ಸಮಾಜಕ್ಕೆ ಕಾಯಕಲ್ಪ ನೀಡಿದ್ದುದು ಬಸವಣ್ಣನವರ ಮಹಾಮನೆ 'ಅನುಭವ ಮಂಟಪ' ಎಂದು (ಕರಾಮುವಿ) ಅಕ್ಕ ಮಹಾದೇವಿ ಸಂಶೋಧನಾ ಪೀಠದ ನಿರ್ದೇಶಕರಾದ ಡಾ.ಕವಿತಾ ರೈ ಅಭಿಪ್ರಾಯಪಟ್ಟರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೈಸೂರಿನ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ ಮತ್ತು ವಿದ್ಯಾವರ್ಧಕ ಕಾಲೇಜು ಜಂಟಿಯಾಗಿ ಆಯೋಜಿಸಿದ್ದ ಸರಣಿ ಉಪನ್ಯಾಸ ಮಾಲಿಕೆಯಲ್ಲಿ ಅಕ್ಕ ಮಹಾದೇವಿ ವಚನಗಳಲ್ಲಿನ ಚಿಂತನೆ ಕುರಿತು ಸಂಪನ್ಮೂಲ ವ್ಯಕ್ತಿಯಾದ ಡಾ.ಕವಿತಾ ರೈ ಮಾತನಾಡುತ್ತಿದ್ದರು.

ಇಂದಿನ ಸ್ತ್ರೀವಾದದ ಸಂದರ್ಭದಲ್ಲಿ ಅಕ್ಕಮಹಾದೇವಿಯನ್ನು ನೆನೆಯುವುದು ಅನಿವಾರ್ಯವಾಗಿದೆ. ಅಂದು ಮಹಾಮನೆಯಲ್ಲಿ 2ಲಕ್ಷಕ್ಕೂ ಅಧಿಕ ಜನರಿಗೆ ದಾಸೋಹ ನಡೆಯುತ್ತಿತ್ತೆಂದು ಚನ್ನಬಸವಣ್ಣ ದಾಖಲಿಸುತ್ತಾನೆ ಬಸವಣ್ಣ ವಿಲೋಮ ಕಲ್ಯಾಣ ಮಾಡಿಸಿದ್ದರಿಂದಾಗಿ ಆಸ್ಥಾನವನ್ನು ಬಿಟ್ಟು ಹೊರಬರಬೇಕಾಯಿತು.

ಇದನ್ನು ವಚನ ಭಂಡಾರಿ ಶಾಂತರಸ ಹೀಗೆ ಹೇಳುತ್ತಾನೆ; ಕಲ್ಯಾಣ ನಾಶವಾಯಿತು, ಮಹಾಮನೆ ಹಾಳಾಯಿತು. ವಚನ ನಿರ್ವಚನವಾಯಿತು. ಅಕ್ಕನ ವಚನಗಳಲ್ಲಿ ಹೆಣ್ಣನ್ನು ಸಂಪತ್ತನ್ನಾಗಿ ನೋಡುವುದನ್ನು ವಿರೋಧಿಸಲಾಗಿದೆ. ಕೌಶಿಕನನ್ನು ತೊರೆದು ಮಲ್ಲಿಕಾರ್ಜುನನನ್ನೇ ತನ್ನ ಗಂಡನೆಂದು ಬಗೆದು ಕಾವ್ಯಾತ್ಮಕವಾದ ವಚನಗಳನ್ನು ರಚಿಸಿದವಳು ಮಹಾದೇವಿ ಅಕ್ಕ. ಇದುವರೆಗೂ ನಮಗೆ 645 ಅಕ್ಕನ ವಚನಗಳು ದೊರೆತಿವೆ. ಅಕ್ಕನ ವಚನಗಳಲ್ಲಿ ಸಮಾನತೆಯನ್ನು ನಾವು ಕಾಣಬಹುದು. ಬದುಕಿನಲ್ಲಿ ಬೆಂದು ಬಂದವಳು ಅಕ್ಕ ಮಹಾದೇವಿ. ಮಹಾದೇವಿಯನ್ನು ಅಕ್ಕ ಎಂದು ಕರೆದವನೇ ನಮ್ಮ ಬಸವಣ್ಣ' ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಅರವಿಂದ ಮಾಲಗತ್ತಿ ಮಾತನಾಡಿ, ಈ ಕೇಂದ್ರವು ತನ್ನ ಪರಿಧಿಯಲ್ಲಿ ಮಾತ್ರ ವಿಶೇಷ ಉಪನ್ಯಾಸಗಳನ್ನು ಆಯೋಜಿಸದೇ ಪ್ರತಿ ಕಾಲೇಜುಗಳಲ್ಲೂ ವಚನ ಕಾಲಘಟ್ಟದ ಬಗ್ಗೆ ಉಪನ್ಯಾಸಗಳನ್ನು ನಡೆಸುತ್ತಾ ಬಂದಿದೆ. ಸತ್ಯ ನುಡಿಯುವುದೇ ಶರಣರ ಆಲೋಚನೆಯಾಗಿತ್ತು. ಶರಣರು ಸಮಾಜದಲ್ಲಿ ಸಮಾನತೆಗಾಗಿ ತಮ್ಮ ವಚನಗಳ ಮೂಲಕ ದುಡಿದಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡಿ, ಅಂದು ನಮ್ಮ ಮನೆಗಳಲ್ಲೂ ಅಕ್ಕ ಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದವರ ಚಿತ್ರಪಟಗಳನ್ನು ಪೂಜಿಸಲಾಗುತ್ತಿತ್ತು. ನಮಗೆ ಈಗ ಅದರ ಮಹತ್ವ ತಿಳಿದು ಬರುತ್ತಿದೆ. ನಾನು ಕೂಡ ಅಕ್ಕನ ವಚನಗಳನ್ನು ಕೇಳಿದ್ದು ಅಕ್ಕನ ಕ್ರಾಂತಿಕಾರಿಯ, ಹೆಣ್ಣುಗಂಡುಗಳ ಭೇದಭಾವವನ್ನು ವಿರೋಧಿಸುವ ಭಾವವಿರುವುದನ್ನು ಕಂಡಿದ್ದೇನೆ. ವಚನಗಳು ಇಂದಿಗೂ ಕೂಡ ಎಲ್ಲರಿಗೂ ಮಾರ್ಗದರ್ಶಕವಾದ ಮಾತುಗಳಾಗಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸರಣಿ ಉಪನ್ಯಾಸಗಳ ಸಂಚಾಲಕ ಡಾ.ಮೈಲಹಳ್ಳಿ ರೇವಣ್ಣ, ಅಧ್ಯಾಪಕ ಸಲಹೆಗಾರ ಡಾ.ಪಿ.ಕೆ. ಗೋವರ್ಧನ್ ಹಾಜರಿದ್ದರು. ಪ್ರಾರ್ಥನೆ ಹಾಗೂ ಸ್ವಾಗತವನ್ನು ಕನ್ನಡ ವಿಭಾಗದ ಪ್ರೊ.ಮಂಜು.ಜೆ ನೆರವೇರಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಮೈಸೂರು ಮಿತ್ರ ಗುರುವಾರ 13 ಮಾರ್ಚ್ 2025

ಮಾ.21ರಂದು ಮೇಕೆದಾಟು ಯೋಜನೆಗಾಗಿ ವಿಧಾನಸೌಧ ಚಲೋ

ಕರ್ನಾಟಕ ರಕ್ಷಣಾ ವೇದಿಕೆಯ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

ಮಂಡ್ಯ, ಮಾ.12– ಮಾ.21ರಂದು ಮೇಕೆದಾಟು ಯೋಜನೆಗಾಗಿ ಆಗ್ರಹಿಸಿ ವಿಧಾನಸೌಧ ಚಲೋ ನಡೆಯಲಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್‌ಶೆಟ್ಟಿ ತಿಳಿಸಿದ್ದಾರೆ.


ಪೂರ್ವಭಾವಿ ಸಭೆಯಲ್ಲಿ ಕರವೇ ರಾಜ್ಯಾಧ್ಯಕ್ಷ ಪ್ರವೀಣ್ ಶೆಟ್ಟಿ ಮಾತನಾಡಿದರು.

ನಗರದಲ್ಲಿರುವ ಪ್ರವಾಸಿಮಂದಿರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ್‌ಶೆಟ್ಟಿ ಬಣ) ಜಿಲ್ಲಾ ಘಟಕ ಆಯೋಜಿಸಿದ್ದ ಪದಾಧಿಕಾರಿಗಳ ಸಭೆ ಮತ್ತು ಹೋರಾಟದ ರೂಪುರೇಷೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಮೇಕೆದಾಟು ಯೋಜನೆ ರೂಪಿಸುತ್ತೇವೆ ಎಂದು ಜನರಿಗೆ ಆಶ್ವಾಸನೆ ನೀಡಿ, ಉಪ ಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಅಂದು ಮೇಕೆದಾಟು ಪಾದಯಾತ್ರೆ ಮಾಡಿ ಅಧಿಕಾರಕ್ಕೆ ಬಂದು 2 ವರ್ಷ ಆಗುತ್ತಿದ್ದರೂ 2 ಬಜೆಟ್‌ನಲ್ಲೂ ಯೋಜನೆಗೆ ಹಣ ಬಿಡುಗಡೆ ಮಾಡಿಲ್ಲ, ಯೋಜನೆ ಬಗ್ಗೆ ರೂಪರೇಷೆಗಳನ್ನು ಚರ್ಚಿಸಿಲ್ಲ ಎಂದು ಕಿಡಿಕಾರಿದರು.

ನಾಡಿನ ಎಲ್ಲಾ ಜಿಲ್ಲೆಗಳಿಂದಲೂ ಕನ್ನಡಿಗರು–ಕನ್ನಡಪರ ಸಂಘಟನೆಗಳ ಮುಖ್ಯಸ್ಥರು ವಿಧಾನಸೌಧ ಚಲೋ ಆಂದೋಲನದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಲಿದ್ದೇವೆ, ಮೇಕೆದಾಟು ಯೋಜನೆಗೆ ಆಗ್ರಹಿಸಲಿದ್ದೇವೆ. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರೊಂದಿಗೆ ಒಳ ಒಪ್ಪಂದ ಮಾಡಿಕೊಂಡಿರುವ ಬಗ್ಗೆ ಅನುಮಾನವನ್ನು ಎತ್ತಿಹಿಡಿಯಲಿದ್ದೇವೆ ಎಂದು ಎಚ್ಚರಿಸಿದರು.

ನೆಲ–ಜಲ, ನಾಡು ನುಡಿ–ಕನ್ನಡಿಗರ ರಕ್ಷಣೆಗಾಗಿ ಹಲವು ದಶಕಗಳಿಂದ ಹೋರಾಟ ಮಾಡಿಕೊಂಡು ಬರುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆ ಹೋರಾಟಗಾರರ ಮೇಲೆ ಕೇಸುಗಳು ದಾಖಲಾದವು ಹೊರತು ಹೋರಾಟದ ಆಶಯಗಳು ಈಡೇರಲಿಲ್ಲ. ಸರ್ಕಾರಗಳು ಹೋರಾಟವನ್ನು ಹತ್ತಿಕ್ಕುವ ಕಾರ್ಯಭಾರದಲ್ಲಿಯೇ ಕಾಲಕಳೆದವು ಎಂದು ವಿಷಾದಿಸಿದರು.

ಕನ್ನಡ ನಾಡಿನಲ್ಲಿ ಕನ್ನಡಿಗರಿಗೆ ಉದ್ಯೋಗ–ಉದ್ಯಮಗಳನ್ನು ನಡೆಸಲು ಡಾ.ಸರೋಜಿನಿ ಮಹಿಷಿ ವರದಿಯನ್ನು ಜಾರಿ ಮಾಡದೆ ಮೀನಾಮೇಷ ಎಣಿಸುತ್ತಿರುವ ಸರ್ಕಾರಕ್ಕೆ ಎಚ್ಚರಿಕೆ ಮತ್ತು ಗಡುವು ನೀಡಲು ಮುಂದಾಗಿದ್ದೇವೆ. ಇಂತಹ ಜ್ವಲಂತ ಸಮಸ್ಯೆಗಳನ್ನು ಇಟ್ಟಿಕೊಂಡು ಆಡಳಿತ ಮಾಡುತ್ತಿರುವ ಸರ್ಕಾರ ಕನ್ನಡಿಗರ ವಿರೋಧಿ ನೀತಿ ಅನುಸರಿತ್ತಿದೆ ಎಂದು ಎಚ್ಚರಿಸಿದರು.

ಬಳಿಕ ಮಾತನಾಡಿದ ಜಿಲ್ಲಾಧ್ಯಕ್ಷ ಡಿ.ಅಶೋಕ್, ಹಲವು ದಶಕಗಳಿಂದ ಕನ್ನಡಪರ ಧ್ವನಿಯಾಗಿ ನಾಡು ನುಡಿ ನೆಲಜಲ ರಕ್ಷಣೆಗಾಗಿ ಹೋರಾಟ ಮಾಡಿಕೊಂಡು ಬರುತ್ತಿರುವ ಕರವೇ ಸಂಘಟನೆ ಶಕ್ತಿಯುತವಾಗಿ ಬೆಳೆದಿದೆ. ಕಾರ್ಯಕರ್ತರೇ ಸಂಘಟನೆಗಳಿಗೆ ಸ್ಫೂರ್ತಿಯಾಗಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ಸಂಘಟನೆಯನ್ನು ಮತ್ತಷ್ಟು ಬಲಿಷ್ಠಗೊಳಿಸಿ, ಹೋರಾಟಕ್ಕೆ ಶಕ್ತಿ ತುಂಬುವ ಕಾರ್ಯ ಮಾಡಲಾಗುವುದು, ರಾಜ್ಯಾಧ್ಯಕ್ಷರ ಮಾರ್ಗದರ್ಶನದಲ್ಲಿ ಹೋರಾಟ ರೂಪಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಹಲವರು ಕನ್ನಡಪರ ಸಂಘಟನೆಗೆ ಸೇರ್ಪಡೆಗೊಂಡರು.

ಕಾರ್ಯಕ್ರಮದಲ್ಲಿ ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಹೆಮ್ಮಿಗೆ ಚಂದ್ರಶೇಖರ್, ಕರವೇ ರಾಜ್ಯ ಉಪಾಧ್ಯಕ್ಷ ಉಮೇಶ್‌ಗೌಡ, ಮಂಡ್ಯ ನಗರದ ಮಹಿಳಾ ಅಧ್ಯಕ್ಷೆ ಮೈತ್ರಾ, ದುದ್ದಹೋಬಳಿ ಅಧ್ಯಕ್ಷ ಕಾರ್ತಿಕ್, ಮುಖಂಡರಾದ ರಾಜೇಶ್, ಮೋಹನ್, ಯೋಗೇಶ್, ಮಹೇವು, ಸ್ವಾಮಿ ಮತ್ತಿತರರಿದ್ದರು.

ಮಂದಗೆರೆ ಗ್ರಾಪಂಗೆ ರೇಖಾ ಉಪಾಧ್ಯಕ್ಷೆ


ನೂತನ ಉಪಾಧ್ಯಕ್ಷೆ ರೇಖಾ ಭಾಸ್ಕರ್ ಅವರನ್ನು ಅಭಿನಂದಿಸಲಾಯಿತು.

ಕೆ.ಆರ್.ಪೇಟೆ, ಮಾ.12 ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಮಂದಗೆರೆ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಆಲೇನಹಳ್ಳಿಯ ರೇಖಾ ಭಾಸ್ಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷರಾದ ಪಲ್ಲವಿ ಅರುಣ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ರೇಖಾ ಭಾಸ್ಕರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸ ಕಾರಣ ಅವಿರೋಧ ಆಯ್ಕೆ ನಡೆಯಿತು. ಚುನಾವಣಾಧಿಕಾರಿಯಾಗಿ ಸಿಡಿಪಿಓ ಅರುಣ್ ಕುಮಾರ್ ಕಾರ್ಯನಿರ್ವಹಿಸಿದರು. ಸಹ ಚುನಾವಣಾಧಿಕಾರಿಗಳಾಗಿ ತಾ.ಪಂ. ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಸುವರ್ಣ ಕಾರ್ಯನಿರ್ವಹಿಸಿದರು.

ನೂತನ ಉಪಾಧ್ಯಕ್ಷೆ ರೇಖಾ.ಎಂ.ಭಾಸ್ಕರ್ ಅವರನ್ನು ಪಿಡಿಓ ಸುವರ್ಣ, ಗ್ರಾಪಂ. ಸದಸ್ಯರಾದ ಎಂ.ಬಿ.ಚೆಲುವೇಗೌಡ, ಎಂ.ಕೆ.ಮೋಹನ್, ವಿಜಯ್‌ಕುಮಾರ್.ಜಿ.ಎಂ, ನಂದಿನಿ.ಕೆ.ಎಸ್, ಅನುಕುಮಾರ್, ಜಯಲಕ್ಷ್ಮಿ, ಮಂಗಳ, ಲಕ್ಷ್ಮಮ್ಮ, ದೊಡ್ಡೇಗೌಡ, ಮಂಜೇಗೌಡ, ನಿಂಗಮ್ಮ ಕೆ.ಎಸ್.ಜಗದೀಶ್, ಅಶ್ವತ್ಥಾಚಾರ್, ಪಲ್ಲವಿ, ಕಾಮಾಕ್ಷಮ್ಮ, ಕೃಷ್ಣಜೋಗಿ, ಕಾವೇರಿ.ಎಂ.ಕೆ, ಎ.ಆರ್.ನಿಂಗರಾಜು, ಮುಖಂಡರಾದ ನಿಂಗರಾಜು, ಮಹೇಶ್, ಚಂದ್ರಶೇಖರ್ ಇದ್ದರು.

ನಾಳೆ ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ

ಮಂಡ್ಯ, ಮಾ.12– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾರ್ಚ್ 14 ರಂದು ಬೆಳಿಗ್ಗೆ 11 ಗಂಟೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿಯನ್ನು ಆಯೋಜಿಸಲಾಗಿದೆ. ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದು, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಗುಡಿಗೆರೆ ಗೇಟ್ ಬಳಿ ಕಾರು, ಆಟೋ ನಡುವೆ ಡಿಕ್ಕಿ: ಆಟೋ ಸಂಪೂರ್ಣ ಜಖಂ


ರಸ್ತೆ ಅಪಘಾತದಲ್ಲಿ ಜಖಂಗೊಂಡಿರುವ ಆಟೋ ಮತ್ತು ಕಾರು.

ಭಾರತೀನಗರ,ಮಾ.12– ಇಲ್ಲಿಗೆ ಸಮೀಪದ ಗುಡಿಗೆರೆ ಗೇಟ್ ಬಳಿ ಕಾರು ಮತ್ತು ಆಟೋ ನಡುವೆ ಡಿಕ್ಕಿ ಸಂಭವಿಸಿ, ಆಟೋ ಸಂಪೂರ್ಣವಾಗಿ ಜಖಂಗೊಂಡಿರುವ ಘಟನೆ ಬುಧವಾರ ಜರುಗಿದೆ.

ಆಟೋ ಚಾಲಕ ಅನಿಫ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕೊಳ್ಳೇಗಾಲ ಕಡೆಯಿಂದ ಬೆಂಗಳೂರಿಗೆ ತೆರಳಲು ಮದ್ದೂರು–ಮಳವಳ್ಳಿ ಮಾರ್ಗವಾಗಿ ಭಾಸ್ಕರ್‌ರವರು ತಮ್ಮ ಕಾರಿನಲ್ಲಿ ಬರುತ್ತಿದ್ದಾಗ ಮದ್ದೂರು ಕಡೆಯಿಂದ ಮಳವಳ್ಳಿ ಕಡೆಗೆ ಆಟೋದಲ್ಲಿ ಹೋಗುತ್ತಿದ್ದ ಅನೀಫ್ ಆಟೋ ನಿಯಂತ್ರಣ ತಪ್ಪಿದಾಗ ಈ ಅವಘಡ ಸಂಭವಿಸಿದೆ.

ಆಟೋದ ಬ್ರೇಕ್ ನಿಯಂತ್ರಣ ತಪ್ಪಿದ್ದನ್ನು ಹರಿತು ಜಾಗೃತಗೊಂಡ ಆಟೋ ಚಾಲಕ ತಕ್ಷಣ ಆಟೋದಿಂದ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಆಟೋ ಮತ್ತು ಕಾರು ನಡುವೆ ಡಿಕ್ಕಿ ಸಂಭವಿಸಿದ್ದರಿಂದ ಆಟೋ ಸಂಪೂರ್ಣವಾಗಿ ಜಖಂಗೊಂಡಿದೆ. ಕೆ.ಎಮ್.ದೊಡ್ಡಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಶ್ರೀ ಬೆಟ್ಟದರಸಮ್ಮನ ವೈಭವದ ಜಾತ್ರೆ


ಬೆಟ್ಟದರಸಮ್ಮನ ಜಾತ್ರೆಯಲ್ಲಿ ಭಾಗವಹಿಸಿರುವ ಅಪಾರ ಸಂಖ್ಯೆಯ ಭಕ್ತರು.

ಹಲಗೂರು, ಮಾ.12– ಹಲಗೂರು ಸಮೀಪದ ಗುಂಡಾಪುರದ ಶ್ರೀ ಬೆಟ್ಟದರಸಮ್ಮನ ಜಾತ್ರೆಯ ಮೊದಲನೇ ದಿನ ಅಪಾರ ಭಕ್ತರು ಪಾಲ್ಗೊಂಡು ದೇವಿ ಕೃಪೆಗೆ ಪಾತ್ರರಾದರು.

ಬುಧವಾರ ಬೆಳಿಗ್ಗೆ ಗ್ರಾಮದ ಕರಗದ ಮನೆಯಲ್ಲಿ ದೇವರ ಕರಗಕ್ಕೆ ವಿಶೇಷ ಪೂಜೆ ನೆರವೇರಿಸಿ, ದೇವರ ಗುಡ್ಡರು ತಮ್ಮ ಹೆಬ್ಬಾರಗಳಿಗೆ ಪೂಜೆ ಸಲ್ಲಿಸಿ, ಹೂ, ಹೊಂಬಾಳೆ ಪ್ರಸಾದ ಪಡೆದರು. ಬಳಿಕ ಅವರು ಆಯ್ದ ಮನೆಗಳಿಗೆ ಅಚ್ಚುಂದಕ್ಕೆ ತೆರಳಿ ಪೂಜೆಯನ್ನು ಸ್ವೀಕರಿಸಿದರು. ನಂತರ ಮಹಾ ಮಂಗಳಾರತಿ ನೆರವೇರಿಸಿ, ಸಂಜೆ 4 ಗಂಟೆಗೆ ಶ್ರೀ ಬೆಟ್ಟದರಸಮ್ಮನವರ ದೇವಾಲಯಕ್ಕೆ ದೇವರ ಕರಗವನ್ನು ಹೊತ್ತು ತೆರಳಿದರು.

ದೇವರ ಉತ್ಸವ ಹೊರಟಾಗ, ಬಾಯಿ ಬೀಗದವರು ಗಂಧದಕಡ್ಡಿ, ಬೇವಿನಸೊಪ್ಪನ್ನು ಹಿಡಿದು, ಮುತ್ತೈದೆಯರು ಕಳಸ ಹೊತ್ತು, ಮೂರು ಬಸವಗಳು, ಚಾಮರ ಬೀಸುವ ಭಕ್ತರು, ಹಾಗೂ ಅರ್ಚಕರು, ವೀರಭದ್ರಪ್ಪ, ವೀರತಪ್ಪ ಮತ್ತು ಸಹಾಯಕ ಅರ್ಚಕ ರಮೇಶ್ ಅವರೊಂದಿಗೆ ಭಕ್ತಿಪೂರ್ಣ ಮೆರವಣಿಗೆಯು ಸಾಗಿತು. ಸಂಜೆ 6 ಗಂಟೆಗೆ ಕರಗವು ದೇವಾಲಯ ತಲುಪಿತು.

ಭಕ್ತರಿಗೆ ಪಾನಕ–ಮಜ್ಜಿಗೆ ಸೇವನೆ: ಹರಕೆ ಹೊತ್ತ ಭಕ್ತರು ಹಾಗೂ ಆಗಮಿಸಿದ ಭಕ್ತಾದಿಗಳಿಗೆ ಪಾನಕ ಮತ್ತು ಮಜ್ಜಿಗೆ ಸೇವೆಗಳನ್ನು ಎತ್ತಿನಗಾಡಿಗಳ ಮೂಲಕ ವಿತರಿಸಲಾಯಿತು. ಭಕ್ತರು ಶ್ರದ್ಧಾಭಕ್ತಿಯಿಂದ ಭಾಗವಹಿಸಿ ದೇವರ ಅನುಗ್ರಹಕ್ಕೆ ಪಾತ್ರರಾದರು.

ರಾತ್ರಿ 10 ಗಂಟೆಗೆ ಶ್ರೀ ಬೆಟ್ಟದರಸಮ್ಮನವರ ಕರಗವನ್ನು ಉತ್ಸವ ಹಾಗೂ ಊರ್ಜಿ ಕುಣಿತದೊಂದಿಗೆ, ಹಬ್ಬದ ಉತ್ಸವ ನಾದಗಳ ನಡುವೆ, ಕರಗದ ಬೀದಿಗೆ ಮೆರವಣಿಗೆಯಾಗಿ ಕರೆತರಲಾಯಿತು. ಭಕ್ತ ಮಹಿಳೆಯರು ಮತ್ತು ಮುತ್ತೈದೆಯರು ಆರತಿ ನೀಡುವ ಮೂಲಕ ಭಕ್ತಿ ಸಮರ್ಪಿಸಿದರು. ತಾಲೂಕು ದಂಡಾಧಿಕಾರಿ ಎಸ್.ವಿ.ಲೋಕೇಶ್ ಪೂಜೆಯಲ್ಲಿ ಭಾಗವಹಿಸಿ, ದೇವರ ಆಶೀರ್ವಾದ ಪಡೆದರು.

ಉಪವಿಭಾಗಾಧಿಕಾರಿ ನಡೆಗೆ ವಕೀಲರ ಆಕ್ರೋಶ

ಪಾಂಡವಪುರ ತಾಲೂಕು ಕಚೇರಿಗೆ ವಕೀಲರ ಮುತ್ತಿಗೆ

ಪಾಂಡವಪುರ, ಮಾ.12– ಜಮೀನು ವಿಚಾರವಾಗಿ ಚರ್ಚಿಸುತ್ತಿದ್ದ ವಕೀಲನನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿದ ಉಪವಿಭಾಗಾಧಿಕಾರಿ ಶ್ರೀನಿವಾಸ್ ಅವರ ವರ್ತನೆ ಖಂಡಿಸಿ ವಕೀಲರು ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಬುಧವಾರ ಪ್ರತಿಭಟನೆ ನಡೆಸಿದರು.


ಎಸಿ ಶ್ರೀನಿವಾಸ್ ವಿರುದ್ಧ ವಕೀಲರು ಕಲಾಪದಿಂದ ಹೊರಗುಳಿದು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ಜಮಾವಣೆಗೊಂಡ ಪಾಂಡವಪುರ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ ಮತ್ತು ನಾಗಮಂಗಲ ತಾಲೂಕಿನ ವಕೀಲರ ಸಂಘದ ಪದಾಧಿಕಾರಿಗಳು ಮತ್ತು ವಕೀಲರು ಉಪ ವಿಭಾಗಾಧಿಕಾರಿ ಶ್ರೀನಿವಾಸ್ ನಡೆ ಖಂಡಿಸಿ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾ.10ರಂದು ಕೆ.ಆರ್.ಪೇಟೆ ತಾಲೂಕಿನ ವಕೀಲ ಅಮಿತ್ ಜಮೀನಿನ ವಿಚಾರವಾಗಿ ಉಪವಿಭಾಗಾಧಿಕಾರಿಗಳ ಜತೆ ಚರ್ಚಿಸಲು ಆಗಮಿಸಿದ್ದರು. ಈ ವೇಳೆ ಚರ್ಚೆಗೆ ಅವಕಾಶ ಕೊಡದೆ ಪೊಲೀಸರಿಗೆ ಕರೆ ಮಾಡಿ ವಕೀಲನನ್ನು ಕಸ್ಟಡಿಗೆ ತೆಗೆದುಕೊಳ್ಳುವಂತೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಪಾಂಡವಪುರ ಉಪವಿಭಾಗದ ವ್ಯಾಪ್ತಿಯ ನಾಲ್ಕು ತಾಲೂಕಿನ ವಕೀಲರು ಕೋರ್ಟ್ ಕಲಾಪದಿಂದ ಹೊರಗುಳಿದು ಪ್ರತಿಭಟಿಸಿದರು.

ಈ ವೇಳೆ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಕನಗನಮರಡಿ ನಾಗರಾಜು ಮಾತನಾಡಿ, ಉಪವಿಭಾಗಾಧಿಕಾರಿಗಳು ಪ್ರತಿಯೊಂದು ಕೆಲಸಕ್ಕೂ ಇಂತಿಷ್ಟು ಹಣ ಕೊಡಲೇಬೇಕೆಂಬ ನಿಯಮ ಮಾಡಿಕೊಂಡಿದ್ದಾರೆ. ಇದಕ್ಕಾಗಿ ಮೂವರು ದಲ್ಲಾಳಿಗಳನ್ನು ನೇಮಕ ಮಾಡಿಕೊಂಡು ಅವರ ಮೂಲಕ ವಸೂಲಿ ಮಾಡುತ್ತಿದ್ದಾರೆ. ಕಚೇರಿಯಲ್ಲಿ ಮಾಡಬೇಕಾದ ಆದೇಶಗಳನ್ನು ಹೋಟೆಲ್ ಮತ್ತು ದಲ್ಲಾಳಿಗಳ ಮನೆಗಳಲ್ಲಿ ಕುಳಿತು ಕೆಲಸ ಮಾಡುತ್ತಾರೆ. ಸಂಜೆ ಮಾಡಿದ ಆದೇಶ ರಾತ್ರಿಯೊಳಗೆ ಬದಲಾಗಿ ದಾಖಲೆಗಳು ಸೃಷ್ಟಿ ಯಾಗುತ್ತಿವೆ. ವಕೀಲರ ಕರ್ತವ್ಯ ಮತ್ತು ಜ್ಞಾನದ ಬಗ್ಗೆ ಉದಾಸೀನವಾಗಿ ಮಾತನಾಡುತ್ತಾರೆ. ಇದರಿಂದ ವಕೀಲರ ಗೌರವಕ್ಕೆ ಧಕ್ಕೆಯಾಗುತ್ತಿದೆ. ಉಪವಿಭಾಗಾಧಿಕಾರಿಗಳ ಕರ್ತವ್ಯ ನಿಷ್ಠೆ ಬಗ್ಗೆ ಅನುಮಾನವಿದ್ದು, ಉಪವಿಭಾಗಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಈವರೆಗೂ ಎಸಿ ನ್ಯಾಯಾಲಯದಲ್ಲಿ ಆಗಿರುವ ಎಲ್ಲಾ ವ್ಯಾಜ್ಯಗಳಿಗೆ ಸಂಬಂಧಿಸಿದ ಆದೇಶಗಳನ್ನು ತನಿಖೆಗೆ ಒಳಪಡಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಎಸಿ ನ್ಯಾಯಾಲಯದಲ್ಲಿ ಸಾಕಷ್ಟು ಅಕ್ರಮ ಮತ್ತು ಭ್ರಷ್ಟಾಚಾರ ನಡೆಯುತ್ತಿದ್ದು, ಈ ಬಗ್ಗೆ ನಮ್ಮ ಬಳಿ ಸೂಕ್ತ ದಾಖಲೆಗಳಿವೆ. ಭ್ರಷ್ಟಾಚಾರದಲ್ಲಿ ಮುಳುಗಿರುವ ಉಪವಿಭಾಗಾಧಿಕಾರಿಗಳನ್ನು ಕೆಲಸದಿಂದ ವಜಾಗೊಳಿಸದಿದ್ದರೆ ಉಪವಿಭಾಗಾಧಿಕಾಗಳ ನ್ಯಾಯಾಲಯದಲ್ಲಿ ನಡೆಯುವ ಯಾವುದೇ ಕಲಾಪಗಳಲ್ಲಿ ವಕೀಲರು ಭಾಗವಹಿಸುವುದಿಲ್ಲ. ಅವರು ಏಕ ಪಕ್ಷೀಯವಾಗಿ ಆದೇಶ ಮಾಡಿಕೊಳ್ಳಲಿ ಎಂದು ಕಿಡಿಕಾರಿದರು.

ಇದೇ ವೇಳೆ ವಕೀಲರೊಂದಿಗೆ ಅನುಚಿತವಾಗಿ ವರ್ತಿಸಿರುವ ಉಪವಿಭಾಗಾಧಿಕಾರಿಗಳನ್ನು ಕೆಲಸದಿಂದ ವಜಾಗೊಳಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಶಿವನಂದ ಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ವಕೀಲರ ಸಂಘದ ಅಧ್ಯಕ್ಷ ಕಾಳೇಗೌಡ, ಕಾರ್ಯದರ್ಶಿ ನಾಗರಾಜು, ವಕೀಲರಾದ ಜಿ.ಬಿ.ಸುರೇಶ್, ಪುಟ್ಟರಾಜು, ಇತರರು ಇದ್ದರು.

ಒಂದನೇ ಪುಟದಿಂದ

ವರ್ಷವೂ ನಾನೇ ಮುಖ್ಯಮಂತ್ರಿ...!

ನೀಡಬಾರದು ಎಂದು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮುಖಾಂತರ ಹೇಳಿಸಿದ್ದರು. ನಂತರವೂ ಅದು ಮುಂದುವರೆದಾಗ ಸಹನೆ ಕಳೆದುಕೊಂಡ ಖರ್ಗೆ, 'ಎಲ್ಲರೂ ಬಾಯಿ ಮುಚ್ಚಿಕೊಂಡು ಸುಮ್ಮನೆ ಕೆಲಸ ಮಾಡಬೇಕು' ಎಂದು ಖಡಕ್ ಎಚ್ಚರಿಕೆ ನೀಡಿದ್ದರು. ಆನಂತರ ಕಾಂಗ್ರೆಸ್‌ನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಸದ್ದಡಗಿತ್ತು.

ಈ ಮಧ್ಯೆ ಇತ್ತೀಚೆಗೆ ಉಡುಪಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಂದು ಸುಮ್ಮನೆ ಹೇಳಿದ್ದು ಮಾತ್ರವಲ್ಲ, ಶಿವಕುಮಾರ್ ಮುಖ್ಯಮಂತ್ರಿ ಆಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಡಿಕೆಶಿ ಸಿಎಂ ಆಗುವುದರ ಬಗ್ಗೆ ಈಗಾಗಲೇ ಒಪ್ಪಂದವಾಗಿದೆ (ಕಮಿಟ್) ಎಂದು ಬಾಂಬ್ ಸಿಡಿಸಿದ್ದರು. ಮತ್ತೆ ಸಿಎಂ ಬದಲಾವಣೆ ಸಂಬಂಧ ಚರ್ಚೆಗಳು ಆರಂಭವಾದವು. ಇತ್ತೀಚೆಗಷ್ಟೇ ಕಲಬುರಗಿಯ ಕಾರ್ಯಕ್ರಮವೊಂದರಲ್ಲಿ ಡಿ.ಕೆ.ಶಿವಕುಮಾರ್ ವೇದಿಕೆಯಲ್ಲಿದ್ದಾಗಲೇ ಮಲ್ಲಿಕಾರ್ಜುನ ಖರ್ಗೆ ಅವರು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಒಗ್ಗಟ್ಟಾಗಿ ಹೋಗಬೇಕು. ಅಭಿವೃದ್ಧಿ ಕಡೆ ಮಾತ್ರ ಗಮನ ಹರಿಸಬೇಕು. ಕಾಂಗ್ರೆಸ್‌ಗೆ ಈ ಇಬ್ಬರೂ ಮುಖ್ಯ ಒಗ್ಗಟ್ಟಾಗಿ ಹೋಗದಿದ್ದರೆ ಕಷ್ಟವಾಗುತ್ತದೆ ಎಂದು ಸೌಮ್ಯ ಮಾತುಗಳಲ್ಲೇ ಒಂದು ಸಂದೇಶ ನೀಡಿದ್ದರು.

ಮತ್ತೊಂದೆಡೆ ವಿಪಕ್ಷ ನಾಯಕ ಆರ್.ಅಶೋಕ್, ನವೆಂಬರ್‌ವರೆಗೂ ಮಾತ್ರ ಸಿದ್ದರಾಮಯ್ಯ ಸಿಎಂ ನಂತರ ಡಿ.ಕೆ.ಶಿವಕುಮಾರ್ ಅಧಿಕಾರವನ್ನು ಒದ್ದು ಕಿತ್ತುಕೊಳ್ಳುತ್ತಾರೆ ಎಂದು ಪದೇ ಪದೆ ಹೇಳುತ್ತಾ ಬಂದಿದ್ದಾರೆ. ಅದೇ ಅಶೋಕ್ ಅವರಿಗೆ ಇಂದು ಸಿದ್ದರಾಮಯ್ಯ ಐದು ವರ್ಷವೂ ನಾನೇ ಮುಖ್ಯಮಂತ್ರಿ ಎಂದು ಗುಡುಗುವ ಮೂಲಕ ಸ್ಪಷ್ಟ ಉತ್ತರ ನೀಡಿದ್ದಾರೆ.

ಮುಖ್ಯಮಂತ್ರಿಗಳು ಸದನದಲ್ಲಿ ನೀಡಿದ ಈ ಹೇಳಿಕೆ ಮೂಲಕ ಬಿಜೆಪಿಯವರ ಬಾಯಿ ಮುಚ್ಚಿಸಿರಬಹುದು. ಆದರೆ ಕಾಂಗ್ರೆಸ್ ಪಾಳೆಯದಲ್ಲಂತೂ ಅವರ ಹೇಳಿಕೆ ಸಂಚಲನವನ್ನುಂಟು ಮಾಡಿದೆ. ಮುಂದಿನ ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಬಣ ಯಾವ ರೀತಿ ಪ್ರತಿಕ್ರಿಯಿಸಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಜಾಮೀನು ಭವಿಷ್ಯ

ಕಳ್ಳಸಾಗಣೆ ಮಾಡಿದ್ದಾರೆ. ಈಕೆ ವರ್ಷದಲ್ಲಿ ಆರು ತಿಂಗಳು ದೇಶದಿಂದ ಹೊರಗೆ ಇರುತ್ತಿದ್ದರು ಎಂದಿದೆ. ರನ್ಯಾ ಜಾಮೀನು ಅರ್ಜಿ ವಿಚಾರಣೆ ವೇಳೆ ಈ ಎಲ್ಲಾ ಅಂಶಗಳು ಪ್ರಸ್ತಾಪವಾಯಿತು. ರನ್ಯಾ ರಾವ್ ಸರ್ಚ್ ಪ್ರಕ್ರಿಯೆ ಕಾನೂನು ಪ್ರಕಾರ ನಡೆದಿಲ್ಲ. ನಿದ್ದೆ ಮಾಡೋಕೂ ಬಿಡದೇ ವಿಚಾರಣೆ ನಡೆಸಿದ್ದಾರೆ. ನಿದ್ದೆಯ ಹಕ್ಕನ್ನು ಕಿತ್ತುಕೊಂಡಿದ್ದಾರೆ ಎಂದು ರನ್ಯಾ ಪರ ವಕೀಲರು ವಾದ ಮಂಡಿಸಿದರು. ರನ್ಯಾ ಮದುವೆಯಾದ ಮಹಿಳೆ. ಅವರೆಲ್ಲೂ ಹೋಗಲ್ಲ. ಜಾಮೀನು ನೀಡಿ ಎಂದು ಮನವಿ ಮಾಡಿದರು. ಆದರೆ, ಇದನ್ನು ಡಿಆರ್‌ಐ ಪರ ವಕೀಲರು ಆಕ್ಷೇಪಿಸಿದರು. ರನ್ಯಾಗೆ ಕರೆ ಮಾಡಿದ್ದ ವ್ಯಕ್ತಿಗೆ ಸಮನ್ಸ್ ನೀಡಿ ಹೇಳಿಕೆ ಪಡೆಯಲಾಗಿದೆ. ಯಾವುದೇ ಲೋಪ ಎಸಗಿಲ್ಲ. ಆಕೆ ಬಳಿ ಯುಎಇ ರೆಸಿಡೆನ್ಸಿ ಕಾರ್ಡ್ ಸಿಕ್ಕಿದೆ. ಹೀಗಾಗಿ ಜಾಮೀನು ಕೊಡಬಾರದು ಎಂದು ವಾದ ಮಂಡಿಸಿದರು. ವಾದ ಪ್ರತಿವಾದಗಳನ್ನು ಆಲಿಸಿದ ನ್ಯಾಯಾಲಯ ಮಾರ್ಚ್ 14ಕ್ಕೆ ಆದೇಶ ಕಾಯ್ದಿರಿಸಿತು.

ಚಿನ್ನದ ಸರಕ್ಕಾಗಿ ಕೊಂದ ಮಹಿಳೆ!

ಕೊಟ್ಟು ಅದನ್ನು ಗಿರವಿ ಇಟ್ಟು ಕಷ್ಟ ತೀರಿಸಿಕೊಳ್ಳುವಂತೆ ಹೇಳಿ, ಉದಾರತೆ ತೋರಿದ್ದರು. ಆ ಬಳೆಗಳನ್ನು ಶಕುಂತಲಾ ಮುತ್ತುಟ್ ಫೈನಾನ್ಸ್‌ನಲ್ಲಿ 2.5 ಲಕ್ಷಕ್ಕೆ ಗಿರವಿ ಇಟ್ಟು ಹಣ ಪಡೆದಿದ್ದಳು. ಆದರೂ ಶಕುಂತಲಾಳ ಹಣದ ಸಮಸ್ಯೆ ನೀಗಿಲ್ಲ.

ಮನೆಗೆ ಕರೆಸಿಕೊಂಡು ಕೊಂದಳು: ಸುಲೋಚನಾ ಅವರು ಯಾವಾಗಲೂ ತನ್ನ ಕೊರಳಲ್ಲಿ ಚಿನ್ನದ ಸರ ಧರಿಸುತ್ತಿದ್ದುದನ್ನು ಗಮನಿಸಿದ್ದ ಶಕುಂತಲಾ, ಮಾ.5ರಂದು ರಾತ್ರಿ 7 ಗಂಟೆ ಸುಮಾರಿನಲ್ಲಿ ದೂರವಾಣಿ ಕರೆ ಮಾಡಿ, ಏನೋ ಮಾತನಾಡಬೇಕು ಎಂದು ಹೇಳಿ, ಅವರನ್ನು ತನ್ನ ಮನೆಗೆ ಕರೆಸಿಕೊಂಡಿದ್ದಾಳೆ. ಅವರೊಂದಿಗೆ ತನ್ನ ಮನೆಯ ರೂಂನಲ್ಲಿ ಮಾತನಾಡುತ್ತಾ ಕುಳಿತಿದ್ದಾಗ, ಹಠಾತ್ತನೆ ಸುಲೋಚನಾ ಅವರ ಮುಖಕ್ಕೆ ದಿಂಬು ಅದುಮಿ ಹಿಡಿದು ಉಸಿರುಗಟ್ಟಿಸಿ ಹತ್ಯೆಗೈದಿದ್ದಾಳೆ. ನಂತರ ಅವರ ಕೊರಳಲ್ಲಿದ್ದ ಚಿನ್ನದ ಸರವನ್ನು ಕಸಿದುಕೊಂಡು, ರೂಂ ಅಲ್ಲಿ ಸುಲೋಚನಾ ಶವ ಬಿಟ್ಟು, ಬೀಗ ಹಾಕಿಕೊಂಡು ಹೊರಬಂದ ಶಕುಂತಲಾ, ಟೆರಿಷಿಯನ್ ಕಾಲೇಜು ಬಳಿಯ ದುರ್ಗಾ ಜುವೆಲರಿಯಲ್ಲಿ ಸರ ಗಿರವಿ ಇಟ್ಟು 1.5 ಲಕ್ಷ ರೂ. ಪಡೆದಿದ್ದಾಳೆ. ಅದರಲ್ಲಿ ಮನೆ ಮಾಲೀಕನಿಗೆ 36 ಸಾವಿರ ರೂ. ಬಾಡಿಗೆ ಬಾಕಿ ಕೂಡಲೇ ಚುಕ್ತಾ ಮಾಡಿದ್ದಾಳೆ.

ನಂತರ ಮನೆಗೆ ಬಂದಿದ್ದಾಳೆ. ಇಷ್ಟೆಲ್ಲಾ ಆಗಿ ಸುಮಾರು ಒಂದೂವರೆ ಗಂಟೆ ಆಗಿತ್ತು. ಆಗ ಗುಂಡ್ಲುಪೇಟೆಯಲ್ಲಿ ಸರ್ವೇಯರ್ ಆಗಿರುವ ಸುಲೋಚನಾ ಪುತ್ರ ರವಿಚಂದ್ರ ಅವರಿಗೆ ಕರೆ ಮಾಡಿ, ತಮ್ಮ ಮನೆಗೆ ಬಂದಿದ್ದ ನಿಮ್ಮ ತಾಯಿ ಸುಲೋಚನಾ ಅವರು, ಮಾತನಾಡುತ್ತಿರುವಾಗಲೇ ವಿಪರೀತ ಬೆವರುತ್ತಾ ಕುಸಿದು ಬಿದ್ದರು. ಅವರು ಈಗ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾರೆ. ಬೇಗ ಬನ್ನಿ ಎಂದು ತಿಳಿಸಿದ್ದಾರೆ. ಕೂಡಲೇ ಗುಂಡ್ಲುಪೇಟೆಯಿಂದ ಮೈಸೂರಿಗೆ ಬಂದ ರವಿಚಂದ್ರ, ತನ್ನ ಸಂಬಂಧಿಕರೊಂದಿಗೆ ಶಕುಂತಲಾರ ಮನೆಗೆ ತೆರಳಿ ತಾಯಿಯನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ. ಆಸ್ಪತ್ರೆಯಲ್ಲಿ ವೈದ್ಯರು ಪರೀಕ್ಷಿಸಿ, ಸುಲೋಚನಾ ಅದಾಗಲೇ ಮೃತಪಟ್ಟಿರುವುದಾಗಿ ಘೋಷಿಸಿ, ಈ ಸಂಬಂಧ ನಜರ್‌ಬಾದ್ ಠಾಣೆಗೆ ಡೆತ್ ಮೆಮೋ ರವಾನಿಸಿದ್ದರು.

ಆಸ್ಪತ್ರೆಗೆ ತೆರಳಿದ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ ಅವರು ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ರವಾನಿಸಿದ್ದಲ್ಲದೇ, ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡಿದ್ದರು.

ಪ್ರಕರಣ ಸಂಬಂಧ ಸುಲೋಚನಾ ಅವರು ಅಸ್ವಸ್ಥರಾಗಿ ಬಿದ್ದಿದ್ದರು ಎಂದು ಹೇಳಲಾದ ಶಕುಂತಲಾ ಅವರ ಮನೆಯ ರೂಂ ಮಹಜರ್‌ಗಾಗಿ ಮರುದಿನ (ಮಾ.6) ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಮತ್ತು ಸಿಬ್ಬಂದಿ ತೆರಳಿ, ಶಕುಂತಲಾ ಹೇಳಿಕೆಯನ್ನು ಪಡೆದಿದ್ದರು. ಆ ಸಂದರ್ಭದಲ್ಲಿ ಆಕೆ ನನ್ನ ಮನೆಗೆ ಬಂದು, ಮಾತನಾಡುತ್ತಾ ಕುಳಿತ ವೇಳೆ ನಿತ್ರಾಣಗೊಂಡು ಕೆಲ ಸಮಯದಲ್ಲೇ ಪ್ರಜ್ಞಾಹೀನ ಸ್ಥಿತಿ ತಲುಪಿದರು. ನಾನು ಅವರಿಗೆ ನೀರು ಕುಡಿಸಿ, ಗಾಳಿ ಬೀಸಿದಾಗಲೂ ಎಚ್ಚರಗೊಳ್ಳದ ಕಾರಣ ಅವರ ಮನೆಯವರಿಗೆ ವಿಷಯ ತಿಳಿಸಿದೆ ಎಂದು ಹೇಳಿದ್ದಾಳೆ.

ಆದರೆ ಮಹಜರ್ ನಡೆಸುವ ವೇಳೆ ಶಕುಂತಲಾಳ ವರ್ತನೆ, ಮಹಜರ್‌ಗಾಗಿ ಆಕೆ ತೋರಿಸಿದ ಸ್ಥಳಗಳು ಹಾಗೂ ಸುಲೋಚನಾ ಬಿದ್ದಿದ್ದ ಸ್ಥಳ, ಆಕೆಯ ಚಲನ–ವಲನದ ಬಗ್ಗೆ ಅನುಮಾನಗೊಂಡ ಮಹದೇವ ಸ್ವಾಮಿ ಹಾಗೂ ಸಿಬ್ಬಂದಿ, ಆಕೆಯನ್ನು ತೀವ್ರ ವಿಚಾರಣೆಗೊಳಪಡಿಸಿದ ವೇಳೆ ತನ್ನ ಹಣದ ಸಮಸ್ಯೆ ನಿವಾರಣೆಗೆ ಚಿನ್ನದ ಸರಕ್ಕಾಗಿ ಸುಲೋಚನಾ ಅವರನ್ನು ಹತ್ಯೆ ಮಾಡಿರುವುದಾಗಿ ಬಾಯ್ಬಿಟ್ಟಿದ್ದಾಳೆ. ನಂತರ ಪೊಲೀಸರು ದುರ್ಗಾ ಜುವೆಲರಿಯಲ್ಲಿ ಶಕುಂತಲಾ ಅಡವಿಟ್ಟಿದ್ದ ಸರವನ್ನು ವಶಪಡಿಸಿಕೊಂಡು, ಆಕೆಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ ಅವರೊಂದಿಗೆ ಸಬ್ ಇನ್ಸ್‌ಪೆಕ್ಟರ್‌ಗಳಾದ ನಟರಾಜು, ಶ್ರೀನಿವಾಸ ಪಾಟೀಲ್, ಸಿಬ್ಬಂದಿಗಳಾದ ಸತೀಶ್, ಪ್ರವೀಣ್, ಗೋಪಾಲ್, ಪ್ರಕಾಶ್, ಸಂಜು, ಲಕ್ಷ್ಮೀ ಕುಂಬಾರ್ ಮುಂತಾದವರು ಪಾಲ್ಗೊಂಡಿದ್ದರು.

ಈ ಪ್ರಕರಣದಲ್ಲಿ ಬಡತನಕ್ಕೆ ಮರುಗಿ ಸಹಾಯ ಮಾಡಿದ ಸುಲೋಚನಾ ಅವರು ತನ್ನಿಂದ ಸಹಾಯ ಪಡೆದವಳಿಂದಲೇ ಹತ್ಯೆಗೀಡಾದರೆ, ಅನಾರೋಗ್ಯ ಪೀಡಿತರಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಪತಿಗೆ ತನ್ನ ಪತ್ನಿ ಹತ್ಯೆಯಾಗಿರುವ ವಿಚಾರವೇ ಗೊತ್ತಿಲ್ಲ.

ಕೈ ಹಿಡಿದಿದ್ದೇ ತಪ್ಪಾ!

ಮಾತ್ರವಲ್ಲದೇ, ಕೆಲ ವರ್ಷಗಳಿಂದ ಆತ್ಮೀಯತೆ ಬೆಳೆಸಿಕೊಂಡಿದ್ದ ಆಕೆಗೆ ಸುಲೋಚನಾ ಆಗಿಂದಾಗ್ಗೆ ಸಣ್ಣಪುಟ್ಟ ಸಹಾಯ ಮಾಡಿಕೊಂಡು ಬಂದಿದ್ದರು. ತನಗೆ ಇಷ್ಟೆಲ್ಲಾ ಸಹಾಯ ಮಾಡಿದ್ದ ಸುಲೋಚನಾರ ಬಳಿ ಸಾಕಷ್ಟು ಚಿನ್ನ ಇದೆ. ಅದನ್ನು ಹೇಗಾದರೂ ಮಾಡಿ ತನ್ನದಾಗಿಸಿಕೊಂಡರೆ ಕಷ್ಟ ಪರಿಹರಿಸಿಕೊಳ್ಳಬಹುದು ಎಂಬ ಕಾರಣಕ್ಕಾಗಿ ಅವರನ್ನು ಕೊಲ್ಲುವ ಮೂಲಕ ಶಕುಂತಲಾ ರಾಕ್ಷಸೀ ಪ್ರವೃತ್ತಿ ಮೆರೆದಿದ್ದಾಳೆ.

ಪೊಲೀಸರು ತೀವ್ರ ವಿಚಾರಣೆ ನಡೆಸಿದ ವೇಳೆ ತನ್ನ ತಪ್ಪನ್ನು ಒಪ್ಪಿಕೊಂಡ ಶಕುಂತಲಾ, ನನ್ನ ಪತಿ ಹೋಟೆಲ್‌ವೊಂದರಲ್ಲಿ ಬಾಣಸಿಗನಾಗಿದ್ದಾನೆ. ಇಬ್ಬರು ಪುತ್ರಿಯರಿದ್ದಾರೆ. ಜೀವನ ನಡೆಸುವುದು ಕಷ್ಟವಾಗಿತ್ತು ವಿಪರೀತ ಸಾಲ ಮಾಡಿಕೊಂಡಿದ್ದೆ. ಮನೆ ಬಾಡಿಗೆಯನ್ನೂ ಕಟ್ಟಿರಲಿಲ್ಲ. ತನ್ನ ಕಷ್ಟಕ್ಕಾಗಿ ಸುಲೋಚನಾ ಅವರನ್ನು ಕೊಲೆ ಮಾಡಿದೆ ಎಂದು ಹೇಳಿಕೆ ನೀಡಿದ್ದಾಳೆ.

ಹಲವು ವರ್ಷಗಳಿಂದ ಉತ್ತಮ ಬಾಂಧವ್ಯ ಹೊಂದಿದ್ದ ನನ್ನನ್ನು ಅವರು ಸಂಪೂರ್ಣವಾಗಿ ನಂಬಿದ್ದರು. ಕೆಲ ದಿನಗಳ ಹಿಂದೆಯಷ್ಟೇ ಅವರು ಕೊಟ್ಟ 40 ಗ್ರಾಂ ತೂಕದ ಚಿನ್ನದ ಬಳೆಯನ್ನು ಮುತ್ತುಟ್ ಫೈನಾನ್ಸ್‌ನಲ್ಲಿ ಗಿರವಿ ಇಟ್ಟು ಹಣ ಪಡೆದಿದ್ದೆ. ಇನ್ನೂ ಅದನ್ನು ಬಿಡಿಸಿಕೊಟ್ಟಿಲ್ಲ. ಮತ್ತೆ ಹಣ ಕೇಳಿದರೆ ಬೇಜಾರು ಮಾಡಿಕೊಳ್ಳಬಹುದೆಂದು ಭಾವಿಸಿ, ಅವರ ಕತ್ತಿನಲ್ಲಿದ್ದ ಸರಕ್ಕಾಗಿ ಸಾಯಿಸಿದೆ. ತನಗೆ ಕಷ್ಟ ಕಾಲದಲ್ಲಿ ನೆರವಾಗುತ್ತಾ ಬಂದ ಸುಲೋಚನಾರ ಕೊಂದಿದ್ದಕ್ಕೆ ಪಶ್ಚಾತ್ತಾಪ ಪಟ್ಟಿದ್ದಾಳೆ.

ಕಾಂಗ್ರೆಸ್ ಕಾರ್ಯಕರ್ತರಿಗೆ 'ಗ್ಯಾರಂಟಿ' ಹಣ ಹಂಚಿಕೆ ಖಂಡಿಸಿ ಬಿಜೆಪಿ–ಜೆಡಿಎಸ್ ಸಮರ

● ರಾಜ್ಯಪಾಲರ ಮಧ್ಯ ಪ್ರವೇಶಕ್ಕೂ ಆಗ್ರಹ ● ರಾಜ್ಯದ ಜನರ ತೆರಿಗೆ ಹಣ ಪಕ್ಷದ ಕಾರ್ಯಕರ್ತರಿಗೆ ಹಂಚುವುದು ಖಂಡನೀಯ ● ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಂದ ಶಾಸಕರ ಹಕ್ಕಿಗೆ ಚ್ಯುತಿ ಆರೋಪ

ಬೆಂಗಳೂರು, ಮಾ.12(ಕೆಎಂಶಿ)– ಸಾರ್ವಜನಿಕರ ತೆರಿಗೆ ಹಣವನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ಸರ್ಕಾರ ಹಂಚಲು ಹೊರಟಿರುವುದನ್ನು ಖಂಡಿಸಿ ಬಿಜೆಪಿ–ಜೆಡಿಎಸ್ ಸದಸ್ಯರು ಸದನದ ಒಳಗೆ ಮತ್ತು ಹೊರಗೆ ಪ್ರತಿಭಟನೆ ನಡೆಸಿ, ರಾಜ್ಯಪಾಲರ ಮಧ್ಯಪ್ರವೇಶಕ್ಕೆ ಒತ್ತಾಯಿಸಿದ್ದಾರೆ.



ವಿಧಾನಸೌಧದ ಮುಂಭಾಗ ಉಭಯ ಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಖಾತ್ರಿ ನೆಪದಲ್ಲಿ ವಾರ್ಷಿಕ ನೂರಾರು ಕೋಟಿ ರೂ.ಗಳನ್ನು ಪಕ್ಷದ ಕಾರ್ಯಕರ್ತರಿಗೆ ಹಂಚಲು ಹೊರಟಿದ್ದು, ಇದನ್ನು ತಡೆಯುವಂತೆ ಬಿಜೆಪಿ–ಜೆಡಿಎಸ್ ಸದಸ್ಯರು ಇಂದು ರಾಜ್ಯಪಾಲರ ಮೊರೆ ಹೋದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಮುಂದಿಟ್ಟುಕೊಂಡು ಅಭಿವೃದ್ಧಿಯನ್ನೂ ಕೈಗೊಳ್ಳದ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಸಂಪನ್ಮೂಲ ಕ್ರೋಢೀಕರಣಕ್ಕೂ ಒತ್ತು ನೀಡದೆ, ಕೇವಲ ಪ್ರಚಾರಕ್ಕೆ ಸೀಮಿತಗೊಂಡು ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸುತ್ತಿದೆ. ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ಪಕ್ಷದ ಕಾರ್ಯಕರ್ತರಿಗೆ ಬೊಕ್ಕಸದಿಂದ ಹಣ ಹಂಚಲು ಹೊರಟಿದ್ದಾರೆ. ವಿಧಾನಮಂಡಲದ ಒಳಗೆ ವಿಷಯ ಪ್ರಸ್ತಾಪ ಮಾಡಿದರೂ ಬೆಲೆ ನೀಡದ ಸರ್ಕಾರ ತನ್ನ ನಿಲುವಿಗೆ ಅಂಟಿಕೊಂಡಿದ್ದು, ತಾವು ಮಧ್ಯಪ್ರವೇಶಿಸಿ ಇದನ್ನು ತಡೆಯಬೇಕೆಂದು ರಾಜ್ಯಪಾಲರನ್ನು ಕೋರಿದ್ದಾರೆ.

ವಿಧಾನಮಂಡಲದ ಪ್ರತಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ.ವಿಜಯೇಂದ್ರ, ಜೆಡಿಎಸ್‌ನ ಸಿ.ಆರ್.ಸುರೇಶ್‌ಬಾಬು ಹಾಗೂ ಎಸ್.ಎಲ್.ಬೋಜೇಗೌಡ ಅವರ ನಾಯಕತ್ವದಲ್ಲಿ ಉಭಯ ಸದನಗಳ ಸದಸ್ಯರು ವಿಧಾನಸೌಧದಿಂದ ರಾಜಭವನಕ್ಕೆ ಕಾಲ್ನಡಿಗೆಯಲ್ಲಿ ತೆರಳಿ ಮನವಿಪತ್ರ ಸಲ್ಲಿಸಿದರು.

ರಾಜ್ಯಪಾಲರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ ಹಾಗೂ ಆರ್.ಅಶೋಕ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಂದ ಶಾಸಕರ ಹಕ್ಕು ಮೊಟಕುಗೊಳಿಸುವ ಕಾರ್ಯ ನಡೆದಿದೆ.

ಗ್ಯಾರಂಟಿ ಅನುಷ್ಠಾನದಲ್ಲಿ ತಾಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಅಧ್ಯಕ್ಷರನ್ನು ನೇಮಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಅಸಂವಿಧಾನಿಕ ನಡೆ ಇಡುತ್ತಿದೆ ಎಂಬುದನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ.

ಜನರು ಬೆವರು ಸುರಿಸಿ ದುಡಿದು ಕಟ್ಟಿದ ತೆರಿಗೆ ಹಣವನ್ನು ಸರ್ಕಾರ ದುರುಪಯೋಗ ಮಾಡುತ್ತಿದೆ, ನಮ್ಮ ಕ್ಷೇತ್ರಗಳಲ್ಲೇ ಸೋತಿರುವ ಕಾಂಗ್ರೆಸ್ ಅಭ್ಯರ್ಥಿಗಳ ಶಿಫಾರಸಿನ ಮೇರೆಗೆ ವಿವಿಧ ಸಮಿತಿಗಳ ನೇಮಕ ಮಾಡುತ್ತಿದ್ದಾರೆ. ಪ್ರತಿಪಕ್ಷಗಳ ಶಾಸಕರ ಹಕ್ಕನ್ನು ಮೊಟಕುಗೊಳಿಸುವ ಕೆಲಸ ಸಿದ್ದರಾಮಯ್ಯ ಮಾಡುತ್ತಿದ್ದಾರೆ. ಸದನದಲ್ಲಿ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗುವುದು ಎಂದರು.

ಇದಕ್ಕೂ ಮುನ್ನ, ವಿಧಾನಸೌಧದ ಮುಂಭಾಗ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಉಭಯ ಪಕ್ಷಗಳ ಸದಸ್ಯರು ಧರಣಿ ನಡೆಸಿ, ಪ್ರತಿಭಟಿಸಿ, ನಂತರ ರಾಜಭವನಕ್ಕೆ ತೆರಳಿದರು.

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ

ಸಂಭ್ರಮಾಚರಣೆಗೆ ಡಿಕೆಶಿ ಸಿದ್ಧತೆ!; ಸಂಪುಟ ಪುನಾರಚನೆಗೆ ಸಿದ್ದರಾಮಯ್ಯ ಪ್ಲಾನ್!!

ಬೆಂಗಳೂರು, ಮಾ.12– ಮೇ 23, 2025ಕ್ಕೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ ಪೂರೈಸಲಿದೆ. ಸಂಭ್ರಮ ಆಚರಿಸಲು ಮತ್ತು ನವೆಂಬರ್‌ನಲ್ಲಿ ಸಿಎಂ ಹುದ್ದೆಗೆ ಹಕ್ಕು ಮಂಡಿಸಲು ಡಿ.ಕೆ.ಶಿವಕುಮಾರ್ ಸಿದ್ಧತೆ ನಡೆಸಿದ್ದಾರೆ.


ಸಿದ್ದರಾಮಯ್ಯ


ಡಿ.ಕೆ. ಶಿವಕುಮಾರ್

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟ ಪುನರಾಚನೆ ಮಾಡಲು ತಮ್ಮದೇ ಆದ ಯೋಜನೆಯಲ್ಲಿ ಮುಳುಗಿದ್ದಾರೆ. ಇದು ಅವರು ಸಿಎಂ ಆಗಿ ಮುಂದುವರಿಯಲು ಅನುವು ಮಾಡಿಕೊಡುತ್ತದೆ ಎಂದು ಮೂಲಗಳು ತಿಳಿಸಿವೆ.

ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಇಬ್ಬರ ನಡುವೆ ಮುಸುಕಿನ ಗುದ್ದಾಟ ಮುಂದುವರೆದಿದೆ. ಸಿಎಂ ತಮ್ಮ ಹುದ್ದೆಯನ್ನು ಉಳಿಸಿಕೊಳ್ಳಲು ಸಂಪುಟ ಪುನರ್ರಚನೆ ಆಯ್ಕೆ ಮಾಡಬಹುದು. ಅಕ್ಟೋಬರ್ 2025ಕ್ಕೆ ಅವರು ಸಿಎಂ ಆಗಿ ಎರಡೂವರೆ ವರ್ಷಗಳನ್ನು ಪೂರ್ಣಗೊಳಿಸುವ ಮೊದಲು ಏನು ಬೇಕಾದರೂ ಆಗಬಹುದು ಎಂದು ಕಾಂಗ್ರೆಸ್‌ನ ಹಿರಿಯ ಶಾಸಕರೊಬ್ಬರು ಹೇಳಿದ್ದಾರೆ.

ಸಂಪುಟ ಪುನರ್ರಚನೆಗೆ ಹೈಕಮಾಂಡ್ ಅನುಮೋದಿಸಿದರೆ, ಸಿದ್ದರಾಮಯ್ಯ ತಮ್ಮ ಸಿಎಂ ಸ್ಥಾನ ಭದ್ರಪಡಿಸಿಕೊಳ್ಳುತ್ತಾರೆ ಎಂದು ಮೂಲಗಳು ತಿಳಿಸಿವೆ. ಅವರು ಈಗಾಗಲೇ ಪಕ್ಷದ ಹೈಕಮಾಂಡ್ ಮತ್ತು ಶಿವಕುಮಾರ್‌ಗೆ ಪರೋಕ್ಷವಾಗಿ ಸಂದೇಶವನ್ನು ಕಳುಹಿಸಿದ್ದಾರೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮತ್ತು ಡಿಸಿಎಂ ಆಗಿ ಮುಂದುವರಿಯಲು ಅಭ್ಯಂತರವಿಲ್ಲ. ಅದರಲ್ಲೂ ಜಲಸಂಪನ್ಮೂಲ ಮತ್ತು ಬೆಂಗಳೂರು ಅಭಿವೃದ್ಧಿ ಸೇರಿದಂತೆ ಉತ್ತಮ ಖಾತೆ ಅವರ ಬಳಿಯಿವೆ. ತಮ್ಮ ಸಚಿವ ಸಂಪುಟದಿಂದ 15 ಸಚಿವರನ್ನು ಕೈಬಿಡಲು ಸಿದ್ದರಾಮಯ್ಯ ಸಿದ್ಧರಿದ್ದಾರೆ. ಅವರಲ್ಲಿ ಕೆಲವರು ಅವರ ಬೆಂಬಲಿಗ ಸಚಿವರು ಇದ್ದಾರೆ.

ಕೆಲವು ಶಾಸಕರಿಗೆ ಸಚಿವರ ವಿರುದ್ಧ ಅಸಮಾಧಾನವಿದೆ, ಇದನ್ನೇ ನೆಪವಾಗಿಟ್ಟುಕೊಂಡು ಸಚಿವರನ್ನು ಸಂಪುಟದಿಂದ ಕೈಬಿಡಲು ಸಿಎಂ ಮುಂದಾಗಿದ್ದಾರೆ. ಇದು ಕಳೆದ ಸೋಮವಾರ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ಸ್ಪಷ್ಟವಾಗಿದೆ.

ಸಚಿವರು ತಮ್ಮ ಪ್ರಸ್ತಾವನೆಗಳಿಗೆ ಸ್ಪಂದಿಸದಿರುವ ವಿಷಯವನ್ನು ಶಾಸಕರು ಬಹಿರಂಗವಾಗಿ ಪ್ರಸ್ತಾಪಿಸಿದರು. ಸಿದ್ದರಾಮಯ್ಯ ಅವರು ಸಚಿವರ ಬಗ್ಗೆ ಚಿಂತಿಸುತ್ತಿಲ್ಲ, ಬದಲಿಗೆ ಸಿಎಂ ಆಗಿ ಮುಂದುವರಿಯಲು ಶಾಸಕರ ಬೆಂಬಲ ಹೆಚ್ಚು ಮುಖ್ಯ ಎಂದು ಚಿಂತಿತರಾಗಿದ್ದಾರೆ ಎಂದು ಎಂಎಲ್‌ಸಿಯೊಬ್ಬರು ತಿಳಿಸಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಅಧಿಕಾರಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಮತ್ತು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ನಡುವೆ ಗಲಾಟೆ ನಡೆದಿದೆ.

ಹಸಿರಿಂದ ಕಂಗೊಳಿಸುತ್ತಿರುವ ಮೈಸೂರಿನ ಪ್ರಮುಖ ರಸ್ತೆಗಳು



ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಗಿಡಗಳನ್ನು ನೆಡುತ್ತಿರುವ ಕಾರ್ಮಿಕರು.

"ವಿಷಮ್‌ದಾರಿ ಗಿಡಕ್ಕೆ ಸಂಸ್ಕೃತದಲ್ಲಿ ಕುಂಡಲಿ ಎಂದು ಕರೆಯುತ್ತಾರೆ. ಬೇರೆ ಹೆಸರಿನಲ್ಲಿ ಹೊಳೆ ಮಧುರಂಗಿ, ಇಸಂಪುರಿ, ಇಸಮ್‌ಧಾರಿ, ನಾಯಿತೆಕ್ಕಲೆ, ವನ ಜಾಯಿ, ಗಾರ್ಡನ್ ಕ್ವೀನ್ಸ್ ಎಂದೆಲ್ಲಾ ಕರೆಯುವುದುಂಟು. ಹಾಗಾಗಿ ವಾಹನಗಳು ಹೊರಸೂಸುವ ಹೊಗೆಯನ್ನು ಬೇಗ ಹಿಡಿದಿಟ್ಟುಕೊಳ್ಳುತ್ತದೆ ಎಂದು ಪರಿಸರ ತಜ್ಞರು ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ ಈ ಗಿಡಗಳನ್ನು ಹೆಚ್ಚು ನೆಡಲು ಒತ್ತು ನೀಡಲಾಗಿದೆ.
–ಮೋಹನ್, ಸಹಾಯಕ ನಿರ್ದೇಶಕ



ವಾಟರ್ ಟ್ಯಾಂಕ್ ಮೂಲಕ ಗಿಡಗಳಿಗೆ ನೀರು ಹಾಕುತ್ತಿರುವ ದೃಶ್ಯ

"ಮೈಸೂರು ನಗರಪಾಲಿಕೆ ವತಿಯಿಂದ 3 ಕಿಮೀನಲ್ಲಿ ಅಲಂಕಾರಿಕ ಗಿಡ ನೆಟ್ಟು, ಎರಡು ವರ್ಷದವರೆಗೆ ಪೋಷಣೆಗೆ 25 ಲಕ್ಷಕ್ಕೆ ಗುತ್ತಿಗೆ ಪಡೆಯಲಾಗಿದೆ. ರೈಲ್ವೆ ಸ್ಟೇಷನ್‌ನಿಂದ ರಾಮಸ್ವಾಮಿ ವೃತ್ತದವರೆಗೆ (1.5 ಕಿ.ಮೀ.), ಮೈಸೂರು ವಿವಿ ಪ್ರಾಚ್ಯ ವಸ್ತು ಸಂಶೋಧನಾಲಯ ಕಚೇರಿ ಹಿಂಭಾಗದಿಂದ ಮೈಸೂರು ಜಿಲ್ಲಾ ನ್ಯಾಯಾಲಯ (ಕೃಷ್ಣರಾಜ ಬುಲೆವಾರ್ಡ್ ರಸ್ತೆ)ದವರೆಗೆ (1 ಕಿ.ಮೀ.), ಸೌಗಂಧಿಕಾ ಉದ್ಯಾನದ ಮುಂಭಾಗದಿಂದ ಶಾಂತಿಸಾಗರ್ ಕಾಂಪ್ಲೆಕ್ಸ್‌ವರೆಗೆ (0.50 ಕಿ.ಮೀ.) ವಿವಿಧ ಬಗೆಯ ಗಿಡಗಳನ್ನು ನೆಡಲಾಗಿದೆ. ಇದರಲ್ಲಿ 6 ಸಾವಿರ ವಿಷಮ್‌ಧಾರಿ, 1,500 ಬೋಗನ್‌ವಿಲ್ಲಾ, 1,500 ಜಟ್ರೋಪ ಗಿಡಗಳನ್ನು ನೆಟ್ಟು ಪೋಷಿಸುವ ಹೊಣೆ ಆರಂಭವಾಗಿದೆ. **–ಬಾಲಸುಬ್ರಹ್ಮಣ್ಯಂ, ಗುತ್ತಿಗೆದಾರ**

ಮೈಸೂರು, ಮಾ.12(ಎಸ್‌ಪಿಎನ್)– ಪ್ರವಾಸಿಗರ ನೆಚ್ಚಿನ ತಾಣವಾಗಿರುವ ಪಾರಂಪರಿಕ ನಗರಿ ಮೈಸೂರಿನ ರಸ್ತೆ ವಿಭಜಕಗಳ ಹಸಿರಿನಿಂದ ಕಂಗೊಳಿಸಲಿವೆ.

2.80ಕೋಟಿ ವೆಚ್ಚದಲ್ಲಿ ರಸ್ತೆ ವಿಭಜಕಗಳ ಮಧ್ಯದಲ್ಲಿ 1.20 ಲಕ್ಷಕ್ಕೂ ಅಧಿಕ ಅಲಂಕಾರಿಕ ಸಸಿಗಳನ್ನು ನೆಟ್ಟು, 2 ಕೋಟಿ ವೆಚ್ಚದಲ್ಲಿ ಎರಡು ವರ್ಷಗಳ ಕಾಲ ಈ ಗಿಡಗಳ ಪೋಷಣೆಗೆ 13 ಮಂದಿ ಗುತ್ತಿಗೆದಾರರಿಗೆ ಮೈಸೂರು ಮಹಾನಗರ ಪಾಲಿಕೆ ಟೆಂಡರ್ ನೀಡಿತ್ತು. ಕಳೆದ ವರ್ಷ ದಸರಾ ಸಂದರ್ಭದಲ್ಲಿ ಆರಂಭಿಸಿದ ಯೋಜನೆ ಇದೀಗ ಪೂರ್ಣಗೊಂಡಿದೆ.

ಮೈಸೂರು ನಗರದ ವಿವಿಧ ರಸ್ತೆ ವಿಭಜಕಗಳಲ್ಲಿ ಎಮಿಲಿಯಾ, ಬೋಗನ್ ವಿಲ್ಲಾ, ಪ್ಲೋಮೇರಿಯಾ ಪುಡಿಕ್, ರಾಯಲ್ ಪಾಮ್, ನಂದಿ ಬಟ್ಟಲು, ಕಣಗಲೆ,



ವಾಹನಗಳಿಂದ ಹೊರಸೂಸುವ ಹೊಗೆ ಹಿಡಿದಿಟ್ಟುಕೊಳ್ಳುವ ವಿಷಮ್‌ಧಾರಿ ಗಿಡ.

ವಿಷಮ್‌ಧಾರಿ ಗಿಡ ಸೇರಿದಂತೆ ಹಲವು ಬಗೆಯ ಅಲಂಕಾರಿಕ ಗಿಡಗಳನ್ನು ನೆಡಲಾಗಿದೆ. ವಾಹನಗಳ ಹೊಗೆಯಿಂದ ಎಲ್ಲೆಡೆ ವಾಯುಮಾಲಿನ್ಯ ಉಂಟಾಗಿ ಶುದ್ಧಗಾಳಿ ಮಾಯವಾಗಿದೆ. ಹೀಗಾಗಿ ಮೈಸೂರು ಮಹಾನಗರಪಾಲಿಕೆ ಪ್ರವಾಸಿಗರನ್ನು ಆಕರ್ಷಿಸುವ ಜತೆಗೆ ನಗರದಲ್ಲಿ ಹಸಿರೀಕರಣ ಸೃಷ್ಟಿಸುವ ಸಲುವಾಗಿ ಪ್ರಮುಖ ಹೆದ್ದಾರಿ ಹಾಗೂ ನಗರದ ಪ್ರಮುಖ ಜೋಡಿರಸ್ತೆಗಳ ಮಧ್ಯೆ ಅಲಂಕಾರಿಕ ಸಸಿಗಳನ್ನು ನೆಡಲು ತೀರ್ಮಾನಿಸಿತ್ತು.

ಇದಕ್ಕಾಗಿ 15ನೇ ಹಣಕಾಸು ಯೋಜನೆಯಡಿ ಸಲ್ಲಿಸಿದ್ದ ಕ್ರಿಯಾಯೋಜನೆಗೂ ಜಿಲ್ಲಾಡಳಿತ ಅನುಮೋದನೆ ನೀಡಿತ್ತು. ಇದೀಗ ಯೋಜನೆ ಪೂರ್ಣಗೊಂಡಿದೆ. ಇಲ್ಲಿಯವರೆಗೆ ಗಿಡಗಳನ್ನು ನೆಡಲು 2.80 ಕೋಟಿ ವೆಚ್ಚವಾಗಿದೆ. ಗಿಡ ನೆಡಲು ಪಾಲಿಕೆಯಿಂದ ಹಸಿಕಸದಿಂದ ತಯಾರಾಗಿರುವ 10 ಲೋಡ್ ಗೊಬ್ಬರ ಉಚಿತವಾಗಿ ನೀಡಲಾಗಿದೆ. ಕೇವಲ ಸಸಿ ನೆಟ್ಟರೆ

ರಸ್ತೆ ವಿಭಜಕಗಳಲ್ಲಿ ಗಿಡ ನೆಟ್ಟು ಬೆಳೆಸಲು ಕೋಟಿ ವೆಚ್ಚದ ಯೋಜನೆ

ಸಾಲದು. ಅವುಗಳ ನಿರ್ವಹಣೆ ಮಾಡಬೇಕು. ಸರಿಯಾದ ಸಮಯಕ್ಕೆ ನೀರು ಹಾಕಬೇಕು. ಸಸಿ ಒಣಗಿ ಹೋಗದಂತೆ ನೋಡಿಕೊಳ್ಳುವ ಹೊಣೆಯನ್ನೂ ಈ ಗುತ್ತಿಗೆದಾರರಿಗೆ ವಹಿಸಿದೆ ಎನ್ನುತ್ತಾರೆ ಸಹಾಯಕ ನಿರ್ದೇಶಕ ಮೋಹನ್.

ಯಾವ ಯಾವ ಮಾರ್ಗಗಳು: ಯರಗನಹಳ್ಳಿ ವೃತ್ತದಿಂದ ಮಹದೇವಪುರ ವೃತ್ತದವರೆಗೆ (3 ಕಿ.ಮೀ.), ಕುರುಬಾರಹಳ್ಳಿಯಿಂದ ಹಾಲಿನ ಡೇರಿವರೆಗೆ (0.75 ಕಿ.ಮೀ.), ಹಾಲಿನ ಡೇರಿ ವೃತ್ತದಿಂದ ದೇವೇಗೌಡ ವೃತ್ತದವರೆಗೆ (3.50 ಕಿ.ಮೀ.), ಎಸ್‌ಪಿ ಆಫೀಸ್ ವೃತ್ತದಿಂದ ಗಾಯತ್ರಿಪುರಂ ಮುಖ್ಯರಸ್ತೆವರೆಗೆ 0.40ಕಿ.ಮೀ, ಫೋರಂ ಮಾಲ್‌ನಿಂದ ರಾಜೀವ್‌ನಗರ (3 ಕಿ.ಮೀ.), ಫೌಂಟನ್ ವೃತ್ತದಿಂದ ಶಿವಾಜಿ ಮುಖ್ಯ ರಸ್ತೆವರೆಗೆ (0.85), ಮೆಟ್ರೋಪೋಲ್ ವೃತ್ತದಿಂದ ಹಿನಕಲ್‌ವರೆಗೆ (6ಕಿ.ಮೀ.), ದಾಸಪ್ಪ ವೃತ್ತದಿಂದ ರಿಂಗ್ ರಸ್ತೆವರೆಗೆ (5 ಕಿ.ಮೀ.), ಕೋರ್ಟ್ ಮುಂಭಾಗದಿಂದ ಅಗ್ರಹಾರ ವೃತ್ತದವರೆಗೆ (5 ಕಿ.ಮೀ.), ಏಕಲವ್ಯ ವೃತ್ತದಿಂದ ಹಾರ್ಡಿಂಜ್ ವೃತ್ತದವರೆಗೆ (4 ಕಿ.ಮೀ.), ಸಿಲ್ಕ್ ಫ್ಯಾಕ್ಟರಿ ವೃತ್ತದಿಂದ ರಿಂಗ್ ರಸ್ತೆವರೆಗೆ (4 ಕಿ.ಮೀ.),.

ಕುಕ್ಕರಹಳ್ಳಿ ಸಿಗ್ನಲ್‌ನಿಂದ ದಟ್ಟಗಳ್ಳಿವರೆಗೆ (5 ಕಿ.ಮೀ.), ರೈಲ್ವೆ ಸ್ಟೇಷನ್‌ನಿಂದ ರಾಮಸ್ವಾಮಿ ವೃತ್ತದವರೆಗೆ (1.5 ಕಿ.ಮೀ.), ಮೈಸೂರು ವಿವಿ ಪ್ರಾಚ್ಯ ವಸ್ತು ಸಂಶೋಧಾಲಯ ಕಚೇರಿ ಹಿಂಭಾಗದಿಂದ ಜಿಲ್ಲಾ ನ್ಯಾಯಾಲಯ (ಕೃಷ್ಣರಾಜ ಬುಲೆವಾರ್ಡ್ ರಸ್ತೆ) ದವರೆಗೆ (1 ಕಿ.ಮೀ.), ಸೌಗಂಧಿಕಾ ಉದ್ಯಾನದ ಮುಂಭಾಗದಿಂದ ಶಾಂತಿ ಸಾಗರ್ ಕಾಂಪ್ಲೆಕ್ಸ್‌ವರೆಗೆ (0.50 ಕಿ.ಮೀ.), ಫೌಂಟೇನ್ ವೃತ್ತದಿಂದ ಟಿಪ್ಪು ವೃತ್ತದವರೆಗೆ (0.50 ಕಿ.ಮೀ.), ಕೃಷ್ಣದೇವರಾಯ ವೃತ್ತದಿಂದ ರಿಂಗ್ ರಸ್ತೆವರೆಗೆ (1.50 ಕಿ.ಮೀ.), ಒಂಟಿಕೊಪ್ಪಲು ವೃತ್ತದಿಂದ ಸಂತ ಜೋಸೆಫ್ ಶಾಲೆ ವೃತ್ತದವರೆಗೆ (2 ಕಿ.ಮೀ.), ನಂಜರಾಜ ಬಹದ್ದೂರ್ ಛತ್ರದ ಮುಂಭಾಗದ ರಸ್ತೆ ವಿಭಜಕ (0.50 ಕಿ.ಮೀ.), ಬೆಂಗಳೂರು ನೀಲಗಿರಿ ರಸ್ತೆ ವಿಭಜಕ (1 ಕಿ.ಮೀ.), ಸುಭಾಷ್‌ನಗರ ದಂಡಿ ಮಾರಮ್ಮನ ರಸ್ತೆ ವಿಭಜಕ ಹಾಗೂ ಬೆಂಗಳೂರು–ಮೈಸೂರು ರಸ್ತೆ (2 ಕಿ.ಮೀ) ಮತ್ತು ನಾರ್ತ್ ಈಸ್ಟ್ ಆಫ್ ಎನ್.ಆರ್. ಮೊಹಲ್ಲಾ ದ್ರಾವಿಡ ಪಾರ್ಕ್‌ನಿಂದ ರಾಜೀವ್‌ನಗರ ಸೂರ್ಯನಾರಾಯಣ ದೇವಸ್ಥಾನದವರೆಗೆ (0.60 ಕಿ.ಮೀ ಅಲಂಕಾರಿಕ ಸಸಿಗಳನ್ನು ನೆಡಲಾಗಿದೆ ಎಂದು ಮೈಸೂರು ನಗರಪಾಲಿಕೆ ತೋಟಗಾರಿಕಾ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಮಾಹಿತಿ ನೀಡಿದರು.

ಹಳೇ ಕೆಸರೆಯಲ್ಲಿ ನಿಯಮ ಉಲ್ಲಂಘಿಸಿ ಘನತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ

- ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಮಾರ್ಗಸೂಚಿ ಸಹ ಪಾಲಿಸಿಲ್ಲ ; ಸಂಸತ್ ಅಧಿವೇಶನದಲ್ಲಿ ಸಂಸದ ಯದುವೀರ ಒಡೆಯರ್ ಆರೋಪ
- ಸದನದಲ್ಲಿ ಕನ್ನಡಲ್ಲೇ ಮಾತನಾಡಿದ ಸಂಸದರು

ಮೈಸೂರು,ಮಾ.12(ಪಿಎಂ)– ಹಳೇ ಕೆಸರೆ ಗ್ರಾಮದಲ್ಲಿ ನಿಯಮಗಳನ್ನು ಉಲ್ಲಂಘಿಸಿ ಘನತ್ಯಾಜ್ಯ ನಿರ್ವಹಣಾ ಘಟಕ ನಿರ್ಮಿಸುವ ಮೂಲಕ ಸ್ಥಳೀಯರು ಸಮಸ್ಯೆ ಅನುಭವಿಸುವಂತೆ ಮಾಡಲಾಗಿದೆ ಎಂದು ಬುಧವಾರ ಸಂಸತ್ ಅಧಿವೇಶನದಲ್ಲಿ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪಿಸಿದರು.



ನನ್ನ ಮಾತೃ ಭಾಷೆ ಕನ್ನಡದಲ್ಲಿ ವಿಷಯ ಮಂಡಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಅಭಾರಿಯಾಗಿದ್ದೇನೆಂದು ಮಾತು ಆರಂಭಿಸಿ ಕನ್ನಡದಲ್ಲೇ ಸಂಸದರು ಮಾತನಾಡಿದರು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಪರಿಮಿತಿಯಲ್ಲಿ ಬರುವ ಹಳೆ ಕೆಸರೆ ಗ್ರಾಮದಲ್ಲಿ ಅವೈಜ್ಞಾನಿಕ ರೀತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ ಮಾಡಿದ್ದು, ಇದರಿಂದ ತೊಂದರೆ ಅನುಭವಿಸುವಂತಾಗಿದೆ.

ಸದರಿ ಘನತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ ಸಂಬಂಧ ಕಾನೂನುಬದ್ಧ ಅನುಮತಿಗಳನ್ನು ಪಡೆದುಕೊಂಡಿಲ್ಲ. ಯಾವುದೇ ನೀತಿ–ನಿಯಮ ಪಾಲಿಸಿಲ್ಲ. ರಾಷ್ಟ್ರೀಯ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಕೇಂದ್ರ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸದೇ ಘಟಕದ ನಿರ್ಮಾಣ ಮಾಡಲಾಗಿದೆ. ಶಾಸನಬದ್ಧ ಯಾವುದೇ ಅನುಮತಿ ಪಡೆದಿಲ್ಲ ಅಲ್ಲದೆ, ಗ್ರಾಮ ಪಂಚಾಯಿತಿಯಿಂದ ಪಡೆಯಬೇಕಿರುವ ಅನುಮತಿಗಳನ್ನು ಸಹ ಪಡೆದಿಲ್ಲ. ಆ ಮೂಲಕ ಅರ್ಹತೆ ಇಲ್ಲದಿದ್ದರೂ ನಿಕ್ಷಾಪ ಸದರಿ ಘಟಕದ ನಿರ್ಮಾಣ ಮಾಡಲಾಗಿದೆ. ಇದರಿಂದ ಸುತ್ತಮುತ್ತಲ ಹಳ್ಳಿಗಳ ಸಾವಿರಾರು ಜನತೆ ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಇದರಿಂದ ಹೊರಹೊಮ್ಮುತ್ತಿರುವ ದುರ್ವಾಸನೆಯಿಂದ ಸುತ್ತಮುತ್ತಲ ಗ್ರಾಮಸ್ಥರು ತೀವ್ರ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಯಾವುದನ್ನೂ ಪಾಲಿಸದೆ ನಿರ್ಮಾಣ ಮಾಡಲಾಗಿದೆ. ಇಂತಹ ಅವೈಜ್ಞಾನಿಕ ಕ್ರಮದಿಂದ ಪರಿಸರ ಮೇಲೆ ದುಷ್ಪರಿಣಾಮ ಉಂಟಾಗಿದೆ. ಅಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಸೇರಿರುವ ಜಾಗವೂ ಇದೆ. ಘಟಕದಲ್ಲಿ ಅವೈಜ್ಞಾನಿಕವಾಗಿ ತ್ಯಾಜ್ಯವನ್ನು ಸುಡುವುದು ಹೆಚ್ಚಾಗುತ್ತಿದೆ. ಇದರಿಂದ ಹೊರಹೊಮ್ಮುತ್ತಿರುವ ಹೊಗೆ ಮತ್ತು ವಾಸನೆಯಿಂದ ಜನರಿಗೆ ತೊಂದರೆಯಾಗಿದೆ. ಹೀಗಾಗಿ ಜನರು ಪ್ರತಿಭಟನೆ ಸಹ ನಡೆಸಿದ್ದಾರೆ ಎಂದು ದೂರಿದರು.

ಗುತ್ತಿಗೆದಾರರಿಂದ ಕಾಮಗಾರಿಗಳಲ್ಲಿ ಶೇ. 40ಕ್ಕೂ ಅಧಿಕ ಕಮಿಷನ್ ಆರೋಪ

ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ವಿಚಾರಣಾ ಆಯೋಗದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ವರದಿ ಸಲ್ಲಿಕೆ

ಬೆಂಗಳೂರು, ಮಾ. 12– ಸರ್ಕಾರಿ ಟೆಂಡರ್ ಕಾಮಗಾರಿಗಳಲ್ಲಿ ಶೇ. 40ಕ್ಕಿಂತ ಹೆಚ್ಚು ಕಮಿಷನ್ ಚಾಲ್ತಿಯಲ್ಲಿದೆ ಎಂಬ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಮಾಡಿದ್ದ ಆರೋಪ ಮತ್ತು ರಾಯಚೂರು ಜಿಲ್ಲೆ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಿರುವ 10ರಿಂದ 18ರವರೆಗಿನ ಉಪ/ಸೀಳು ಕಾಲುವೆಗಳ ಆಧುನೀಕರಣ ಬಗ್ಗೆ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್ ವಿಚಾರಣಾ ಆಯೋಗವು ಈ ಎರಡು ಪ್ರಕರಣಗಳ ಪ್ರತ್ಯೇಕ ತನಿಖಾ ವರದಿಗಳನ್ನು ಇಂದು ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ.

ಇಂದು ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿದ ನ್ಯಾಯ ಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರು ಗುತ್ತಿಗೆದಾರರ ಸಂಘದ ಆರೋಪಕ್ಕೆ ಸಂಬಂಧಿಸಿದಂತೆ ಸುಮಾರು 20 ಸಾವಿರ ಪುಟಗಳ ತನಿಖಾ ವರದಿ ಮತ್ತು ನಾರಾಯಣಪುರ ಬಲದಂಡೆ ಕಾಲುವೆಗೆ ಸಂಬಂಧಿಸಿದಂತೆ ಸುಮಾರು 1800 ಪುಟಗಳ ತನಿಖಾ ವರದಿಯನ್ನು ಸಲ್ಲಿಸಿದರು.



ನ್ಯಾಯ ಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತನಿಖಾ ವರದಿ ಸಲ್ಲಿಸಿದರು

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು ಸರ್ಕಾರದ ಟೆಂಡರ್ ಕಾಮಗಾರಿಗಳಲ್ಲಿ ಶೇ. 40ಕ್ಕಿಂತ ಹೆಚ್ಚು ಕಮಿಷನ್ ಚಾಲ್ತಿಯಲ್ಲಿದೆ ಎಂದು ಆರೋಪಿಸಿತ್ತು. ಅಲ್ಲದೇ, ಪ್ಯಾಕೇಜ್ ಪದ್ಧತಿ ಕೈಬಿಡುವುದು, ಎಸ್‌ಆರ್ ದರಪಟ್ಟಿ ನಿಗದಿ, ಸ್ಟಾರ್ ರೇಟ್ ಪದ್ಧತಿ ಜಾರಿ, ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವಿಕೆ, ಸೀನಿಯಾರಿಟಿ ಮೇಲೆ ಬಿಲ್ ಪಾವತಿ, ಕೆಆರ್‌ಐಡಿಎಲ್‌ನಿಂದ ಗುತ್ತಿಗೆದಾರರಿಗೆ ನೇರವಾರಿ ಕಾಮಗಾರಿಗಳ ನೀಡಿಕೆ ತಪ್ಪಿಸುವುದು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು.

ಈ ಎಲ್ಲಾ ಆರೋಪಗಳ ಸತ್ಯಾಸತ್ಯತೆಗಳ ಬಗ್ಗೆ ವಿವರವಾದ ಅಧ್ಯಯನ ಮಾಡಿ ತನಿಖೆ ನಡೆಸಿ ವರದಿ ಸಲ್ಲಿಸಲಾಗಿದೆ. ಇದೊಂದು ಸಾರ್ವಜನಿಕ ಕಾಮಗಾರಿಗಳಿಗೆ ಸಂಬಂಧಿಸಿದ ಆರೋಪಗಳಾಗಿರುವುದರಿಂದ ಸಾರ್ವಜನಿಕರು ಹೇಳಿಕೆಗಳು ಮತ್ತು ವಿವರಗಳು ಬಹು ಮುಖ್ಯ ಎಂಬುದನ್ನು ಮನಗಂಡು ಇದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬಂದ ದೂರುಗಳ ಬಗ್ಗೆಯೂ ಆಯೋಗವು ಕೂಲಂಕುಷವಾಗಿ ತನಿಖೆ ನಡೆಸಿ, ಸಲಹೆ ಮತ್ತು ಅಭಿಪ್ರಾಯಗಳೊಂದಿಗೆ ವರದಿ ತಯಾರಿಸಲಾಗಿದೆ

ಗುತ್ತಿಗೆದಾರರ ಸಂಘದ ಆರೋಪಗಳ ತನಿಖೆ ನಡೆಸುತ್ತಿದ್ದ ಜೊತೆ ಜೊತೆಯಲ್ಲೇ ಸರ್ಕಾರವು ರಾಜ್ಯದ 5 ಪ್ರಮುಖ ಇಲಾಖೆಗಳಲ್ಲಿ 2019ರ ಜುಲೈ 26ರಿಂದ 2023ರ ಮಾರ್ಚ್ 31ರ ಅವಧಿಯಲ್ಲಿ ನಡೆದಿರುವ ಎಲ್ಲಾ ಕಾಮಗಾರಿಗಳ ತನಿಖೆ ನಡೆಸಿ ವರದಿ ನೀಡಬೇಕೆಂದು ತಿಳಿಸಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ಆಯೋಗವು ವೈಜ್ಞಾನಿಕವಾಗಿ ರ್‍ಯಾಂಡಮ್ ಮಾದರಿಯಲ್ಲಿ ಪೂರ್ಣಗೊಂಡ ಕಾಮಗಾರಿಗಳನ್ನು ತನಿಖೆ ಆಯ್ಕೆ ಮಾಡಿಕೊಂಡಿದೆ. ಈ ಆಯ್ಕೆಯಲ್ಲಿ ಎಲ್ಲಾ ಇಲಾಖೆಗಳು, ಎಲ್ಲಾ ಜಿಲ್ಲೆಗಳು, ಎಲ್ಲಾ ಮಾದರಿಯ ಕಾಮಗಾರಿಗಳು ಮತ್ತು ಎಲ್ಲಾ ಮೊತ್ತದ ಕಾಮಗಾರಿಗಳನ್ನು ಪರಿಗಣಿಸಲಾಗಿದೆ. ಕಾಮಗಾರಿಗಳ ಕಡತಗಳ ಪರಿಶೀಲನೆ, ಸ್ಥಳ ಪರಿಶೀಲನೆ ಮತ್ತು ಲೆಕ್ಕಪತ್ರಗಳ ಪರಿಶೀಲನೆ ಅಂಶಗಳನ್ನು ತನಿಖಾ ವರದಿ ಒಳಗೊಂಡಿರುತ್ತದೆ.

ಇನ್ನು ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾಗಿರುವ 10ರಿಂದ 18ರವರೆಗಿನ ಉಪ/ಸೀಳು ಕಾಲುವೆಯ ಆಧುನೀಕರಣ ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಮಂಜೂರಾದ ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಿ ಪ್ರಸಕ್ತ ನಿಗಮದ ಅಂದಾಜು ಪರಿಶೀಲನಾ ಸಮಿತಿಯು ಗಮನಿಸಿರುವ ತಾಂತ್ರಿಕ ನ್ಯೂನ್ಯತೆಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಸರ್ಕಾರದ ನಿವೃತ್ತ ಕಾರ್ಯದರ್ಶಿ ಸಿದ್ದಗಂಗಪ್ಪ ಅಧ್ಯಕ್ಷತೆಯಲ್ಲಿ ರಚಿಸಿದ್ದ ತಾಂತ್ರಿಕ ತಜ್ಞರ ಸಮಿತಿಯನ್ನು ವಿಸರ್ಜಿಸಿ ವಿಚಾರಣಾ ಆಯೋಜಕ್ಕೆ ಹೆಚ್ಚುವರಿಯಾಗಿ ವಹಿಸಿರುವ ತನಿಖೆಯನ್ನು ಆಯೋಗವು ನಡೆಸಿ ವರದಿ ಸಲ್ಲಿಸಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಂಚೆ ಇಲಾಖೆ ಮಹಿಳಾ ಸಿಬ್ಬಂದಿಗೆ ಸನ್ಮಾನ...



ಮೈಸೂರು ಇಂದಿರಾನಗರದ ಲಯನ್ಸ್ ಕ್ಲಬ್ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಇಟ್ಟಿಗೆಗೂಡಿನ ಪೋಸ್ಟ್ ಆಫೀಸ್‌ನ ಪೋಸ್ಟ್ ವುಮೆನ್, ಮಹಿಳಾ ಸಿಬ್ಬಂದಿಗಳಾದ ಮಾಲತಿ, ಶಶಿಕಲಾ, ಕು.ಹೇಮ, ಅನಿತಾ, ಕು.ಕನಕಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಲಯನ್ಸ್ ಕ್ಲಬ್‌ನ ಕಾರ್ಯದರ್ಶಿಗಳಾದ ಪ್ರಭಾಕರ್, ಖಜಾಂಚಿ ಚಿರಾಗ್, ಉಪಾಧ್ಯಕ್ಷರಾದ ಗೋಕುಲ್ ಗೋವರ್ಧನ್, ಮಾಜಿ ಅಧ್ಯಕ್ಷರಾದ ರಾಜಾರಾಮ್, ಅಚುತ, ಪಾಂಡುರಂಗ ವಿಠಲ್, ಪೋಸ್ಟ್ ಮಾಸ್ಟರ್ ರವಿಶಂಕರ್, ಪೋಸ್ಟ್ ಅಧಿಕಾರಿ ವಿನಯ, ಟೀಂ ಮೈಸೂರಿನ ಕಿರಣ್ ಜೈ ರಾಮಗೌಡ ಇನ್ನಿತರರಿದ್ದರು.

ಮಡಿಕೇರಿ ಸುತ್ತಮುತ್ತ ಭೂಮಿ ಕಂಪನ : ಜನರಲ್ಲಿ ಆತಂಕ

ಮಡಿಕೇರಿ,ಮಾ.12– ಮಡಿಕೇರಿ ತಾಲೂಕಿನ ಕೆಲವು ಭಾಗಗಳಲ್ಲಿ ಬುಧವಾರ ಬೆಳಗ್ಗೆ ಭೂಮಿ ಕಂಪಿಸಿದ ಅನುಭವವಾಗಿದ್ದು, ನಿವಾಸಿಗಳು ಆತಂಕಗೊಂಡಿದ್ದಾರೆ. ತಾಲೂಕಿನ ಮದೆನಾಡು, ಎರಡನೇ ಮೊಣ್ಣಂಗೇರಿ, ಬೆಟ್ಟತ್ತೂರು, ರಾಮಕೊಲ್ಲಿ, ದೇವಸ್ತೂರು, ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಹಿಂಭಾಗದ ಪ್ರದೇಶಗಳಲ್ಲಿ ಅಲ್ಪ ಪ್ರಮಾಣದಲ್ಲಿ ಭೂಮಿ ಕಂಪಿಸಿದೆ. ಬುಧವಾರ ಬೆಳಗ್ಗೆ 10.50ರ ಸಮಯದಲ್ಲಿ ಈ ಅನುಭವವಾಗಿದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಭೂಮಿ ಕಂಪಿಸಿದ ವೇಳೆ ಮನೆಯಲ್ಲಿದ್ದ ಪಾತ್ರೆ– ಪಗಡಿಗಳು, ವಾಹನಗಳು ಸೇರಿದಂತೆ ಹಲವು ವಸ್ತುಗಳು ಕೆಲ ಸೆಕೆಂಡುಗಳ ಕಾಲ ಅಲುಗಾಡಿವೆ. ಜನರು ಭಯಭೀತರಾಗಿ ಒಬ್ಬರಿಗೊಬ್ಬರು ದೂರವಾಣಿ ಮೂಲಕ ಸಂಪರ್ಕಿಸಿ ತಮಗಾದ ಅನುಭವಗಳನ್ನು ಹಂಚಿಗೊಂಡಿದ್ದಾರೆ.

ಕಂಪನ ದೃಢ–ಸ್ಪಷ್ಟನೆ: ಮದೆನಾಡು ವ್ಯಾಪ್ತಿಯ ಗ್ರಾಮಗಳಲ್ಲಿ ಬುಧವಾರ ಬೆಳಗ್ಗೆ 10 ಗಂಟೆ 49 ನಿಮಿಷ 5 ಸೆಕೆಂಡ್‌ನಲ್ಲಿ ರಿಕ್ಟರ್ ಮಾಪಕದಲ್ಲಿ ದಾಖಲಾಗಿರುವಂತೆ '1.6 ಮ್ಯಾಗ್ನಟ್ಯೂಡ್' ಪ್ರಮಾಣದಲ್ಲಿ ಭೂಮಿ ಕಂಪಿಸಿದೆ ಎಂದು ಕರ್ನಾಟಕ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಘಟಕ ದೃಢಪಡಿಸಿದೆ. ಮದೆ ಗ್ರಾಮದ ವಾಯುವ್ಯ ದಿಕ್ಕಿನ 2.4 ಕಿ.ಮೀ ದೂರದಲ್ಲಿ ಭೂಮಿಯ 5 ಕಿ.ಮೀ ಆಳದಲ್ಲಿ ಈ ಕಂಪನದ ಕೇಂದ್ರ ಬಿಂದುವಿದೆ. ಪರಿ ಣಾಮ ಒಟ್ಟು 15ರಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ಅಲ್ಪ ಪ್ರಮಾಣದಲ್ಲಿ ಭೂಮಿ ಕಂಪಿಸಿದ ಅನುಭವವಾಗುತ್ತದೆ ಎಂದು ಕರ್ನಾಟಕ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಘಟಕ ಸ್ಪಷ್ಟಪಡಿಸಿದೆ.

ಆತಂಕದ ಅಗತ್ಯವಿಲ್ಲ: ಇದು ಅಲ್ಪ ಪ್ರಮಾಣದ ಕಂಪನವಾಗಿದೆ. ಈ ಕಂಪನಗಳು ಯಾವುದೇ ರೀತಿಯ ಅನಾಹುತಗಳನ್ನು ಉಂಟು ಮಾಡುವುದಿಲ್ಲ. ಆದ್ದರಿಂದ ಕಂಪನದ ಅನುಭವ ಉಂಟಾದ ಪ್ರದೇಶದ ನಿವಾಸಿಗಳು ಆತಂಕಪಡುವ ಅಗತ್ಯವಿಲ್ಲ ಎಂದು ಅದು ಹೇಳಿದೆ.

ಭೂಕಂಪಕ್ಕೆ ಕಾರಣಗಳೇನು?: ಭೂಮಿಯೊಳಗೆ ಏಳು ಟೆಕ್ಟೋನಿಕ್ ಪ್ಲೇಟ್‌ಗಳಿವೆಯಂತೆ. ಈ ಟೆಕ್ಟೋನಿಕ್ ಪ್ಲೇಟ್‌ಗಳು ನಿರಂತರವಾಗಿ ಸುತ್ತುತ್ತಿರುತ್ತವೆ ಇವುಗಳು ಒಂದಕ್ಕೊಂದು ಘರ್ಷಿಸಿದಾಗ ಭೂಕಂಪ ಸಂಭವಿಸುತ್ತದೆ. ಟೆಕ್ಟೋನಿಕ್ ಪ್ಲೇಟ್‌ಗಳು ಒಂದರ ಮೇಲೊಂದು ಸ್ಥಾನ ಪಲ್ಲಟ ಇಲ್ಲವೆ ದೂರ ಸರಿದಾಗ ನೆಲ ಅದುರಲು ಪ್ರಾರಂಭವಾಗುತ್ತದೆ. ಇದನ್ನು ಭೂಕಂಪನ ಎಂದು ಕರೆಯಲಾಗುತ್ತದೆ. ರಿಕ್ಟರ್ ಮಾಪಕದಿಂದ ಇದರ ಪ್ರಮಾಣ ತಿಳಿಯಬಹುದು.

ಬೇರೆ ಬೇರೆ ಆಧಾರ್ ಕಾರ್ಡ್ ಬಳಸಿ ಆರೋಪಿಗಳಿಗೆ ಜಾಮೀನು

ಇಬ್ಬರ ವಿರುದ್ಧ ಕ್ರಿಮಿನಲ್ ಕೇಸ್

ಮೈಸೂರು, ಮಾ.12–ಆರೋಪಿಗಳಿಗೆ ಜಾಮೀನು ನೀಡಲು ವಿವಿಧ ನ್ಯಾಯಾಲಯಗಳಿಗೆ ಬೇರೆ ಬೇರೆ ಆಧಾರ್ ಕಾರ್ಡ್‌ಗಳನ್ನು ಬಳಸಿ ವಂಚಿಸಿರುವ ಬಗ್ಗೆ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ.

ಚಾಮರಾಜನಗರ ನಿವಾಸಿ ಮಾದೇಗೌಡ (59) ಮತ್ತು ಇಲವಾಲ ಹೋಬಳಿ ಜಟ್ಟಿಹುಂಡಿ ನಿವಾಸಿ ಸಿದ್ದಪ್ಪಾಜಿ ಅಲಿಯಾಸ್ ಅಮಾವಾಸಪ್ಪ (55) ಆರೋಪಕ್ಕೆ ಗುರಿಯಾದವರಾಗಿದ್ದಾರೆ.

ಮೈಸೂರಿನ ಎನ್.ಆರ್.ಠಾಣೆಯಲ್ಲಿ ದಾಖಲಾಗಿದ್ದ ಪೋಕ್ಸೋ ಪ್ರಕರಣದ ಆರೋಪಿ ಸಮಿಉಲ್ಲಾ ಖಾನ್‌ಗೆ ಮಾದೇಗೌಡ ನ್ಯಾಯಾಲಯದಲ್ಲಿ ತಮ್ಮ ಚಾಮರಾಜನಗರ ಜಿಲ್ಲೆ ಹರದನಹಳ್ಳಿ ಸರ್ವೆ ನಂ.397/4ರ ಸ್ವತ್ತಿನ ದಾಖಲೆಗಳೊಂದಿಗೆ ಆಧಾರ್ ಕಾರ್ಡ್ ಸಲ್ಲಿಸಿ ಜಾಮೀನು ನೀಡಿದ್ದ.

ಸರಸ್ವತಿಪುರಂ ಠಾಣೆಯಲ್ಲಿ ದಾಖಲಾಗಿದ್ದ ಮತ್ತೊಂದು ಪ್ರಕರಣದಲ್ಲಿ ಮಾದೇಗೌಡ ಮತ್ತು ಸಿದ್ದಪ್ಪಾಜಿ ಆರೋಪಿ ಯತೀಶ್ ಎಂಬಾತನಿಗೆ ಜಾಮೀನು ನೀಡಿದ್ದರು. ಇವರಿಬ್ಬರು ಆರೋಪಿಗಳು ಈ ನ್ಯಾಯಾಲಯ ಮಾತ್ರವಲ್ಲದೆ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಬೇರೆ ಬೇರೆ ಆಧಾರ್ ಕಾರ್ಡ್ ಬಳಸಿ ಆರೋಪಿಗಳಿಗೆ ಜಾಮೀನು ನೀಡುವ ಮೂಲಕ ನ್ಯಾಯಾಲಯಕ್ಕೆ ವಂಚಿಸಿದ್ದಾರೆ ಎಂದು ನ್ಯಾಯಾಧೀಶರ ಆದೇಶದ ಮೇರೆಗೆ ಸೆಷನ್ಸ್ ನ್ಯಾಯಾಲಯದ ಆಡಳಿತಾಧಿಕಾರಿ ರಮೇಶ್ ಬಿ.ಕುಲಕರ್ಣಿ ನೀಡಿದ ದೂರನ್ನು ಲಕ್ಷ್ಮೀಪುರಂ ಠಾಣೆ ಪೊಲೀಸರು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಕೊಡಗು, ಚಾ.ನಗರದ ಕೆಲವೆಡೆ ಸಾಧಾರಣ ಮಳೆ

ಮಂಗಳೂರಲ್ಲಿ ಭಾರಿ ಮಳೆ

ಗೋಣಿಕೊಪ್ಪ/ ಚಾಮರಾಜನಗರ, ಮಾ.12– ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಅಲ್ಲಲ್ಲಿ ತುಂತುರು ಮತ್ತು ಸಾಧಾರಣ ಮಳೆಯಾಗಿದ್ದು, ಜನರಲ್ಲಿ ಹರ್ಷವನ್ನುಂಟು ಮಾಡಿದೆ.

ಪೊನ್ನಂಪೇಟೆ, ಶ್ರೀಮಂಗಲ, ಕುಟ್ಟಾ ಸೇರಿದಂತೆ ಸುತ್ತ–ಮುತ್ತಲ ಪ್ರದೇಶದಲ್ಲಿ ಬೆಳಗ್ಗೆಯಿಂದ ಮೋಡ ಕವಿದ ವಾತಾವರಣ ವಿತ್ತು. ಇಂದು ಸಂಜೆ 6 ಗಂಟೆ ಸುಮಾರಿಗೆ ಮಳೆ ಸುರಿಯಲಾರಂಭಿಸಿತು. ಸುಮಾರು 15 ರಿಂದ 20 ನಿಮಿಷಗಳ ಕಾಲ ಸಾಧಾರಣ ಮಳೆ ಬಿದ್ದಿದೆ. ಇದು ಮುಂಗಾರು ಪೂರ್ವ ಮಳೆಯಾಗಿದೆ. ಇದೇ ರೀತಿ ಸಂಜೆ 7 ಗಂಟೆ ವೇಳೆಗೆ ಗೋಣಿಕೊಪ್ಪ ಸುತ್ತ–ಮುತ್ತ ತುಂತುರು ಮಳೆ ಸುರಿಯಿತು.

ಚಾ.ನಗರ: ಚಾಮರಾಜನಗರದಲ್ಲಿ ಬುಧವಾರ ಸಂಜೆ ಮಳೆ ಸುರಿದಿದೆ. ಇತ್ತ ಮಳೆಯಿಂದ ಬೇಸಿಗೆ ಬಿಸಿಲಿನಿಂದ ಕಂಗೆಟ್ಟಿದ್ದ ಜನರು ಒಂದಿಷ್ಟು ತಂಪಿನ ವಾತಾವರಣದ ಅನುಭವ ಪಡೆದಿದ್ದಾರೆ. ಬುಧವಾರ ಸಂಜೆ 5.30ರಲ್ಲಿ ಏಕಾಏಕಿ ಮಳೆ ಸುರಿಯಿತು.

ಮಂಗಳೂರು: ಇಂದು ಸಂಜೆ ಮಂಗಳೂರಿನಲ್ಲಿ ಭಾರಿ ಮಳೆಯಾಗಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ. ಹವಮಾನ ವೈಪರೀತ್ಯದಿಂದಾಗಿ ವಿಮಾನ ಹಾರಾಟ ಮಾರ್ಗವನ್ನು ಬದಲಾಯಿಸಲಾಗಿತ್ತು.

ದೇಶ - ವಿದೇಶ

ಚೀನಾ, ಪಾಕಿಸ್ತಾನಕ್ಕೆ ಬಿಎಲ್‌ಎ ಖಡಕ್ ಎಚ್ಚರಿಕೆ


ಇಸ್ಲಾಮಾಬಾದ್: ಬಲೂಚಿಸ್ತಾನ ಸ್ವಾತಂತ್ರ್ಯಕ್ಕಾಗಿ ಪಾಕಿಸ್ತಾನದ ಪ್ರಯಾಣಿಕರ ರೈಲು ಹೈಜಾಕ್ ಮಾಡಿರುವ ಬಲೂಚಿಸ್ತಾನ್ ಲಿಬರೇಶನ್ ಆರ್ಮಿ (ಬಿಎಲ್‌ಎ), ಇದೀಗ ನೇರವಾಗಿ ಚೀನಾ ಮತ್ತು ಪಾಕಿಸ್ತಾನ ಸೇನೆಗೆ ಖಡಕ್ ಎಚ್ಚರಿಕೆ ನೀಡಿದೆ. ಪಾಕಿಸ್ತಾನದಲ್ಲಿ ರೈಲು ಅಪಹರಣದ ಸುದ್ದಿ ವ್ಯಾಪಕ ಚರ್ಚೆಗೆ ಗ್ರಾಸವಾಗುತ್ತಿದ್ದು, ಈವರೆಗೂ ಪಾಕಿಸ್ತಾನ ಸೇನೆ 150 ಒತ್ತೆಯಾಳುಗಳನ್ನು ರಕ್ಷಣೆ ಮಾಡಿದೆ. ರೈಲು ಹೈಜಾಕ್ ಮಾಡಿದ್ದ ಬಿಎಲ್‌ಎ ಬಂಡುಕೋರರ ಪೈಕಿ 27 ಮಂದಿಯನ್ನು ಕಾರ್ಯಾಚರಣೆಯಲ್ಲಿ ಕೊಂದು ಹಾಕಿದೆ.



ಪಾಕಿಸ್ತಾನ ಮತ್ತು ಚೀನಾ ಸೇನೆ ಕಾರ್ಯಾಚರಣೆ ಕುರಿತು ಮಾತನಾಡಿರುವ ಬಿಎಲ್‌ಎನ ಮಜೀದ್ ಬ್ರಿಗೇಡ್ ಮುಖ್ಯಸ್ಥ, ಬದುಕುವ ಆಸೆ ಇದ್ದರೆ ಬಲೂಚಿಸ್ತಾನದಿಂದ ಹಿಂದೆ ಸರಿಯಿರಿ ಎಂದು ಎಚ್ಚರಿಕೆ ನೀಡಿದ್ದಾರೆ. ನಮ್ಮ ಬಿಎಲ್‌ಎ ಸೈನಿಕರ ಮೇಲೆ ದಾಳಿ ಮಾಡಿದರೆ ಇಡೀ ರೈಲನ್ನು ಸ್ಫೋಟಿಸುತ್ತೇವೆ. ಅಲ್ಲದೆ ರೈಲಿನಲ್ಲಿರುವವರನ್ನು ಗುಂಡಿಕ್ಕಿ ಕೊಂದು ಹಾಕುತ್ತೇವೆ ಎಂದು ಪಾಕಿಸ್ತಾನಿ ವಾಯುಪಡೆಗೆ ಎಚ್ಚರಿಕೆ ನೀಡಿದ್ದಾರೆ.

ಸರ್ಕಾರ ಟೀಕಿಸಿದ ರೈತನ ವಿಡಿಯೋ ಶೇರ್; ಪತ್ರಕರ್ತರ ಬಂಧನ

ಹೈದರಾಬಾದ್: ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ರೈತನೊಬ್ಬ ಟೀಕೆ ಮಾಡಿದ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಕ್ಕೆ ಇಬ್ಬರು ಪತ್ರಕರ್ತರನ್ನು ಬಂಧಿಸಲಾಗಿದೆ. ಇಂದು ಬೆಳಗ್ಗೆ ಹೈದರಾಬಾದ್ ಪೊಲೀಸರು ಇಬ್ಬರು ಪತ್ರಕರ್ತರಾದ ರೇವತಿ ಮತ್ತು ತನ್ವಿ ಯಾದವ್ ಅವರನ್ನು ರೈತನೊಬ್ಬನ ವಿವಾದಾತ್ಮಕ ವಿಡಿಯೋವನ್ನು ಯೂಟ್ಯೂಬ್ ಮತ್ತು ಇತರೆ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಕ್ಕೆ ಬಂಧಿಸಿದ್ದಾರೆ. ಬಂಧಿತರಾದ ಪತ್ರಕರ್ತರು ಹಂಚಿಕೊಂಡ ವಿಡಿಯೋದಲ್ಲಿ ತೆಲಂಗಾಣದ ರೈತ, ಕಾಂಗ್ರೆಸ್ ಸರ್ಕಾರದ ಆಡಳಿತದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ, ತನ್ನ ಕಷ್ಟಗಳನ್ನು ಹೇಳಿದ್ದರು. ಜೊತೆಗೆ ಮುಖ್ಯಮಂತ್ರಿ ರೇವಂತ್ ರೆಡ್ಡಿ ವಿರುದ್ಧ ಅವಹೇಳನಕಾರಿ ಕಾಮೆಂಟ್‌ಗಳನ್ನು ಮಾಡಿದ್ದರು. ಇದರ ಕುರಿತು ಕಾಂಗ್ರೆಸ್ ಪಕ್ಷದ ನಾಯಕರ ದೂರಿನ ಮೇರೆಗೆ, ಹೈದರಾಬಾದ್ ಪೊಲೀಸರು ಸಾಮಾಜಿಕ ಜಾಲತಾಣಗಳಲ್ಲಿ ಪತ್ರಕರ್ತರು ಮತ್ತು ಇತರರು ವೀಡಿಯೊವನ್ನು ಪೋಸ್ಟ್ ಮಾಡಿದ್ದಕ್ಕೆ ಪ್ರಕರಣ ದಾಖಲಿಸಿದ್ದಾರೆ.



ಮಾರ್ಚ್‌ನಲ್ಲಿ ಭಾರತಕ್ಕೆ ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್

ನ್ಯೂಯಾರ್ಕ್: ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಈ ತಿಂಗಳ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ. ತಮ್ಮ ಪತ್ನಿ ಭಾರತೀಯ ಮೂಲದ ಉಷಾ ವ್ಯಾನ್ಸ್ ಅವರೊಂದಿಗೆ ವ್ಯಾನ್ಸ್ ಅವರು ಈ ತಿಂಗಳ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಪೊಲಿಟಿಕೊ ವರದಿಯೊಂದು ತಿಳಿಸಿದೆ.



ಕಳೆದ ತಿಂಗಳು ಫ್ರಾನ್ಸ್ ಮತ್ತು ಜರ್ಮನಿ ಪ್ರವಾಸ ಕೈಗೊಂಡಿದ್ದ ವ್ಯಾನ್ಸ್ ಅವರು ಭಾರತಕ್ಕೆ ಆಗಮಿಸಿದರೆ ಉಪಾಧ್ಯಕ್ಷರಾದ ಬಳಿಕ ಅವರ ಎರಡನೇ ವಿದೇಶ ಪ್ರವಾಸ ಇದಾಗಿದೆ. ಅವರ ಪತ್ನಿ ಉಷಾ ವ್ಯಾನ್ಸ್ ಅವರ ಪೋಷಕರಾದ ಕ್ರಿಶ್ ಚಿಲುಕುರಿ ಮತ್ತು ಲಕ್ಷ್ಮಿ ಚಿಲುಕುರಿ 1970ರ ದಶಕದ ಉತ್ತರಾರ್ಧದಲ್ಲಿ ಭಾರತದಿಂದ ಅಮೆರಿಕಕ್ಕೆ ವಲಸೆ ಹೋಗಿ ನೆಲೆಸಿದರು. ಉಷಾ ಅವರು ಅಮೆರಿಕ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಾನ್ ಜಿ ರಾಬರ್ಟ್ಸ್ ಮತ್ತು ಕೊಲಂಬಿಯಾ ಸರ್ಕ್ಯೂಟ್‌ನ ಜಿಲ್ಲಾ ಮೇಲ್ಮನವಿ ನ್ಯಾಯಾಲಯದ ನ್ಯಾಯಾಧೀಶ ಬ್ರೆಟ್ ಕವನಾಗ್ ಅವರ ಕೈಕೆಳಗೆ ಕೆಲಸ ಮಾಡಿದ್ದಾರೆ.



ನಟಿ ಸೌಂದರ್ಯ ಸಾವು ಅಪಘಾತವಲ್ಲ; ಕೊಲೆ

ಹೈದರಾಬಾದ್: ದಕ್ಷಿಣ ಭಾರತದ ಖ್ಯಾತ ನಟಿ ಸೌಂದರ್ಯ 2004 ಏಪ್ರಿಲ್ 7ರಂದು ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದರು. ಈ ಕೇಸ್‌ಗೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಇದು ಅಪಘಾತವಲ್ಲ ಕೊಲೆ ಎಂದು ಪೊಲೀಸ್ ಠಾಣೆಯಲ್ಲಿ ತೆಲುಗು ಚಿತ್ರರಂಗದ ದಿಗ್ಗಜ ನಟ ಮೋಹನ್ ಬಾಬು ವಿರುದ್ಧ ದೂರು ದಾಖಲಿಸಲಾಗಿದೆ.

ತೆಲಂಗಾಣದ ಖಮ್ಮಂ ಜಿಲ್ಲೆ ಸತ್ಯನಾರಾಯಣಪುರ ಗ್ರಾಮದ ಎದುರುಗಟ್ಲ ಚಿಟ್ಟಿಬಾಬು ಎಂಬಾತ ನಟ ಮೋಹನ್ ಬಾಬು ವಿರುದ್ಧ ದೂರು ನೀಡಿದ್ದಾರೆ. ಮೋಹನ್ ಬಾಬು ವಾಸವಿರುವ ಹೈದರಾಬಾದಿನ ಜಲಪಲ್ಲಿ ಬಳಿಯ ಟೌನ್‌ಶಿಪ್ ಸೌಂದರ್ಯಾ ಅವರಿಗೆ ಸೇರಿದ್ದು. ಕೂಡಲೇ ಮೋಹನ್ ಬಾಬು ಅವರನ್ನು ಖಾಲಿ ಮಾಡಿಸಿ ಎಂದು ಮನವಿ ಮಾಡಿದ್ದಾರೆ. ಸೌಂದರ್ಯ ನಟಿಸಿದ ಕೊನೆಯ ಸಿನಿಮಾ 'ಶಿವಶಂಕರ' ಚಿತ್ರೀಕರಣದ ಸಮಯದಲ್ಲಿ ಸೌಂದರ್ಯ ಜಲಪಲ್ಲಿ ಬಳಿ 6 ಎಕರೆ ಜಮೀನು ಖರೀದಿ ಮಾಡಿದ್ದರು. ಈ ವಿಷಯವನ್ನು ಮೋಹನ್ ಬಾಬು ಬಳಿ ಹೇಳಿಕೊಂಡಿದ್ದರು. ಆಗ ಮೋಹನ್ ಬಾಬು ಸೌಂದರ್ಯ ಕಡೆಯಿಂದ ಆ ಜಮೀನು ಖರೀದಿ ಮಾಡಲು ಮುಂದಾಗಿದ್ದು, ಅದಕ್ಕೆ ಅವರು ಒಪ್ಪಲಿಲ್ಲ. ಹೀಗಾಗಿ ಮೋಹನ್ ಬಾಬು ಸೌಂದರ್ಯ ಅವರನ್ನು ಹತ್ಯೆ ಮಾಡಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಮಾರಿಷಸ್‌ನ 'ಅತ್ಯುನ್ನತ ಗೌರವ'ಕ್ಕೆ ಪ್ರಧಾನಿ ನರೇಂದ್ರ ಮೋದಿ ಭಾಜನ

ಮಾರಿಷಸ್: ಮಾರಿಷಸ್‌ನ ಅತ್ಯುನ್ನತ ಗೌರವ 'ದಿ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಮತ್ತು ಕೀ ಆಫ್ ದಿ ಇಂಡಿಯನ್ ಓಶಿಯನ್' ಪ್ರಧಾನಿ ನರೇಂದ್ರ ಮೋದಿ ಅವರಿಗೆ ಲಭಿಸಿದೆ. ಭಾರತ ಮತ್ತು ಮಾರಿಷಸ್ ನಡುವಿನ ಬಾಂಧವ್ಯವನ್ನು ಬಲಪಡಿಸಲು ನೀಡಿದ ಕೊಡುಗೆಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಈ ಪ್ರತಿಷ್ಠಿತ ಪ್ರಶಸ್ತಿ ಪಡೆಯುತ್ತಿರುವ ಮೊದಲ ಭಾರತೀಯ ಮೋದಿ ಅವರಾಗಿದ್ದಾರೆ. ಇದು ಪ್ರಧಾನಿ ಮೋದಿಗೆ ವಿದೇಶಿ ರಾಷ್ಟ್ರದಿಂದ ನೀಡುತ್ತಿರುವ 21ನೇ ಅಂತರ ರಾಷ್ಟ್ರೀಯ ಪ್ರಶಸ್ತಿಯಾಗಿದೆ. ಈ ವಿಶಿಷ್ಟ ಮನ್ನಣೆಯನ್ನು ಪಡೆದ ಐದನೇ ವಿದೇಶಿ ಪ್ರಜೆ ಮೋದಿ ಎಂದು ಮಾರಿಷಸ್ ಪ್ರಧಾನಿ ನವೀನ್ ರಾಮಗೂಲಂ ಹೇಳಿದ್ದಾರೆ.



ಆಹಾರ ಅರಸಿ ಬಂದ ಕಾಡಾನೆ ವಿದ್ಯುತ್ ಸ್ಪರ್ಶದಿಂದ ಸಾವು

ಸಿದ್ದಾಪುರ ಬಳಿ ದುರಂತ, ಕಾಫಿ ತೋಟದ ಕಾರ್ಮಿಕನ ಬಂಧನ



ಸಿದ್ದಾಪುರ, ಮಾ.12– ಆಹಾರ ಅರಸಿ ಕಾಡಿನಿಂದ ಕಾಫಿ ತೋಟಕ್ಕೆ ಬಂದ ಕಾಡಾನೆಯೊಂದು ವಿದ್ಯುತ್ ಸ್ಪರ್ಶದಿಂದ ಸ್ಥಳದಲ್ಲಿ ಸಾವನ್ನಪ್ಪಿರುವ ಘಟನೆ ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿ ಸಮೀಪದ ಅತ್ತಿಮಂಗಲ ಬಳಿಯ ಕಾಫಿ ತೋಟವೊಂದರಲ್ಲಿ ಸಂಭವಿಸಿದೆ.

ಕಾಡುಪ್ರಾಣಿಗಳ ಹಾವಳಿ ತಡೆಗೆ ಅಳವಡಿಸಲಾಗಿದ್ದ ಸೋಲಾರ್ ತಂತಿಯ ಮೂಲಕ ವಿದ್ಯುತ್ ಸ್ಪರ್ಶಗೊಂಡಿರುವ ಕಾರಣದಿಂದ 36 ವರ್ಷ ಪ್ರಾಯದ ಗಂಡಾನೆ ಮೃತಪಟ್ಟಿದೆ ಎಂದು ಶಂಕಿಸಲಾಗಿದ್ದು ಮರಣೋತ್ತರ ಪರೀಕ್ಷೆ ವರದಿ ನಂತರ ಸೂಕ್ತ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ ಅಧಿಕಾರಿಗಳು ಮುಂದಾಗಿದ್ದಾರೆ.

ಮಾಹಿತಿ ತಿಳಿದ ಚೆಸ್ಕಾಂ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿದ್ಯುತ್ ಮಾರ್ಗದ ಲೈನ್‌ನಿಂದ ವಿದ್ಯುತ್ ಪ್ರವಹಿಸಿ ಈ ಘಟನೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದ ಅಧಿಕಾರಿಗಳು ಸೋಲಾರ್ ತಂತಿಗೆ ಅಕ್ರಮ ವಿದ್ಯುತ್ ಸರಬರಾಜು ಆಗಿರುವ ಕಾರಣದಿಂದ ಕಾಡಾನೆ ಮೃತಪಟ್ಟಿರಬಹುದು ಎಂದು ಅಂದಾಜಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಅರಣ್ಯ ಇಲಾಖೆ ಕಾಫಿ ತೋಟದ ಕಾರ್ಮಿಕರೋರ್ವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಮೂರು ದಿನಗಳ ಹಿಂದೆ ಕಾಡಾನೆ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

ಸೋಲಾರ್ ತಂತಿಯ ಮೂಲಕ ವಿದ್ಯುತ್ ಸ್ಪರ್ಶಗೊಂಡು ಮೃತಪಟ್ಟ ಕಾಡಾನೆಯ ಮರಣೋತ್ತರ ಪರೀಕ್ಷೆ ಹಾಗೂ ಅಂತ್ಯಸಂಸ್ಕಾರಕ್ಕೆ ಕಾಫಿ ತೋಟದವರು ಅಡ್ಡಿಪಡಿಸಿದ ಘಟನೆಯೂ ನಡೆಯಿತು. ಈ ಹಿನ್ನೆಲೆಯಲ್ಲಿ ಕಾಡಾನೆಯ ಕಳೇಬರವನ್ನು ಕ್ರೇನ್ ಹಾಗೂ ಜೆಸಿಬಿ ಬಳಸಿ ಲಾರಿ ಮೂಲಕ ಸಮೀಪದ ಅರಣ್ಯಕ್ಕೆ ಕೊಂಡೊಯ್ದು ಮರಣೋತ್ತರ ಪರೀಕ್ಷೆ ನಡೆಸಿ ನಂತರ ಅಂತ್ಯಸಂಸ್ಕಾರ ನಡೆಸಲಾಯಿತು.

ಘಟನಾ ಸ್ಥಳದಲ್ಲಿ ಎಸಿಎಫ್ ಗೋಪಾಲ್, ಆರ್‌ಎಫ್‌ಓ ರತನ್ ಕುಮಾರ್, ಡಿಆರ್‌ಎಫ್ ಸುಬ್ರಾಯ, ಅರಣ್ಯ ಇಲಾಖೆ ವನ್ಯಜೀವಿ ವೈದ್ಯರಾದ ಚಿಟ್ಟಿಯಪ್ಪ ಶಿಂಧೆ, ಚೆಸ್ಕಾಂ ಇಲಾಖೆ ಅಧಿಕಾರಿ ಮಂಜುನಾಥ್ ಸೇರಿದಂತೆ ಸಿಬ್ಬಂದಿಗಳು ಸ್ಥಳದಲ್ಲಿ ಹಾಜರಿದ್ದರು.

ಕಾರು ಡಿಕ್ಕಿ: ರಸ್ತೆ ಬದಿ ಮಾತನಾಡುತ್ತಾ ನಿಂತಿದ್ದ ಇಬ್ಬರಿಗೆ ಗಂಭೀರ ಗಾಯ



ಇಬ್ಬರನ್ನು ಗಾಯಗೊಳಿಸಿ ಚರಂಡಿಗೆ ಗುದ್ದಿದ ಕಾರು

ಸುಂಟಿಕೊಪ್ಪ, ಮಾ.12– 7ನೇ ಹೊಸಕೋಟೆ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಗಂಭೀರ ಗಾಯಗೊಂಡಿರುವ ಘಟನೆ ವರದಿಯಾಗಿದೆ.

ಬುಧವಾರ ಬೆಳಿಗ್ಗೆ 9.30ರ ಸಮಯದಲ್ಲಿ 7ನೇ ಹೊಸಕೋಟೆಯ ಹೋಟೆಲ್ ಒಂದರ ಮುಂಭಾಗದಲ್ಲಿ ನಿಜಾಮುದ್ದೀನ್ ಹಾಗೂ ಹರ್ಬಜ್ ಹೆದ್ದಾರಿ ಬದಿಯಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿಕೊಂಡು ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಮಡಿಕೇರಿಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಕಾರು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ನಿಂತಿದ್ದ ನಿಜಾಮುದ್ದೀನ್ ಹಾಗೂ ಹರ್ಬಜ್ ಅವರಿಗೆ ಡಿಕ್ಕಿ ಹೊಡೆದು ಬಳಿಕ ಮೋರಿಗೆ ಗುದ್ದಿದೆ ಇದರಿಂದ ನಿಜಾಮುದ್ದೀನ್ ಅವರ ಕಾಲು ಮುರಿದಿದ್ದು ಹರ್ಬಜ್ ಅವರಿಗೂ ಗಂಭೀರ ಗಾಯಗಳಾಗಿವೆ. ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ಸಾಗಿಸಲಾಗಿದೆ. ಅಪಘಾತ ಪ್ರಕರಣ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ.

ಸಮಾಜದ ಒಗ್ಗಟ್ಟು ಮೂಡಿಸುವ ಸಲುವಾಗಿ

ಏ.5ರಿಂದ ಮಡಿಕೇರಿಯಲ್ಲಿ ಅದ್ಧೂರಿ ರಾಮೋತ್ಸವ

ಕಳೆದ 34 ವರ್ಷಗಳಿಂದ ಶ್ರೀ ಕೋದಂಡರಾಮ ದೇವಾಲಯದಲ್ಲಿ ರಾಮನವಮಿಯಂದು ರಾಮೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಹೊಸ ಪರಿಕಲ್ಪನೆಯೊಂದಿಗೆ 2 ದಿನಗಳ ಕಾಲ ರಾಮೋತ್ಸವ ನಡೆಯಲಿದ್ದು, ಇದು ಮಲ್ಲಿಕಾರ್ಜುನ ನಗರಕ್ಕೆ ಮಾತ್ರವಲ್ಲ, ಇಡೀ ಮಡಿಕೇರಿ ನಗರಕ್ಕೆ ಸೀಮಿತವಾಗಿ ಆಯೋಜಿಸಲಾಗುತ್ತಿದೆ. ಮುಂದಿನ ವರ್ಷವೂ ಇದೇ ರೀತಿಯಲ್ಲಿ ವಿಜೃಂಭಣೆಯ ರಾಮೋತ್ಸವವನ್ನು ಆಚರಿಸಲಾಗುವುದು.



ಶ್ರೀ ಕೋದಂಡರಾಮೋತ್ಸವ ಸಮಿತಿಯ ಪ್ರಮುಖರು ಪತ್ರಿಕಾಗೋಷ್ಠಿಯಲ್ಲಿ ರಾಮೋತ್ಸವ ಕುರಿತು ಮಾಹಿತಿ ನೀಡಿದರು.

ಮಡಿಕೇರಿ,ಮಾ.12– ಶ್ರೀರಾಮಚಂದ್ರನಿಗೆ ಮೇಲು ಕೀಳು, ಜಾತಿ ಮತ ಭೇದವಿಲ್ಲ. ರಾಮನ ಈ ಆದರ್ಶವನ್ನು ಮೂಲವಾಗಿರಿಸಿಕೊಂಡು ಸರ್ವ ಸಮುದಾಯದ ಮಂದಿ ಒಗ್ಗೂಡಿ ಶ್ರೀರಾಮ ನವಮಿಯಂದು ಮಡಿಕೇರಿಯ ಮಲ್ಲಿಕಾರ್ಜುನ ನಗರ ಬಡಾವಣೆಯ ಶ್ರೀ ಕೋದಂಡರಾಮ ದೇವಾಲಯದಲ್ಲಿ ಶ್ರದ್ಧಾಭಕ್ತಿ ಮತ್ತು ವಿಜೃಂಭಣೆಯ ರಾಮೋತ್ಸವನ್ನು ಆಚರಿಸಲು ಸಿದ್ಧತೆ ನಡೆದಿದೆ.

ಏ.5 ಮತ್ತು 6ರಂದು ಅದ್ಧೂರಿಯಾಗಿ ಕೊಡಗು ಜಿಲ್ಲೆಯಲ್ಲೇ ಮಾದರಿ ರಾಮೋತ್ಸವವನ್ನು ಆಚರಿಸಲು ತಯಾರಿ ನಡೆಸಿರುವ ಶ್ರೀ ಕೋದಂಡರಾಮೋತ್ಸವ ಸಮಿತಿಯ ಪ್ರಮುಖರು ಎರಡು ದಿನಗಳ ಕಾಲ ನಡೆಯುವ ಕಾರ್ಯಕ್ರಮಗಳ ಕುರಿತು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶ್ರೀ ಕೋದಂಡರಾಮೋತ್ಸವ ಸಮಿತಿಯ ಅಧ್ಯಕ್ಷ ಕೆ.ಎಂ.ಗಣೇಶ್ ಮಾತನಾಡಿ, ಶ್ರೀರಾಮ ಮೆಟ್ಟಿದ ಈ ಮಣ್ಣಿನಲ್ಲಿ ಸರ್ವರೂ ಒಗ್ಗಟ್ಟಿನಿಂದ ಜೀವನ ಸಾಗಿಸಬೇಕಾಗಿದೆ. ಸರ್ವ ಜನಾಂಗಗಳ ಶಾಂತಿಯ ತೋಟದ ಹೂವುಗಳು ಶ್ರೀರಾಮನಿಗೆ ಅರ್ಪಣೆಯಾಗಬೇಕಾಗಿದೆ. ಸಮುದಾಯಗಳ ನಡುವಿನ ಭಿನ್ನಾಭಿಪ್ರಾಯಗಳು ಈ ರಾಮೋತ್ಸವದ ಮೂಲಕ ದೂರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಮಾಜದಲ್ಲಿ ಒಗ್ಗಟ್ಟನ್ನು ಮೂಡಿಸುವ ಉದ್ದೇಶದಿಂದ ಹೊಸ ಪರಿಕಲ್ಪನೆಯೊಂದಿಗೆ 35ನೇ ವರ್ಷದ ರಾಮೋತ್ಸವವನ್ನು ಆಚರಿಸಲಾಗುತ್ತಿದೆ. ಸುಮಾರು 25 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗುತ್ತಿದ್ದು, ಉಪಸಮಿತಿಗಳ ಮೂಲಕ 2 ದಿನಗಳ ಯಶಸ್ವಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಏ.5ರಂದು ಮಧ್ಯಾಹ್ನ 3 ಗಂಟೆಗೆ ನಗರದ ಗಾಂಧಿ ಮೈದಾನದಿಂದ ಶ್ರೀ ಕೋದಂಡರಾಮ ದೇವಾಲಯದವರೆಗೆ ರಾಮದೇವರ ಮೆರವಣಿಗೆ ನಡೆಯಲಿದೆ. ಭಜನಾ ತಂಡ, ಚಂಡೆವಾದ್ಯ, ವಿವಿಧ ಕಲಾತಂಡಗಳು, ಕಳಶ ಹೊತ್ತ ಮಹಿಳೆಯರು ಹಾಗೂ ಭಕ್ತರು ವಾದ್ಯಗೋಷ್ಠಿಗಳೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಮೆರವಣಿಗೆಯಲ್ಲಿ ತೆರಳಲಿದ್ದಾರೆ. ಶ್ರೀ ಕೋದಂಡರಾಮ ಟ್ರಸ್ಟ್ ಅಧ್ಯಕ್ಷ ಹಾಗೂ ಸಮಿತಿಯ ಸದಸ್ಯ ಹೆಚ್.ಎನ್.ನಂಜುಂಡ ಅವರು ಮೆರವಣಿಗೆಯ ನೇತೃತ್ವ ವಹಿಸಲಿದ್ದಾರೆ. ಶ್ರೀ ರಾಮಾಂಜನೇಯ ಭಜನಾ ಮಂಡಳಿಯ ಅಧ್ಯಕ್ಷ ಕೆ.ಕೆ. ಮಹೇಶ್ ಕುಮಾರ್ ಅವರ ನೇತೃತ್ವದಲ್ಲಿ ಭಜನೆ ನಡೆಯಲಿದೆ. ವಿವಿಧ ಮಹಿಳಾ ಸಮಿತಿಗಳ ಮುಂದಾಳತ್ವದಲ್ಲಿ ಕಳಸ ಮತ್ತು ಮಹಿಳಾ ತಂಡಗಳ ಮೆರವಣಿಗೆ ಸಾಗಲಿದೆ.

ಅಂದು ಸಂಜೆ ಮೆರವಣಿಗೆ ದೇವಾಲಯವನ್ನು ತಲುಪಿದ ನಂತರ ಸಭಾ ಕಾರ್ಯಕ್ರಮ ನಡೆಯಲಿದ್ದು, ಸಾಧಕರನ್ನು ಸನ್ಮಾನಿಸಿ ಗೌರವಿಸಲಾಗುವುದು. ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡ ಆಯೋಜಿಸಲಾಗಿದ್ದು, ಎಲ್ಲಾ ಸಮುದಾಯಗಳ ಸಾಂಪ್ರದಾಯಿಕ ಕಲೆಗಳು ಪ್ರದರ್ಶನಗೊಳ್ಳಲಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಏ.5 ಮತ್ತು 6 ರಂದು ಎರಡು ದಿನ ಸಂಜೆ ನಡೆಯಲಿದ್ದು, ಆಸಕ್ತ ತಂಡಗಳು ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಮಹೇಶ್ (9663326204) ಅವರನ್ನು ಮಾರ್ಚ್ 25ರೊಳಗೆ ಸಂಪರ್ಕಿಸುವಂತೆ ಕೆ.ಎಂ.ಗಣೇಶ್ ತಿಳಿಸಿದರು.

ಏ.6ರಂದು ಬೆಳಿಗ್ಗೆ ಗಣಪತಿ ಹೋಮ, ಪ್ರತಿಷ್ಠಾಪನಾ ಉತ್ಸವ ಮತ್ತು ರಾಮೋತ್ಸವದ ಪ್ರಯುಕ್ತ ವಿಶೇಷ ಪೂಜೆ ಮತ್ತು ಮಹಾಪೂಜೆ ನಡೆಯಲಿದೆ. ಅಂದು ಮಧ್ಯಾಹ್ನ ಭಕ್ತಾದಿಗಳಿಗೆ ಅನ್ನದಾನದ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಏ.5ರಂದು ಸಂಜೆ ಮೆರವಣಿಗೆಯ ನಂತರ ಲಘು ಉಪಾಹಾರವಿರುತ್ತದೆ. ಸುಧಾಕರ್ ಮತ್ತು ತಂಡ ಆಹಾರ ಸಮಿತಿಯ ನೇತೃತ್ವ ವಹಿಸಿಕೊಂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶ್ರೀ ಕೋದಂಡ ರಾಮೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ, ಶ್ರೀ ಕೋದಂಡ ರಾಮ ಟ್ರಸ್ಟ್ ಅಧ್ಯಕ್ಷ ಹಾಗೂ ಸಮಿತಿಯ ಸದಸ್ಯ ಹೆಚ್.ಎನ್. ನಂಜುಂಡ ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ಪ್ರವಾಸಿಗರ ಸುರಕ್ಷತೆ, ಭದ್ರತೆಗೆ ಒತ್ತು

ಮಡಿಕೇರಿ, ಮಾ.12– ಜಿಲ್ಲೆಯ ಪ್ರವಾಸಿ ಸ್ಥಳ, ಹೋಂಸ್ಟೇ ಹಾಗೂ ಹೋಟೆಲ್‌ಗಳು ಸೇರಿದಂತೆ ಎಲ್ಲೆಡೆ ಪ್ರವಾಸಿಗರ ಸುರಕ್ಷತೆ ಮತ್ತು ರಕ್ಷಣೆಗೆ ಒತ್ತು ನೀಡಬೇಕು. ಆ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇದುವರೆಗೆ ನೋಂದಣಿ ಆಗದಿರುವ ಹೋಂಸ್ಟೇಗಳು ಕಡ್ಡಾಯವಾಗಿ ನೋಂದಣಿ ಆಗಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಸೂಚಿಸಿದ್ದಾರೆ.

ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಭದ್ರತೆ ಮತ್ತು ಸುರಕ್ಷತೆ ನಿರ್ವಹಿಸುವ ಕುರಿತು ಜಿಲ್ಲೆಯ ಹೋಟೆಲ್, ರೆಸಾರ್ಟ್, ಹೋಂ–ಸ್ಟೇ ಹಾಗೂ ಟ್ರಾವೆಲ್ಸ್ ಏಜೆನ್ಸಿ ಸಂಸ್ಥೆಯ ಪ್ರತಿನಿಧಿಗಳ ಜತೆ ಬುಧವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರಸ್ತುತ ಹೋಂ–ಸ್ಟೇ ನೋಂದಣಿ ಪ್ರಕ್ರಿಯೆಯು ಅತ್ಯಂತ ಸರಳೀಕರಣವಾಗಿದ್ದು, ಕಡಿಮೆ ಅವಧಿಯಲ್ಲಿ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಪ್ರಮಾಣ ಪತ್ರ ನೀಡಲಾಗುತ್ತದೆ. ಆ ದಿಸೆಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಜಿಲ್ಲೆಯ ಎಲ್ಲಾ ಹೋಂ–ಸ್ಟೇಗಳು ಕಡ್ಡಾಯವಾಗಿ ಹೆಸರು ನೋಂದಾಯಿಸುವಂತೆ ಜಿಲ್ಲಾಧಿಕಾರಿ ಅವರು ಕೋರಿದರು.

ಮಳಿಗೆಗಳ ಹರಾಜು ಪ್ರಕ್ರಿಯೆಯಿಂದ 36.55 ಲಕ್ಷ ರೂ. ಆದಾಯ




ಮೀನು, ಕುರಿ ಹಾಗೂ ಕೋಳಿ ಮಾಂಸ ಮಳಿಗೆ ಹರಾಜು ಪ್ರಕ್ರಿಯೆ ನಡೆಯಿತು.

ವಿರಾಜಪೇಟೆ: 2025–26 ನೇ ಸಾಲಿನ ಮೀನು, ಕುರಿ ಹಾಗೂ ಕೋಳಿ ಮಾಂಸ ಮಳಿಗೆ, ವಾಹನ ಶುಲ್ಕ, ಸಂತೆ ಎತ್ತುವಳಿಯಿಂದ ವಾರ್ಷಿಕ ಹರಾಜಿನಲ್ಲಿ ವಿರಾಜಪೇಟೆ ಪುರಸಭೆಯ ಕಳೆದ ಸಾಲಿಗಿಂತ 18.44 ಲಕ್ಷ ರೂ. ಹೆಚ್ಚು ಆದಾಯ ಗಳಿಸಿದೆ.

ಪುರಸಭೆಯ ಅಧ್ಯಕ್ಷೆ ಎಂ.ಕೆ. ದೇಚಮ್ಮ ಅವರ ಅಧ್ಯಕ್ಷತೆಯಲ್ಲಿ ಪುರಭವನದಲ್ಲಿ ಬುಧವಾರ ನಡೆದ ವಿರಾಜಪೇಟೆ ಪುರಸಭೆಯ 2025–26 ಸಾಲಿನ ಮೀನು, ಕೋಳಿ ಹಾಗೂ ಕುರಿ ಮಾಂಸ ಮಳಿಗೆಯ ಹರಾಜಿನಲ್ಲಿ 36.55 ಲಕ್ಷರೂ. ಆದಾಯ ಗಳಿಸಿತು. ಕಳೆದ ಸಾಲಿನಲ್ಲಿ ಪುರಸಭೆಗೆ 18.11 ಲಕ್ಷ ರೂ. ಆದಾಯ ದೊರೆತಿತ್ತು. ಸಮುದ್ರ ಹಸಿ ಮೀನು ಮಾರಾಟ ಮಳಿಗೆಗಳ ಹರಾಜಿನಲ್ಲಿ ಈ ಬಾರಿ ಪುರಸಭೆಗೆ ದಾಖಲೆಯ 26.98 ಲಕ್ಷ ರೂ. ಆದಾಯ ದೊರೆತಿದೆ. ಹಸಿ ಮೀನು ಮಾರಾಟ ಮಳಿಗೆ ಸಂಖ್ಯೆ 1ರಿಂದ 7.03 ಲಕ್ಷ ರೂ, ಮಳಿಗೆ ಸಂಖ್ಯೆ 2ರಿಂದ 8.10 ಲಕ್ಷ ರೂ, ಮಳಿಗೆ ಸಂಖ್ಯೆ 3ರಿಂದ 6.91 ಲಕ್ಷ ರೂ. ಹಾಗೂ ಮಳಿಗೆ ಸಂಖ್ಯೆ 4ರಿಂದ 5 ಲಕ್ಷರೂ. ಸೇರಿದಂತೆ ಒಟ್ಟು 26.98 ಲಕ್ಷರೂ. ವಾರ್ಷಿಕ ಆದಾಯ ದೊರೆತಿದೆ. ಕೋಳಿ ಮಾಂಸ ಮಾರಾಟದ ಮಳಿಗೆ ಸಂಖ್ಯೆ 10ರಿಂದ 76 ಸಾವಿರ ರೂ, 11ರಿಂದ 51 ಸಾವಿರ ರೂ, ಮಳಿಗೆ ಸಂಖ್ಯೆ 5ರಿಂದ 93 ಸಾವಿರ ರೂ. ಸೇರಿ ಒಟ್ಟು 3.20 ಲಕ್ಷ ರೂ. ಆದಾಯ ಲಭಿಸಿತು. ಕುರಿ ಮಾಂಸದ 2 ಮಳಿಗೆಗಳಿಂದ ಒಟ್ಟು 1.93 ಲಕ್ಷ ರೂ. ಆದಾಯ ದೊರಕಿತು. ಈ ಬಾರಿ ವಾಹನ ಶುಲ್ಕ ಎತ್ತುವಳಿಯಲ್ಲಿ 2.93 ಲಕ್ಷ ರೂ, ಸಂತೆ ಎತ್ತುವಳಿ 3.44 ಲಕ್ಷ ರೂ. ಆದಾಯ ಪುರಸಭೆಗೆ ದೊರೆಕಿದೆ.

ಮಾಳೇಟಿರ ನಿತಿನ್ ಕಾರ್ಯಪ್ಪ ಕೋಲ್ಕತ್ತಾದ ಐಎನ್‌ಐನಲ್ಲಿ ಕಮಾಂಡಿಂಗ್ ಆಫೀಸರ್



ನಿತಿನ್ ಕಾರ್ಯಪ್ಪ

ಮಡಿಕೇರಿ: ಭಾರತೀಯ ನೌಕಾಪಡೆಯಲ್ಲಿ ಕ್ಯಾಪ್ಟನ್ ರ್‍ಯಾಂಕ್‌ನಲ್ಲಿರುವ ಕೊಡಗಿನ ಮಾಳೇಟಿರ ನಿತಿನ್ ಕಾರ್ಯಪ್ಪ ಅವರು ಕೋಲ್ಕತ್ತಾದ ಐಎನ್‌ಐನಲ್ಲಿ ಕಮಾಂಡಿಂಗ್ ಆಫೀಸರ್ ಆಗಿ ನಿಯೋಜಿತರಾಗಿದ್ದಾರೆ.

ಮೂಲತಃ ಜಿಲ್ಲೆಯ ಕುಕ್ಲೂರುವಿನ ಇದೀಗ ಮೈಸೂರಿನ ಬೋಗಾದಿಯ ನಿವಾಸಿ ಕ್ಯಾಪ್ಟನ್ ನಿತಿನ್ ಕಾರ್ಯಪ್ಪ, ಸೇಂಟ್ ಜೋಸೆಫ್ ಶಾಲೆಯ ಹಳೆ ವಿದ್ಯಾರ್ಥಿಯಾಗಿದ್ದು, ನಂತರ ರಾಷ್ಟ್ರೀಯ ಭಾರತೀಯ ಸೇನಾ ಕಾಲೇಜ್ ಡೆಹರಾಡೂನ್‌ನಲ್ಲಿ ತರಬೇತಿ ಹೊಂದಿ ಡಿಫೆನ್ಸ್ ಅಕಾಡೆಮಿಗೆ ಸೇರ್ಪಡೆಗೊಂಡರು.

ಈ ಹಿಂದೆ ಐಎನ್‌ಎಸ್ ಅಜಯ್, ಐಎನ್‌ಎಸ್ ಕಡ್ಮಟ್‌ನಲ್ಲಿ ಕಮಾಂಡರ್ ಆಗಿ ಸೇವೆ ಸಲ್ಲಿಸಿದ್ದರು. ಇಸ್ಲಾಮಾಬಾದ್‌ನ ಭಾರತೀಯ ರಾಯಭಾರಿ ಕಚೇರಿಯಲ್ಲಿ ಸಲಹೆಗಾರರಾಗಿ ಕೂಡ ಸೇವೆ ಸಲ್ಲಿಸಿದ್ದರು. ಇವರ ಪತ್ನಿ ರಾಷ್ಟ್ರೀಯ ಓಟಗಾರ್ತಿ ರೋಹಿಣಿ ಇತ್ತೀಚಿಗೆ ನಡೆದ ಟಾಟಾ ಮುಂಬೈ ಮೆರಥಾನ್‌ನಲ್ಲಿ ಭಾಗವಹಿಸಿ ಪೂರ್ಣ ಗುರಿ ತಲುಪಿದ್ದರು. ಇವರು ಮೈಸೂರಿನ ಬೋಗಾದಿಯಲ್ಲಿ ನೆಲೆಸಿರುವ ಮಾಳೇಟಿರ ಗಣೇಶ್ ಬೋಪಣ್ಣ ಹಾಗೂ ದಿವಂಗತ ಕಾವೇರಿ ಬೋಪಣ್ಣ ಅವರ ಪುತ್ರರಾಗಿದ್ದಾರೆ. ಇವರ ಕಿರಿಯ ಸಹೋದರ ನಯನ್ ಚಂಗಪ್ಪ ಮುಖ್ಯ ಮೆರಾಯಿನ್ ಇಂಜಿನಿಯರ್ ಆಗಿ ನ್ಯೂಜಿಲ್ಯಾಂಡಿನಲ್ಲಿದ್ದಾರೆ.

ಮಹಿಳೆಯರ ಆರೋಗ್ಯದಲ್ಲಿ ಕುಟುಂಬ, ಸಮಾಜದ ಸ್ವಾಸ್ಥ್ಯ ಅಡಗಿದೆ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್ ಉದ್ಘಾಟಿಸಿದರು.

ಚಾಮರಾಜನಗರ, ಮಾ.12– ಮಹಿಳೆಯರು ಉತ್ತಮ ಆರೋಗ್ಯ ಕಾಪಾಡಿಕೊಂಡರೆ ನಮ್ಮ ಸುತ್ತಮುತ್ತಲಿನ ಪರಿಸರ, ಕುಟುಂಬ, ಸಮಾಜ ಸ್ವಾಸ್ಥ್ಯದಿಂದ ಕೂಡಿರಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಪ್ರಾಯಪಟ್ಟರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ಎನ್.ಆರ್.ಎಲ್.ಎಂ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಪೆಣ್ಣು, ಪೆಣ್ಣೆಂದೇಕೆ ಜರಿಯುವರು, ಕಣ್ಣು ಕಾಣದ ಗಾವಿಲರು, ಪೆಣ್ಣಲ್ಲವೇ ನಿಮ್ಮನ್ನೆಲ್ಲಾ ಹಡೆದವಳು – ಜಿಲ್ಲೆಯ ಪ್ರಸಿದ್ಧ ಕವಿಯಿತ್ರಿ ಸಂಚಿ ಹೊನ್ನಮ್ಮ ಅವರ ಕವಿತೆ ಉಲ್ಲೇಖಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು, ಮಹಿಳೆಯರನ್ನು ಜರಿಯುವ ಕಾಲ ಈಗಿಲ್ಲ. ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲೂ ಮುನ್ನುಗ್ಗುತ್ತಿದ್ದಾರೆ. ಕುಟುಂಬ ಹಾಗೂ ಆಡಳಿತ ನಿರ್ವಹಣೆಯಲ್ಲಿ ಮುಂದಿದ್ದಾರೆ. ಸಮಾಜ ಶುದ್ಧಿಕರಣದಲ್ಲೂ ಮಹಿಳೆಯರ ಪ್ರಮುಖ ಪಾತ್ರವಿದೆ. ಇದು ಆರೋಗ್ಯಕಾರಿ ಬೆಳವಣಿಗೆಯಾಗಿದೆ ಎಂದರು. ಸರ್ಕಾರದ ಮಹತ್ವಾಕಾಂಕ್ಷಿ ಪಂಚಗ್ಯಾರಂಟಿ ಯೋಜನೆಗಳಲ್ಲಿ ಒಂದಾದ 'ಗೃಹಲಕ್ಷ್ಮೀ' ಅನುಷ್ಠಾನದಲ್ಲಿ ಇಡೀ ರಾಜ್ಯದಲ್ಲಿಯೇ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಶೇ. 50ರಷ್ಟು ಮಹಿಳಾ ಜನಸಂಖ್ಯೆ ಜಿಲ್ಲೆಯಲ್ಲಿದೆ. ಶೇ.50ರಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಅಧ್ಯಕ್ಷರು, ಸದಸ್ಯರಿದ್ದಾರೆ. ಜಿಲ್ಲೆಯಲ್ಲಿ ಸಂಪದ್ಭರಿತ ಅರಣ್ಯ ಪ್ರದೇಶಗಳು, ಪ್ರಕೃತಿ ತಾಣಗಳಿವೆ. ಮುಖ್ಯವಾಗಿ ಆಡಳಿತದಲ್ಲಿ ಮಹಿಳಾ ಪ್ರಾಧಾನ್ಯತೆ ಹೊಂದಿರುವ ಚಾಮರಾಜನಗರ ಜಿಲ್ಲೆ ಅಭಿವೃದ್ಧಿ ಚಿಂತನೆಯಲ್ಲಿಯೂ ಮುಂಚೂಣಿಯಲ್ಲಿರಬೇಕು ಎಂದು ಅವರು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ, ಕುಟುಂಬದಲ್ಲಿ ಎಲ್ಲರಿಗಾಗಿ ದುಡಿಯುವ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ದೈನಂದಿನ ಒತ್ತಡ ನಿರ್ವಹಣೆಗಾಗಿ ಯೋಗ, ವ್ಯಾಯಾಮ, ಧ್ಯಾನದಂತಹ ಆರೋಗ್ಯಕಾರಿ ಚಟುವಟಿಕೆಗಳಲ್ಲಿ ತೊಡಗಬೇಕು. ಮಹಿಳಾ ಹಕ್ಕುಗಳು, ಸಮಾನತೆ ಬಗ್ಗೆ ಅರಿವು ಹೊಂದಬೇಕು ಎಂದು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಪಿ.ಲಕ್ಷ್ಮೀ ಅವರು ಮಾತನಾಡಿದರು. ಇದೇ ವೇಳೆ ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಮತ್ತು ಅಂಗನವಾಡಿಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ ಮಹಿಳೆಯರನ್ನು ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾ ಅಧಿಕಾರಿ ದೀಪಾ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಸಿ.ಎನ್. ರೇಣುಕಾ, ಗುಂಡ್ಲುಪೇಟೆ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಉಮಾಪತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಮಂಜುನಾಥ್, ಗುಂಡ್ಲುಪೇಟೆ ತಾಲೂಕು ಆದಿವಾಸಿ ಸಾಮಾಜಿಕ ಹೋರಾಟಗಾರರಾದ ರತ್ನಮ್ಮ, ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಜಿಲ್ಲಾಧ್ಯಕ್ಷರಾದ ಸುಜಾತ, ಜಿಲ್ಲಾ ಸ್ತ್ರೀಶಕ್ತಿ ಒಕ್ಕೂಟಗಳ ಅಧ್ಯಕ್ಷರಾದ ಪದ್ಮ, ಕಾರ್ಯದರ್ಶಿ ಸರೋಜ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಇತರೆ ಗಣ್ಯರು ಸಭಾಂಗಣದ ಹೊರಭಾಗದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಏರ್ಪಡಿಸಲಾಗಿದ್ದ ವಸ್ತುಪ್ರದರ್ಶನವನ್ನು ವೀಕ್ಷಿಸಿದರು.

ಶ್ರೀ ಪ್ಲೇಗ್ ಮಾರಮ್ಮನವರ ಜಾತ್ರೆ, ಕೊಂಡೋತ್ಸವ



ಗುಂಡ್ಲುಪೇಟೆ ಪಟ್ಟಣದಲ್ಲಿ ಪ್ಲೇಗ್ ಮಾರಮ್ಮನವರ ಕೊಂಡೋತ್ಸವದ ಅಂಗವಾಗಿ ಸಾವಿರಾರು ಭಕ್ತರು ದೇವಾಲಯದ ಎದುರು ಉಪ್ಪು ಸುರಿದು ಹರಕೆ ತೀರಿಸಿದರು.

ಗುಂಡ್ಲುಪೇಟೆ, ಮಾ.12– ಪಟ್ಟಣದ ಹಳ್ಳದಕೇರಿಯಲ್ಲಿ ಶ್ರೀ ಪ್ಲೇಗ್ ಮಾರಮ್ಮನವರ 102ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಜಾತ್ರೆ ಮತ್ತು ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆ ಅಂಗವಾಗಿ ದೇವಾಲಯವನ್ನು ಸುಣ್ಣಬಣ್ಣ ತಳಿರು ತೋರಣಗಳಿಂದ ಮತ್ತು ಸುತ್ತಮುತ್ತ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಿ ರಸ್ತೆಯ ಎರಡೂ ಬದಿಗಳಲ್ಲಿ ಬಾಳೆಕಂದು ಮಾವಿನ ಎಲೆಗಳ ತೋರಣಗಳಿಂದ ಶೃಂಗರಿಸಲಾಗಿತ್ತು. ದೇವರ ಗರ್ಭಗುಡಿಯಲ್ಲಿ ತಾಯಿ ಮಾರಮ್ಮನ ಮೂರ್ತಿಯನ್ನು ವಸ್ತ್ರ ಒಡವೆಗಳಿಂದ ಅಲಂಕರಿಸಿ ನಾನಾ ವಿಧದ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು. ದೇವರ ಉತ್ಸವಮೂರ್ತಿಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ನಸುಕಿನಲ್ಲಿ ಪ್ರಧಾನ ಅರ್ಚಕ ಹಾಗೂ ಹರಕೆ ಹೊತ್ತ ಭಕ್ತರು ಕೊಂಡವನ್ನು ಹಾಯುವ ಮೂಲಕ ತಮ್ಮ ಭಕ್ತಿಭಾವ ಮೆರೆದರು. ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ್ದ ಭಕ್ತಾದಿಗಳು ದೇವಾಲಯದ ಮುಂಭಾಗ ಉಪ್ಪನ್ನು ಹಾಗೂ ಅರಿಶಿನ ಕುಂಕುಮ ಸುರಿದು ಹರಕೆ ತೀರಿಸುವ ಮೂಲಕ ದೇವರ ಕೃಪೆಗೆ ಪಾತ್ರರಾದರು. ನಂತರ ದೇವರ ವಿಗ್ರಹವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮಧುವನಹಳ್ಳಿಯಲ್ಲಿ ವಿಜೃಂಭಣೆಯ ಸಿದ್ದಪ್ಪಾಜಿ ಕೊಂಡೋತ್ಸವ



ಮಧುವನಹಳ್ಳಿಯಲ್ಲಿ ವಿಜೃಂಭಣೆಯಿಂದ ಕೊಂಡೋತ್ಸವ ಬುಧವಾರ ಜರುಗಿತು.

ಕೊಳ್ಳೇಗಾಲ, ಮಾ.12– ತಾಲೂಕಿನ ಮಧುವನಹಳ್ಳಿ ಗ್ರಾಮದಲ್ಲಿ ಸಿದ್ದಪ್ಪಾಜಿ ಕೊಂಡೋತ್ಸವ ಬುಧವಾರ ವಿಜೃಂಭಣೆಯಿಂದ ಜರುಗಿತು.

ಗ್ರಾಮದ ಬಸ್ ನಿಲ್ದಾಣದ ಬಳಿಯ ಮಹದೇಶ್ವರ ಕುರ್ಜುನಲ್ಲಿ ಗ್ರಾಮದ ಉಪ್ಪಾರ ಸಮುದಾಯ ಹಾಕಿದ್ದ ಕೊಂಡದ ಮೇಲೆ ಮಧುವನಹಳ್ಳಿ ಬಸವವನ್ನು ಹಾಯಿಸುವ ಮೂಲಕ ನಡೆಯಿತು. ಬಳಿಕ ಚಿಕ್ಕಲ್ಲೂರು ಮತ್ತು ಮಧುವನಹಳ್ಳಿ ಕಂಡಾಯಗಳನ್ನು ಹೆಗಲ ಮೇಲೆ ಹೊತ್ತಿದ್ದ ನೀಲಗಾರರು ಕೊಂಡ ಹಾಯ್ದರು. ಇದಕ್ಕೂ ಮುನ್ನ ಮಧುವನಹಳ್ಳಿ ಹೊರವಲಯದ ಆಂಜನೇಯ ಪುರದಲ್ಲಿ ಕಂಡಾಯಗಳಿಗೆ ಹೂ–ಹೊಂಬಾಳೆ ಧರಿಸಿ ಮೆರವಣಿಗೆ ಮೂಲಕ ನೀಲಗಾರರು ಹೊತ್ತು ಕೊಂಡವನ್ನು ಹಾಯ್ದರು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಜೈಕಾರ ಕೂಗಿ ಸಂಭ್ರಮಿಸಿದರು.

ಕೊಂಡೋತ್ಸವ ಹಿನ್ನೆಲೆ ಗ್ರಾಮದ ಉಪ್ಪಾರ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರ, ಹಸಿರು ತೋರಣ, ರಂಗೋಲಿಗಳನ್ನು ಹಾಕುವ ಮೂಲಕ ಅಲಂಕೃತಗೊಳಿಸಲಾಯಿತು. ಹನೂರು ಕ್ಷೇತ್ರದ ಶಾಸಕ ಎಂ.ಆರ್. ಮಂಜುನಾಥ್ ಹಾಗೂ ಬಿಜೆಪಿ ಮುಖಂಡ ನಿಶಾಂತ್ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ವೇಳೆ ನಿಶಾಂತ್‌ರವರಿಗೆ ದೇವಸ್ಥಾನದಲ್ಲಿ ಗ್ರಾಮಸ್ಥರು ಗೌರವ ಸಲ್ಲಿಸಿದರು.

ಕೊಂಡೋತ್ಸವದಲ್ಲಿ ಮಧುವನಹಳ್ಳಿ ಗ್ರಾಮದ ಗಡಿ ಯಜಮಾನರು ಚಿಕ್ಕತಾಂಡಶೆಟ್ಟಿ, ದೊಡ್ಡ ಯಜಮಾನರು ಸಿದ್ದರಾಜು, ಕೆಂಪಶೆಟ್ಟಿ, ರಾಜೇಶ್, ರಾಚಪ್ಪಾಜಿ, ನಂಜಪ್ಪ, ಗ್ರಾ.ಪಂ ಅಧ್ಯಕ್ಷರು ಸಿದ್ದಪ್ಪ ಇನ್ನಿತರರು ಇದ್ದರು.

ವಿಶ್ವಾವಸು ನಾಮ ಸಂವತ್ಸರದ ಪಂಚಾಂಗಗಳ ಬಿಡುಗಡೆ



ಚಾಮರಾಜನಗರದ ಜನಾರ್ಧನ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಸ್. ಭಾರತಿ ಪಂಚಾಂಗಗಳನ್ನು ಬಿಡುಗಡೆಗೊಳಿಸಿದರು.

ಚಾಮರಾಜನಗರ, ಮಾ.12– ವಿಶ್ವಾವಸು ನಾಮ ಸಂವತ್ಸರದ ಒಂಟಿಕೊಪ್ಪಲ್, ಉಡುಪಿ ಉತ್ತರಾದಿ ಮತ್ತು ರಾಘವೇಂದ್ರ ಮಠದ ಪಂಚಾಂಗಗಳನ್ನು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಸ್. ಭಾರತಿ ಬಿಡುಗಡೆಗೊಳಿಸಿದರು.

ಜನಾರ್ಧನ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿ ಮಾತನಾಡಿದಅವರು, ಒಂಟಿಕೊಪ್ಪಲ್ ಪಂಚಾಂಗ ಬಹಳ ಹಳೆಯದು, ಹಿಂದಿನಿಂದಲೂ ಪಂಚಾಂಗಗಳು ಮನುಷ್ಯ ಜೀವನದಲ್ಲಿ ಹಾಸುಹೊಕ್ಕಾಗಿವೆ ಎಂದರು.

ಜನಾರ್ಧನ ಪ್ರತಿಷ್ಠಾನದ ಅಧ್ಯಕ್ಷ ಅರ್ಚಕ ಅನಂತಪ್ರಸಾದ್ ಮಾತನಾಡಿ, ನಾವು ಯಾವುದೇ ಶುಭ ಮತ್ತು ಅಶುಭ ಕಾರ್ಯಗಳ ಇದರಿ ಪಂಚಾಂಗಗಳನ್ನು ನೋಡಿ ಮುಂದಿನ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ ಎಂದರು. ಹಿಂದೂಗಳ ಸೌರಮಾನ, ಚಾಂದ್ರಮಾನ ರೀತಿಯ ಕಾಲಗಣನೆಗೆ ಪಂಚಾಂಗವೆಂದು ಕರೆಯುತ್ತಾರೆ.ಪಂಚಾಂಗವೆಂದರೆ, ಐದು ಅಂಗಗಳನ್ನು ಒಳಗೊಂಡಿದ್ದು. ತಿಥಿ, ವಾರ, ನಕ್ಷತ್ರ, ಯೋಗ, ಮತ್ತು ಕರಣಗಳು ಇವೇ ಆ ಐದು ಅಂಗಗಳು. ಇವುಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ತಿಳಿಸುವಂಥದ್ದು ಪಂಚಾಂಗ ಎಂದರು.

ವರ್ಷಪೂರ್ತಿ ಬರುವ ಎಲ್ಲಾ ಹಬ್ಬ ಹರಿದಿನಗಳು, ರಥೋತ್ಸವಗಳು, ಮಹಾತ್ಮರ ಜನ್ಮದಿನಾಚರಣೆಗಳ ಬಗ್ಗೆ ಪೂರ್ಣ ವಿವರಗಳನ್ನು ಪಂಚಾಂಗಗಳು ಕೊಡುತ್ತವೆ, ರಾಶಿ ಆಧಾರದ ಮೇಲೆ ವೃತ್ತಿ, ಹಣಕಾಸು, ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕ್ಷೇತ್ರಗಳ ವಿಶ್ಲೇಷಣೆ. ಈ ಭವಿಷ್ಯವಾಣಿಗಳು ಗುರು, ಶನಿ, ರಾಹು ಮತ್ತು ಕೇತುಗಳ ಸಂಚಾರಗಳ ಮೇಲೆ ಆಧಾರಿತವಾಗಿವೆ. ವೃತ್ತಿ, ಶಿಕ್ಷಣ, ಆದಾಯ, ಆರೋಗ್ಯ ಮತ್ತು ಕುಟುಂಬದಂತಹ ಜೀವನದ ಬಗ್ಗೆ ವಾರ್ಷಿಕ ಜಾತಕವು ನಿಮಗೆ ಒಂದು ದೃಷ್ಟಿಕೋನವನ್ನು ನೀಡುತ್ತದೆ. ಮೇಷದಿಂದ ಮೀನರಾಶಿಯವರೆಗಿನ ಪ್ರತಿಯೊಂದು ರಾಶಿಗೂ ಪ್ರತ್ಯೇಕ ವರದಿಯನ್ನು ಪಂಚಾಂಗಗಳು ನೀಡುತ್ತವೆ ಎಂದರು. ಈ ಸಂದರ್ಭದಲ್ಲಿ ರಾಜಶೇಖರ್, ಸಿ.ವಿ. ನಾಗರಾಜು ವಾಸುದೇವ ರಾವ್, ಹೆಚ್.ವಿ. ಪವನ್‌ಚಾರ್ ಇದ್ದರು.

ನಾಳೆ ನಗರದ ಸಿಮ್ಸ್‌ನಲ್ಲಿ ನರ್ಸಿಂಗ್ ವಿದ್ಯಾರ್ಥಿಗಳ ಪ್ರತಿಜ್ಞಾ ವಿಧಿ ಕಾರ್ಯಕ್ರಮ

ಚಾಮರಾಜನಗರ, ಮಾ.12– ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಸಿಮ್ಸ್ ಕಾಲೇಜು ಆಫ್ ನರ್ಸಿಂಗ್ ಸಹಯೋಗದಲ್ಲಿ ಐದನೇಯ ಬ್ಯಾಚ್ ಬಿ.ಎಸ್ಸಿ. ನರ್ಸಿಂಗ್ ವಿದ್ಯಾರ್ಥಿಗಳಿಗೆ ದೀಪ ಬೆಳಗುವಿಕೆ ಮತ್ತು ಪ್ರತಿಜ್ಞಾ ವಿಧಿ ಕಾರ್ಯಕ್ರಮವನ್ನು ಮಾರ್ಚ್ 14ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಸಿಮ್ಸ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ.ಹೆಚ್.ಜಿ. ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಚಾಮರಾಜನಗರ ವಿಶ್ವವಿದ್ಯಾಲಯದ ಸುವರ್ಣ ಗಂಗೋತ್ರಿಯ ಉಪ ಕುಲಪತಿ ಎಂ.ಆರ್.ಗಂಗಾಧರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕರ್ನಾಟಕ ನರ್ಸಿಂಗ್ ಕೌನ್ಸಿಲ್ ನಿವೃತ್ತ ಕುಲಸಚಿವರಾದ ಸಿ.ಶಿವಮ್ಮ ವಿಶೇಷ ಆಹ್ವಾನಿತರು. ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಬೋಧನಾ ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿ ನಂಜುಂಡೇಗೌಡ ಭಾಗವಹಿಸುವರು.

ಮಳವಳ್ಳಿಯಲ್ಲಿ ಶ್ರೀ ಮಹದೇಶ್ವರಸ್ವಾಮಿ ಕೊಂಡ, ಜಾತ್ರೆ

ಗುಂಡ್ಲುಪೇಟೆ, ಮಾ.12– ತಾಲೂಕಿನ ಮಳವಳ್ಳಿ ಗ್ರಾಮದಲ್ಲಿ ಶ್ರೀ ಮಹದೇಶ್ವರ ಸ್ವಾಮಿಯ ಕೊಂಡ ಹಾಗೂ ಜಾತ್ರೆ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಪ್ರತಿ ವರ್ಷವೂ ಫಾಲ್ಗುಣ ಮಾಸದಲ್ಲಿ ನಡೆಯುವ ಜಾತ್ರೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ತುಂಬಾ ಹೆಸರಾಗಿದೆ. ಈ ಅಂಗವಾಗಿ ಮಂಗಳವಾರದಿಂದಲೇ ದೇವರಿಗೆ ಅಭಿಷೇಕ, ಹಾಲರಿವೆ, ವೀರಗಾಸೆ, ಬಿರುದು ಬಾವಲಿಗಳು ಹಾಗೂ ಮಂಗಳವಾದ್ಯ ಸಮೇತ ಬಂದು ದೇವರಿಗೆ ಪೂಜೆ ಸಲ್ಲಿಸಲಾಯಿತು.

ಇದೇ ವೇಳೆ ಗ್ರಾಮಸ್ಥರು ಸೇರಿ ದೇವಾಲಯದ ಬಳಿ ನಿರ್ಮಿಸಿದ್ದ ಕೊಂಡಕ್ಕೆ ಪೂಜೆ ಸಲ್ಲಿಸಿದ ನಂತರ ಗ್ರಾಮದ ದೇವತೆಗಳಾದ ಸಿದ್ದಪ್ಪಾಜಿ, ಶ್ರೀ ಬಸವೇಶ್ವರರ ಉತ್ಸವ ಮೂರ್ತಿಗಳನ್ನು ವೀರಗಾಸೆ, ಛತ್ರಿ ಚಾಮರಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಉತ್ಸವ ಮಾಡಲಾಯಿತು. ಅಹೋರಾತ್ರಿ ನಡೆದ ಉತ್ಸವ ದೇವಾಲಯದ ಬಳಿ ಬರುತ್ತಿದ್ದಂತೆ ಪ್ರತಿ ವರ್ಷದಂತೆ ಬುಧವಾರ ನಸುಕಿನಲ್ಲಿ ಪ್ರಧಾನ ಅರ್ಚಕರು ಮತ್ತು ದೇವರ ಬಸವ ಕೊಂಡ ಹಾಯ್ದರು.

ಮಧ್ಯಾಹ್ನದ ವೇಳೆಗೆ ಮಹದೇಶ್ವರರ ಉತ್ಸವ ಮೂರ್ತಿಯನ್ನು ರಥದ ಮೇಲೆ ಕುಳ್ಳಿರಿಸಿದ ನಂತರ ಸುತ್ತಮುತ್ತಲಿನ ಗ್ರಾಮಗಳ ಭಕ್ತರ ಸಮ್ಮುಖದಲ್ಲಿ ದಿವ್ಯ ರಥೋತ್ಸವ ನೆರವೇರಿತು. ನೆರೆದಿದ್ದ ಭಕ್ತರು ರಥವನ್ನು ಎಳೆದು ಪುನೀತರಾದರು. ರಥವನ್ನು ದೇವಾಲಯದ ಸುತ್ತಲೂ ಎಳೆದ ನಂತರ ಸ್ವಸ್ಥಾನದಲ್ಲಿ ನಿಲ್ಲಿಸಲಾಯಿತು. ಹರಕೆ ಹೊತ್ತ ಭಕ್ತರು ಇಲ್ಲಿಗೆ ಬಂದು ತಮ್ಮ ಹರಕೆಗಳನ್ನು ತೀರಿಸಿದರು.



ಗುಂಡ್ಲುಪೇಟೆ ತಾಲೂಕಿನ ಮಳವಳ್ಳಿ ಗ್ರಾಮದಲ್ಲಿ ಮಹದೇಶ್ವರರ ರಥವನ್ನು ಭಕ್ತರು ಎಳೆದು ಪುನೀತರಾದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
30X45
NORTH ATTACHED TO VIJAYANAGAR 4TH STAGE
E-KHATA READY
BANK LOAN AVAILABLE
8884133677

ಸೈಟು ಮಾರಾಟಕ್ಕಿದೆ
DTCP ಅನುಮೋದಿತ North East ಕಾರ್ನರ್ ಸೈಟ್ 50x40 ಅಳತೆಯ (2,096.50 ಚದರ ಅಡಿ) ಮೈಸೂರು ಅರಮನೆಯಿಂದ 12 ಕಿ.ಮೀ ಯಶ್ ಫಾರ್ಮ್ ಲೇಔಟ್, ಕುಮಾರ ಬೀಡು ಗ್ರಾಮ, ಬೀರಿಹುಂಡಿ ಗ್ರಾಮ ಪಂಚಾಯ್ತಿ, ಬೋಗಾದಿ ರಸ್ತೆ
9239755342/ 8971867171

ಬೇಕಾಗಿದ್ದಾರೆ
ಲಕ್ಷ್ಮೀಪುರಂನಲ್ಲಿ ಕೆಲಸ ಮಾಡಲು ಮಹಿಳಾ ಅಡುಗೆಯವರು ಬೇಕಾಗಿದ್ದಾರೆ.
Mob: 9632866616

WANTED
COMPUTER TYPIST (Male) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
For evening: (Male only). 7.00 pm to 11.30 pm. Salary: Rs. 10,000/- per month.
7349337469, 9448525072

Job openings
Immediate Requirement: Facility Technician, Education: Diploma/ Bachelors in engineering in electronic/Mechanics, Experience: 2-3years, Salary around :35-40K monthly, Place: Mysore
Hardcore Security's
8618685690,9591017065
ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಕೂಡಲೇ ಬೇಕಾಗಿದ್ದಾರೆ. ಸ್ಥಳ : ಮೈಸೂರು
9663958939

WANTED
Tata ace Driver
Graphic Designer
Helper boys
94480 67939
97395 69260

ಮಹಿಳೆಯರಿಗೆ ಸುವರ್ಣ ಅವಕಾಶ
ನಿಮಗೆ ಮಗ್ಗಂ ವರ್ಕ್, ಮದುವೆ ಮಷಿನ್ ಎಂಬ್ರಾಯಿಡರಿ ಮತ್ತು ಟೈಲರಿಂಗ್ ಫ್ಯಾಷನ್ ಡಿಸೈನಿಂಗ್ ಕೋರ್ಸ್ ತರಬೇತಿ ನೀಡಲಾಗುವುದು ಉತ್ತಮ ತರಬೇತಿ ಪಡೆದು ಕೊಂಡವರಿಗೆ ನಮ್ಮಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುತ್ತೇವೆ.
8722718380
8872998597

House For Sale
40x63 GF
Furnished
All teak and Granite
Harividyalaya School Road, Bogadi-Mysuru
9482883566

ಮನೆ ಮಾರಾಟಕ್ಕಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ 40x60
ಪೊಲೀಸ್ ಲೇಔಟ್ 30x40
9901772178

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೋಳು ತಲೆಯ ಸಮಸ್ಯೆಯೇ?


ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಅಶೋಕ ರಸ್ತೆ, ಗಾಂಧಿ ಚೌಕದ ಬಳಿಯಿರುವ ಹಾರ್ಡ್‌ವೇರ್ ಅಂಗಡಿಗೆ 20 ರಿಂದ 35 ವರ್ಷದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಕೆಲಸದ ಸಮಯ: ಬೆಳಗ್ಗೆ 9.30 ರಿಂದ ರಾತ್ರಿ 8.00 ರವರೆಗೆ. ಭಾನುವಾರ ರಜೆ.
ಉತ್ತಮ ಸಂಬಳ
ಸಂಪರ್ಕಿಸಿ: 99015 18513

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಕಂಪೆನಿ ಕೆಲಸಕ್ಕೆ ವಿವಿಧ ಹುದ್ದೆಗಳಿಗೆ ಯುವಕ ಯುವತಿಯರು.
ಊಟ ವಸತಿ ಉಚಿತ.
ಸಂಬಳ:10000–15000/;
7899913040
ಮಂಗಳೂರು

ಮನೆ ಮಾರಾಟಕ್ಕಿದೆ
ಹೊಸದಾಗಿ ನಿರ್ಮಿಸಿರುವ 30x40 ಅಳತೆಯ 2 ಅಂತಸ್ತಿನ ಮನೆ ಭೋಗಾದಿಯಲ್ಲಿ ಮಾರಾಟಕ್ಕಿದೆ.
ಮುಡಾ ಅನುಮೋದಿತ ಬಡಾವಣೆ ಮೈಸೂರು ತಾಲ್ಲೂಕು, ಅಯರಹಳ್ಳಿ ಗ್ರಾಮದಲ್ಲಿ 2 ಎಕರೆ 20 ಗುಂಟೆ ತೋಟ ಮಾರಾಟಕ್ಕಿದೆ
63616-97576

SITE FOR SALE
4357 Sqft site for sale at Emerald enclave
40x62 West facing site for sale at old RT nagar
30x40 West facing site for sale at Vijaynagar 4th stage
Contact; Mysore Estates Vishwanath Gowda
9590911111

CHANGE OF NAME
I, Krishnaveni.V, W/o. Kumaraswamy. R, D/o. Venkatswamy, aged 35 years residing at D.No.3494, Ward No.50, Veeranagere, Javaratti Beedi, Lashkar Mohalla, Mysore-570001 do hereby solemnly affirm on oath that I have changed my name from Kavya to Krishnaveni.V for all my future correspondences vide affidavit sworn in Notary Syed Ameer dated 13.02.2025.
Sd/- Krishnaveni.V

ಸಂಪು ಮತ್ತು ಟ್ಯಾಂಕ್ ಸೋಲಾರ್ ಕ್ಲೀನಿಂಗ್
Mob: 8618373596

ಡ್ರೈವರ್ ಬೇಕಾಗಿದ್ದಾರೆ
ಕನಿಷ್ಠ 5 ವರ್ಷ ಚಾಲನಾ ಅನುಭವವುಳ್ಳ ನುರಿತ ಡ್ರೈವರ್ ಬೇಕಾಗಿದ್ದಾರೆ (ಫಾರ್ಚುನರ್) ಈ ಕೆಳಗಿನ ವಿಳಾಸಕ್ಕೆ ಈ ದಿನವೇ ಖುದ್ದಾಗಿ ಸಂದರ್ಶನಕ್ಕೆ ಹಾಜರಾಗುವುದು. 922, 1ನೇ ಮೇನ್, ಕಾಂತರಾಜ ಅರಸ್ ರಸ್ತೆ, ಲಕ್ಷ್ಮೀಪುರಂ ಮೇನ್ ರೋಡ್, ಅರ್ಜುನ್ ಮೋಟಾರ್ಸ್ ಎದುರು, ಮೈಸೂರು
ಸಂಪರ್ಕಿಸಿ: 96064 80154

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

20x30 ಮನೆ ಮಾರಾಟಕ್ಕಿದೆ
3 BHK - ಡೂಪ್ಲೆಕ್ಸ್ (E/F) ದಟ್ಟಗಳ್ಳಿ 3ನೇ ಹಂತ.
78 ಲಕ್ಷ.
(ಕನಕದಾಸನಗರ).
9341050560, 9448425692

Adjacent Sites for sale - 2Nos.
ಮೈಸೂರು ತಾ॥ ಜಯಪುರ ಹೋಬಳಿ ಡಿ.ಸಾಲುಂಡಿ (ಕೆಲ್ಲಹಳ್ಳಿ ಗ್ರಾಮ) ಎಚ್.ಡಿ.ಕೋಟೆ ರೋಡ್ ಕಶ್ಯಲನಗರ, ಬಡಾವಣೆ/ರಾಜೀವ್ ಟೌನ್ ಶಿಪ್ ಪಕ್ಕದಲ್ಲಿ
ಅಳತೆ 30x50
9481089339

ಬಾಡಿಗೆಗೆ ಮನೆ ಖಾಲಿ ಇದೆ
ದಿವಾನ್ಸ್ ರಸ್ತೆ, Near Raghavendra ದೇವಸ್ಥಾನ Hayagriva College, Mysore
Room Boys, Batchelers Room ಖಾಲಿ ಇದೆ
Ist Floor, Rent 3500/-
Advance 25000/-
9448546024

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ Rs. 7,900 (24 CT)
Mob: 9108146123

SITES FOR SALE
KESHAVA MURTHY LAYOUT
MUDA APPROVED
Gururu, Dadadahalli Main Road, Near Vimana nagar (Govt.Employees layout), JP NAGAR Ring road just 2 km
8453531221

SBIT TRAVELS
Group Tour
NEPAL 6 DAYS
17-24 Feb | 4, 11, 17, 25 Mar | 02, 7, 21, 28 Apr | 05,12,19,26 May
Air tickets | Entry tickets | Meals Hotel | All tours and transfers
9343524127
(Saraswathipuram, Mysuru)

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR RENT
2 BHK ground floor with solar, near Annapoorna Eye Hospital, Sharadadevinagar.
Mob: 9845322723

TO-LET
HOUSE FOR RENT
2 BHK - 1ST FLOOR
KUVEMPUNAGAR
9886461125

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, SSLC, PUC, Diploma, Any Degree, Pass or Fail, ಸಂಬಳ: 15000 & 30000ವರೆಗೆ
ವಿ.ಸೂ: ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ, Android Mobile ಹಾಗೂ Two Wheeler ಇರಬೇಕು
ಭರತ್
9880151303



SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ, Security Field Officer ಬೇಕಾಗಿದ್ದಾರೆ ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ಮೇಟಗಳ್ಳಿ, ಬೆಳವಾಡಿ, ಜೆ.ಪಿ. ನಗರ, ಚಿಕ್ಕಳ್ಳಿ, ವರುಣ ಮೈಸೂರಿನ ಸುತ್ತಮುತ್ತ. ವಿದ್ಯಾರ್ಹತೆ: SSLC pass or fail.
9945965845, 9538886328

ಹೋಟೆಲ್‌ವೊಂದಕ್ಕೆ ಸಪ್ಲೇಯರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
9986669892, 6362610799

WANTED
Teaching staff for reputed institution (Experience preferred) for all subjects.
Transport facilities available.
Drop your resume through Whatsapp.
8971577685, 9980631121

ಬೇಕಾಗಿದ್ದಾರೆ
1) ಹೋಟೆಲ್‌ಗೆ ಮೇಂಟೇನೆನ್ಸ್ ಇಂಜಿನಿಯರ್ : 1 ಹುದ್ದೆ. (ಎಲೆಕ್ಟ್ರಿಕಲ್ ಮತ್ತು ಪ್ಲಂಬಿಂಗ್ ಕೆಲಸ ಗೊತ್ತಿರಬೇಕು).
ಉತ್ತಮವಾದ ವೇತನ.
ದಿ ಕೋರಮ್ ಹೋಟೆಲ್
2257/1, ಬಿ–1, ವಿನೋಬಾ ರಸ್ತೆ, ಮೈಸೂರು–5
9620274629, 9164846305

JOB OFFER JOB OFFER
ನಾವು 150 ಕ್ಕೂ ಹೆಚ್ಚಿನ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ ಮೊದಲು ಬಂದವರಿಗೆ ಆದ್ಯತೆ ಕೂಡಲೇ ಸಂಪರ್ಕಿಸಿ:
We hire 150 Plus Sales Executives all Over Mysore
My road Safety QR Code Install to all types of Vehicle
9880217548

BHAVNAVI HOSPITAL
WANTED
Accountant (Tally)
Receptionist
House Keeping Day/ Night
Electrician Security
Contact:
9972982665

ಮಹಿಳಾ ಟೈಲರ್
ಹೊಲಿಗೆ ಬಲ್ಲ ಮಹಿಳೆ ಬೇಕಾಗಿದ್ದಾರೆ.
ಕುವೆಂಪುನಗರ.
9148754864, 7337896965

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಮನೆಗೆ ಲೇಡಿ ಕಿಚನ್ ಹೆಲ್ಪರ್ ಹಾಗೂ ಕ್ಲೀನರ್ ಬೇಕಾಗಿದ್ದಾರೆ.
Mob: 9632376176

Sai Nalanda Central School, K.R. Nagar
WANTED TEACHERS
1) Social Studies and English (B.A / M.A., B.Ed.). (2) HIndi and Sanskrit 3) Computer (BCA / MCA). (4) PET / Yoga. (5) Admission Counsellor (Master's) (6) Accountant (3 years experience in Tally). *Good English fluency preferred.* Free accommodation.
8722073456, 8722093456
nalandakrn@gmail.com, Web: www.sainalanda.com

ಸೈಟುಗಳು ಮಾರಾಟಕ್ಕಿದೆ
ಐಪಿಎಸ್ ಶ್ರೀನಿವಾಸ್ ಲೇಔಟ್ & ನಂಜನಗೂಡು ರೋಡ್
ಭೀಮ ಅಶ್ವಿನಿ & ಇಲವಾಲ & ವರುಣ, ಟಿ.ನರಸೀಪುರ ರೋಡ್.
Mob: 7899272101

ಬೇಕಾಗಿದ್ದಾರೆ
ಮಹಿಳಾ ಡ್ಯಾನ್ಸ್ ಮತ್ತು ಡ್ರಾಯಿಂಗ್ ಟೀಚರ್‌ಗಳು ಬೇಕಾಗಿದ್ದಾರೆ.
ಸ್ಥಳ: ಗೋಕುಲಂ.
Call: 9535232320

ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು 20, PUC ಕಲಿತಿರುವ/ವಯಸ್ಸು 26, SSLC ವಯಸ್ಸು 29, ಟೀಚರ್/ವಯಸ್ಸು 34, SSLC ವಯಸ್ಸು 39, PUC ವಯಸ್ಸು 42, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ.
ವಿವಾಹ ವೇದಿಕೆ
8792731562

ಬೇಕಾಗಿದ್ದಾರೆ
ಮೊಗರಳ್ಳಿ (ಮಂಡಿ) ಮೈಸೂರಿನಲ್ಲಿ ಕಂಪ್ಯೂಟರ್‌ನಲ್ಲಿ (XL) ಬಿಲ್ಲಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಬಳ: 6 ರಿಂದ 8 ಸಾವಿರ
ಸಮಯ: 10.30 AM ರಿಂದ 4 PM ವರೆಗೆ
9845345714
9916842472

ಮಾರಾಟಕ್ಕಿದೆ
20x30 MUDA
ಲಾಲ್‌ಬಹದ್ದೂರ್ ಶಾಸ್ತ್ರಿ ನಗರದಲ್ಲಿ Semi furnished, 2 floor, 2 BHK, independent house.
Mob: 9901453272

ಕಾರು ಬಾಡಿಗೆಗೆ ಬೇಕಾಗಿದೆ
(Non-AC ಕಾರು ಹಳದಿ ಬೋರ್ಡ್), ತಿಂಗಳ ಬಾಡಿಗೆಗೆ, ಜಿಲ್ಲಾ ಕಛೇರಿಗಳ ಕೆಲಸಕ್ಕೆ, ಮಾಸಿಕ ಬಾಡಿಗೆ ಆಧಾರ, ತಿಂಗಳಿಗೆ 2500/– ಕಿ.ಮೀ. ಸಂಪರ್ಕಿಸಿ:
Mob: 9972837203

AFFIDAVIT
I, Shilpa, W/o Nagaraj aged 34 years, residing at #394, 2nd main, 5th cross, Bogadi 2nd Stage, Mysuru-570026, My previous name was Devamma S, after my marriage with Mr. Nagaraj has changed my name as Shilpa. In all my documents my name is mentioned as Shilpa but in my academic records my name is mentioned as Devamma S. I hereby declare that both names i.e., Shilpa and Devamma S are one and the same, they refer to my name only and I have sworn before the Notary Saraswathi.
Sd/- Shilpa

7 ದಿನಗಳ ಭೂತಾನ್ ಪ್ರವಾಸ
ಥಿಂಪು ಪಾರುಪುನಕ. 21–3–2025.
14 ದಿನಗಳ ಚಾರ್‌ಧಾಮ್ ಯಾತ್ರ 2–5–2025, 9 ದಿನಗಳ ನೇಪಾಳ, ಮುಕ್ತಿನಾಥ, ಪಶುಪತಿನಾಥ ಪ್ರವಾಸ 10–4–2025.
ಸುವರ್ಣ ಯಾತ್ರ
8660233673, 9019462508

S.B. BOOKS
Vishweshwara Nagar, Mysuru-08
9535584111, 0821-4280927
WANTED IMMEDIATELY
1) Godown Helpers : 2 posts
Qualification: SSLC, PUC, M/F
2) Driver with helper: 1 Post

'R' ರಿಯಲ್ ಎಸ್ಟೇಟ್
ಸೈಟ್‌ಗಳು ಮಾರಾಟಕ್ಕಿದೆ
9538412881

SHOP FOR SALE
10X15 at No. 1/6, CPC Building
Behind Prabha Talkies
Ghandisquare, Mysore
9342987384

Document Lost
I, Roohi Afza, House No. 1095, EWS OYHS, Devanur 2nd Stage, Mysore, have lost possession certificate. Finders please contact:
Mob: 6363143967

Document Lost
K. Uday Kumar, I lost my property document of Hanchya Village , Kasaba Hobli, Mysore Taluk on 10-3-2025. (khatha pathra document), Document No. / identification: 76.
Finders please contact:
Mob: 9449943535

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಲೇಸರ್ ಕಟ್ಟಿಂಗ್ ಮೆಷಿನ್ & ಸಿಎನ್‌ಸಿ ಮೆಷಿನ್ ಆಪ್‌ರೇಟರ್ ಬೇಕಾಗಿದ್ದಾರೆ
ಆಕರ್ಷಕ ಸಂಬಳ
ಅಶೋಕ ರೋಡ್, ಮೈಸೂರು
Call: 95382 22384
0821-4267800

ತಕ್ಷಣ ಬೇಕಾಗಿದ್ದಾರೆ
ನಮ್ಮ ಹೆಲ್ತ್‌ಕೇರ್ ಸಂಸ್ಥೆಗೆ ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ 15000–26000
ಮೊದಲು ಬಂದವರಿಗೆ ಆದ್ಯತೆ
(ಸರ್ಕಾರಿ ನೋಂದಾಯಿತ ಸಂಸ್ಥೆ) ಮೈಸೂರು
9513203333
9071422555

ಸೈಟು ಮಾರಾಟಕ್ಕಿದೆ
ಸನ್ ಸಿಟಿ ಹೋಮ್ಸ್ ಬಡಾವಣೆಯಲ್ಲಿ ಇಲವಾಲ ಹೋಬಳಿ, ಅಳತೆ: 30x40 ದಿಕ್ಕು–ಉತ್ತರ.
ಬೆಲೆ Sqfeet 1,550/-
ಸಂಪರ್ಕಿಸಿ:
9113991509
8123776343

SITE FOR SALE
30x40 West face KBL Gardenia, next to Vijayanagar 4th Stage
Price: 5250/- sq.ft.
(Slightly Negotiable) MUDA khata, fully developed layout, next to SVEI and Rastrothana School, very close to NPS.
Mob: 9972399939

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು, ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ನಜರ್‌ಬಾದ್ ಮತ್ತು ಅಗ್ರಹಾರ, ಮೈಸೂರು. ಸಮಯ: ಬೆಳಿಗ್ಗೆ 9.30 ರಿಂದ ರಾತ್ರಿ 8.30 / 9.00 ವರೆಗೆ.
ಸಂಬಳ: 10,000 ದಿಂದ ಪ್ರಾರಂಭ.
ಸಂಪರ್ಕಿಸಿ:
9986311444, 9986322444

ಜಮೀನು ಖರೀದಿಗೆ ಬೇಕಾಗಿದೆ
10 ಗುಂಟೆ ಫಾರ್ಮ್ ಹೌಸ್ / ಒಣ ಭೂಮಿ, ಡಾಂಬರು ರಸ್ತೆಗೆ ಹೊಂದಿಕೊಂಡಂತೆ ಇರಬೇಕು.
7204149535

ಹೆಸರು ಬದಲಾವಣೆ
ನಂಜನಗೂಡಿನ ಮನೆ ನಂ. 3220, ಸಾಯಿಕೃಪ, 18ನೇ ಕ್ರಾಸ್, ಶ್ರೀಕಂಠ ಮಂಟಪ ಬ್ಲಾಕ್‌ನಲ್ಲಿ ವಾಸವಾಗಿರುವ ನಾನು ಅಂದರೆ ವಂಶಿಕಾ ಜೈನ್, ನನ್ನ ಹೆಸರನ್ನು ನನ್ನ ಸ್ವಇಚ್ಛೆಯಿಂದ ವಂಶಿಕಾ ಇಂದು, ವಂಶಿಕಾ ಜೈನ್ ಎಂಬುದಾಗಿ ಸುರೇಶ್ ನೋಟರಿ, ನಂಜನಗೂಡು ಇವರ ಮುಂದೆ ಪ್ರಮಾಣೀಕರಿಸಿರುತ್ತೇನೆ. ಪ್ರಮಾಣ ಪತ್ರ ತಾರೀಖು 11–3–2025 ಆಗಿರುತ್ತದೆ.
ಸಹಿ/– ವಂಶಿಕಾ ಜೈನ್

ಹೆಸರು ಬದಲಾವಣೆ
ನಂಜನಗೂಡಿನ ಮನೆ ನಂ. 3220, ಸಾಯಿಕೃಪ, 18ನೇ ಕ್ರಾಸ್, ಶ್ರೀಕಂಠಮಂಟಪ ಬ್ಲಾಕ್‌ನಲ್ಲಿ ವಾಸವಾಗಿರುವ ನಾನು ಅಂದರೆ ಜತಿನ್ ಜೈನ್, ನನ್ನ ಹೆಸರನ್ನು ನನ್ನ ಸ್ವಇಚ್ಛೆಯಿಂದ ಜತಿನ್ ನಿಂದ ಜತಿನ್ ಜೈನ್ ಎಂಬುದಾಗಿ, ಸುರೇಶ್, ನೋಟರಿ, ನಂಜನಗೂಡು ಇವರ ಮುಂದೆ ಪ್ರಮಾಣೀಕರಿಸಿರುತ್ತೇನೆ. ಪ್ರಮಾಣ ಪತ್ರ ತಾರೀಖು: 11–3–2025.
ಸಹಿ/– ಜತಿನ್ ಜೈನ್

WANTED
Leading Electrical Contract Firm Requires:
Elec. Supervisor Electrician
Welders, Helpers
Attr. Salary+ESI+PF Provided
7259016509
7259016514

House for Rent/Lease
2BHK House, Fully Furnished with car parking Space in Belvadi
TSK Layout, Mysore
For More Details Contact
9743437726
7353240063

ಬೇಕಾಗಿದ್ದಾರೆ
ಡ್ರೈವರ್
9449863015

ತಕ್ಷಣ ಬೇಕಾಗಿದ್ದಾರೆ
ಬನ್ನೂರು ರೋಡ್‌ನ ಮೆಲ್ಲಹಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 13000/-
ESI,PF ಊಟದ ಸೌಲಭ್ಯವಿರುತ್ತದೆ.
9620667819
9620777819

ಒಕ್ಕಲಿಗರ ಲವ್ಲಿ ಮ್ಯಾಟ್ರಿಮೋನಿಯಲ್ ಸರ್ವಿಸಸ್
ಕುವೆಂಪುನಗರ, ಮೈಸೂರು
ಮಾರ್ಚ್ 16 ಭಾನುವಾರದಂದು ಸಮಯ 10 ಗಂಟೆಗೆ ವಧು–ವರರ ಮುಖಾಮುಖಿ ಸಮಾವೇಶವನ್ನು ಲೇಖಿನ ಪಾರ್ಟಿ ಹಾಲ್‌ನಲ್ಲಿ ಏರ್ಪಡಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
0821-4264402
9591163666

FOR RENT
1000 ಚ. ಅಡಿಯ ಮೊದಲನೇ ಅಂತಸ್ತು (First Floor)ನ್ನು ಬಾಡಿಗೆಗೆ ಇರುತ್ತದೆ
(For Office use Tuttion)
ರಾಮಕೃಷ್ಣನಗರ ಮುಖ್ಯರಸ್ತೆ
9844775166

SK CONSTRUCTION
ನಿಮ್ಮ ಕನಸಿನ ಮನೆಗೆ Plan Working Plan, 3D ಎಲಿವೇಶನ್ Approval Plan ಇಂಟೀರಿಯರ್ ಪ್ಲಾನ್ ಮತ್ತು ಅತಿ ಉತ್ತಮ ಗುಣಮಟ್ಟದಲ್ಲಿ Construction ಸಹಿತ ಮಾಡಿಕೊಡುತ್ತೇವೆ.
9620528490

ಬೇಕಾಗಿದ್ದಾರೆ
ಅಡುಗೆಯವರು, ಮಹಿಳೆಯರು ಮಾತ್ರ
ಸರಸ್ವತಿಪುರಂ, ಕಾಮಾಕ್ಷಿ ಆಸ್ಪತ್ರೆ ಹತ್ತಿರದ ಮನೆಗೆ
7411216781

WANTED
Office Assistant, Office Associate & House Keeping, Only Male Candidates
Age: 22 to 30, ISKCON TEMPLE, Jayanagar
8147701807
9108031102

ಬೇಕಾಗಿದ್ದಾರೆ
ಮೈಸೂರಿನ ಸುತ್ತ ಮುತ್ತ ಹೆಸರಾಂತ ಹೋಟೆಲ್ ಒಂದರಲ್ಲಿ ಕೆಲಸ ಮಾಡಲು ಓದು ಬರಹ ತಿಳಿದಿರುವ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ ಗಳು ಬೇಕಾಗಿದ್ದಾರೆ. ಮತ್ತು ಹೌಸ್ ಕೀಪಿಂಗ್ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ. ಸಂಪರ್ಕಿಸಿ:
9035050654
9113654639

ತಕ್ಷಣ ಬೇಕಾಗಿದ್ದಾರೆ
ಅನುಭವಸ್ಥ ಅಕೌಂಟ್ಸ್, ಕಂಪ್ಯೂಟರ್ ಬಗ್ಗೆ ತಿಳಿದ ಮಹಿಳಾ ಬಿಕಾಂ ಪದವೀಧರರು ಕೂಡಲೇ ದಾಖಲೆಗಳನ್ನು ಕಳುಹಿಸಿರಿ
E-mail: globalagribiotech2014@gmail.com

ಹೋಟೆಲ್ ಮಾರಾಟಕ್ಕಿದೆ
ನ್ಯೂ ಸವಿಪ್ರಿಯ ಫ್ಯಾಮಿಲಿ ರಸ್ಟೋರೆಂಟ್ ಸಬರ್ಬ್‌ನ್ ಬಸ್ ಸ್ಟ್ಯಾಂಡ್ ಎದುರು ಮಹಾರಾಜ ಕಾಂಪ್ಲೆಕ್ಸ್, ಮೈಸೂರು
9880268295
9535659992

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಕಲ ಸಿದ್ಧತೆ

71 ಶಾಲೆಗಳ 3014 ಮಂದಿ ಪರೀಕ್ಷೆಗೆ ಹಾಜರು: ಬಿಇಓ ಆರ್.ಕೃಷ್ಣಪ್ಪ



ಬಿಇಓ ಆರ್.ಕೃಷ್ಣಪ್ಪ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದರು.

ವೇಳಾಪಟ್ಟಿ, ಪರೀಕ್ಷಾ ಕೇಂದ್ರಗಳು

ಕೆ.ಆರ್.ನಗರ: ಪ್ರಸಕ್ತ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.21ರಿಂದ ಆರಂಭವಾಗಲಿದ್ದು, ನಿತ್ಯ ಬೆಳಗ್ಗೆ 10ರಿಂದ 1.15 ರವರೆಗೆ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಸಮಯಾವಕಾಶ ನಿಗದಿಪಡಿಸಲಾಗಿದೆ.

ಮಾ.21 ರಂದು ಪ್ರಥಮ ಭಾಷೆ ಕನ್ನಡ, ಮಾ.24 ರಂದು ಗಣಿತ, ಮಾ.26ರಂದು ದ್ವಿತೀಯ ಭಾಷೆ ಇಂಗ್ಲಿಷ್, ಮಾ.29 ರಂದು ಸಮಾಜ ವಿಜ್ಞಾನ, ಏ.2 ರಂದು ವಿಜ್ಞಾನ ಮತ್ತು ಏ.4 ರಂದು ತೃತೀಯ ಭಾಷೆ ಹಿಂದಿ ಪರೀಕ್ಷೆಗಳು ನಡೆಯಲಿವೆ.

ಸಾಲಿಗ್ರಾಮ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಿರ್ಲೆ ಸರ್ಕಾರಿ ಪದವಿ ಪೂರ್ವ ಕಾಲೇಜು, ಗಂಧನಹಳ್ಳಿ ಪದವಿ ಪೂರ್ವ ಕಾಲೇಜು, ಭೇರ್ಯ ಸರ್ಕಾರಿ ಪದವಿ ಪೂರ್ವ ಕಾಲೇಜು, ಚುಂಚನಕಟ್ಟೆ ಆದಿಚುಂಚನಗಿರಿ ಬಾಲಜಗತ್, ಹನಸೋಗೆ ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಬ್ಬಾಳು ಕರ್ನಾಟಕ ಪಬ್ಲಿಕ್ ಶಾಲೆ, ಹಂಪಾಪುರ ಸರ್ಕಾರಿ ಪ್ರೌಢಶಾಲೆ, ಕೆ.ಆರ್.ನಗರ ಸಂತ ಜೋಸೆಫರ ಪ್ರೌಢಶಾಲೆ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ ತಿಳಿಸಿದ್ದಾರೆ.

ಕೆ.ಆರ್.ನಗರ, ಮಾ.12– ಇದೇ ಮಾ.21ರಿಂದ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ವಹಿಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಪರೀಕ್ಷಾ ಪೂರ್ವ ಸಿದ್ಧತೆ ಸಂಬಂಧ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿ ಸಲಹೆ ಸೂಚನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2024–25ನೇ ಸಾಲಿನಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳ 71 ಪ್ರೌಢಶಾಲೆಗಳ ಪೈಕಿ 35 ಸರ್ಕಾರಿ, 13 ಅನುದಾನಿತ, 18 ಅನುದಾನ ರಹಿತ ಹಾಗೂ 6 ವಸತಿ ಶಾಲೆಗಳ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ ಎಂದರು.

ಎರಡೂ ತಾಲೂಕುಗಳಿಂದ ಒಟ್ಟು 2924 ಸಾವಿರ ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಜೊತೆಗೆ 90 ಮಂದಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ 3014 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, 1430 ವಿದ್ಯಾರ್ಥಿಗಳು ಮತ್ತು 1994 ವಿದ್ಯಾರ್ಥಿನಿಯರು ಪರೀಕ್ಷೆ ಬರೆಯಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ವ್ಯಾಪ್ತಿಯಲ್ಲಿ 11 ಪರೀಕ್ಷಾ ಕೇಂದ್ರಗಳಿದ್ದು, ಸಿಸಿ ಟಿವಿ ಅಳವಡಿಕೆ ಮತ್ತು ವೆಬ್ ಕಾಸ್ಟಿಂಗ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಈಗಾಗಲೇ ರಾಜ್ಯ ಮಟ್ಟದ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಚಾಲನೆ ಮಾಡಿ ಪರಿಶೀಲಿಸಿ ಕಾರ್ಯ ನಿರ್ವಹಣೆ ಬಗ್ಗೆ ಧೃಢೀಕರಿಸಿಕೊಳ್ಳಲಾಗಿದೆ ಎಂದರು.

ಪರೀಕ್ಷೆಗಳು ಸುಸೂತ್ರವಾಗಿ ನಡೆಯಲು 11 ಮುಖ್ಯ ಅಧೀಕ್ಷಕರು, 11 ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆ ಅಭಿರಕ್ಷಕರ ಸ್ಥಾನಿಕ ಜಾಗೃತದಳ ಸಿಬ್ಬಂದಿ, ಅಗತ್ಯಕ್ಕೆ ತಕ್ಕಂತೆ ಕೊಠಡಿ ಮೇಲ್ವಿಚಾರಕರು ಹಾಗೂ ಮೊಬೈಲ್ ಸ್ವಾಧೀನಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಪ್ರಶ್ನೆ ಪತ್ರಿಕೆಗಳನ್ನು ಉಪಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಸಕಾಲದಲ್ಲಿ ಭದ್ರತೆಯಿಂದ ರವಾನಿಸಲು ಹಾಗೂ ಉತ್ತರ ಪತ್ರಿಕೆಗಳನ್ನು ಹಿಂಪಡೆಯಲು ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಹೇಳಿದರು.

ಕಳೆದ ಶೈಕ್ಷಣಿಕ ಸಾಲಿನಲ್ಲಿ 2 ತಾಲೂಕಿನಿಂದ ಜಿಲ್ಲೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದು, ಈ ಬಾರಿ ಮೊದಲ ಸ್ಥಾನಕ್ಕೇರಲು ಶಾಸಕ ಡಿ.ರವಿಶಂಕರ್ ಅವರ ಮಾರ್ಗದರ್ಶನದಲ್ಲಿ ವಿಶೇಷ ಗಮನ ಹರಿಸಿ ಮುಖ್ಯಶಿಕ್ಷಕರೊಡನೆ ಸಂವಾದ ಕಾರ್ಯಕ್ರಮ ಮಾಡಿ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿರುವಂತೆ 20 ಅಂಶಗಳ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ. ಇದರೊಂದಿಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಮುಖಾಮುಖಿ ಮಾತುಕತೆ ನಡೆಸಿ ಮನೆ ಮನೆಗೆ ಭೇಟಿ ನೀಡಿ ಅಗತ್ಯವಿರುವ ಎಲ್ಲಾ ಗಮನ ಹರಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಇಸಿಓ ಪೂರ್ಣಿಮಾ, ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ ಉಪ ಪ್ರಾಂಶುಪಾಲ ಮೋಹನ, ಶಿಕ್ಷಕರಾದ ಎಸ್.ಮಂಜುನಾಥ್, ಪಿ.ಕೆ.ಸಂದೀಪ್ ಮತ್ತು ವಿದ್ಯಾರ್ಥಿಗಳು ಇದ್ದರು.

ವರದಕ್ಷಿಣೆ ಕಿರುಕುಳ: ಗೃಹಿಣಿ ಬಲಿ, ಪತಿ ಬಂಧನ



ಹನಗೋಡು, ಮಾ.12– ಕುಡಿತದ ಚಟಕ್ಕೆ ದಾಸನಾಗಿದ್ದ ಪತಿಯ ಕಿರುಕುಳ, ಮತ್ತೊಂದೆಡೆ ಅತ್ತೆ–ಮಾವ, ಮೈದುನನ ವರದಕ್ಷಿಣೆ ದಾಹಕ್ಕೆ ಗೃಹಿಣಿಯೊಬ್ಬರು ಬಲಿಯಾಗಿರುವ ಘಟನೆ ತಾಲೂಕಿನ ಸಿಂಡೇನಹಳ್ಳಿಯಲ್ಲಿ ನಡೆದಿದೆ. ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ಸಿಂಡೇನ ಹಳ್ಳಿ ಗ್ರಾಮದ ಶ್ರೀನಿವಾಸ್ ಅವರ ಪತ್ನಿ ರೇಷ್ಮಾ(25) ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡವರು. ಈಕೆಗೆ ಇಬ್ಬರು ಮಕ್ಕಳಿದ್ದಾರೆ. ಆರೋಪಿ ಪತಿ ಶ್ರೀನಿವಾಸನನ್ನು ಬಂಧಿಸಲಾಗಿದೆ.

ವಿವರ: ಹನಗೋಡು ಸಮೀಪದ ಈರತಯ್ಯನಕೊಪ್ಪಲಿನ ಚಂದ್ರೇಗೌಡ–ಶಾಂತಮ್ಮ ದಂಪತಿ ಪುತ್ರಿ ರೇಷ್ಮಾಳನ್ನು ಶ್ರೀನಿವಾಸನಿಗೆ ಕಳೆದ 6 ವರ್ಷಗಳ ಹಿಂದೆ ವಿವಾಹ ಮಾಡಿಕೊಡಲಾಗಿತ್ತು. ಇತ್ತೀಚಿಗೆ ಗಂಡ–ಹೆಂಡತಿ ನಡುವೆ ವಿರಸ ಉಂಟಾಗಿ ಹಿರಿಯರು ಅನೇಕ ಬಾರಿ ನ್ಯಾಯ ಪಂಚಾಯ್ತಿ ಮಾಡಿ ತಿಳಿಹೇಳಿ ಕಳುಹಿಸಿದ್ದರು. ಆದರೂ ಆಗಾಗ್ಗೆ ವರದಕ್ಷಿಣೆ ತರುವಂತೆ ಪತಿ ಶ್ರೀನಿವಾಸ್ ಪೀಡಿಸುತ್ತಾ ಗಲಾಟೆ ಮಾಡುತ್ತಿದ್ದರಿಂದ ಬೇಸತ್ತ ಮಗಳು ಗಂಡನ ಮನೆಯಲ್ಲೇ ಮಾ.11ರಂದು ರಾತ್ರಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮಗಳ ಸಾವಿಗೆ ಪತಿ ಶ್ರೀನಿವಾಸ, ಈತನ ಸಹೋದರ ಶ್ರೀಧರ್, ತಂದೆ–ತಾಯಿ ಮಾದೇಗೌಡ–ಸರಸಮ್ಮನವರೇ ಕಾರಣವೆಂದು ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ರೇಷ್ಮಾಳ ತಾಯಿ ಶಾಂತಮ್ಮ ದೂರು ದಾಖಲಿಸಿದ್ದಾರೆ. ಇನ್ಸ್‌ಪೆಕ್ಟರ್ ಮುನಿಸ್ವಾಮಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಶ್ರೀನಿವಾಸನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ತಹಸೀಲ್ದಾರ್ ಎಂ.ಮಂಜುನಾಥ್ ಭೇಟಿ ನೀಡಿ ವಿಚಾರಣೆ ನಡೆಸಿದ ನಂತರ ಮೈಸೂರಿನ ಕೆಆರ್.ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಕುರುಬರ ಸಂಘದ ನೂತನ ಅಧ್ಯಕ್ಷರಿಗೆ ಅಭಿನಂದನೆ



ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಕುರುಬರ ಸಂಘದ ನೂತನ ಅಧ್ಯಕ್ಷ ಕೆ.ಎಸ್.ಮಾಲೇಗೌಡರನ್ನು ಜಿಪಂ ಮಾಜಿ ಸದಸ್ಯ ನರಸೀಪುರ ಪಿ.ರವಿ ಅಭಿನಂದಿಸಿದರು. ಈ ವೇಳೆ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ, ತಾಲೂಕು ಕುರುಬ ಸಮಾಜದ ಪ್ರಧಾನ ಕಾರ್ಯದರ್ಶಿ ಚಿಕ್ಕಣ್ಣ, ನಾಗೇಂದ್ರ, ಮಹದೇವ್, ಎಂ.ರವಿ, ನಾಗೇಂದ್ರ, ಭೈರೇಗೌಡ, ಮುದ್ದರಾಮೇಗೌಡ ಇತರರಿದ್ದರು.

ಸೌಜನ್ಯ ಪ್ರಕರಣ: ಉನ್ನತ ತನಿಖೆಗೆ ಆಗ್ರಹ

ಪ್ರಗತಿಪರ ಸಂಘಟನೆಗಳ ಖಂಡನಾ ನಿರ್ಣಯ ಸಭೆಯಲ್ಲಿ ಒತ್ತಾಯ



ಪ್ರಗತಿಪರ ಸಂಘಟನೆಗಳಿಂದ ಖಂಡನಾ ನಿರ್ಣಯ ಸಭೆ ನಡೆಸಲಾಯಿತು.

ನಂಜನಗೂಡು, ಮಾ.12– ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ ಸೌಜನ್ಯ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ನಗರದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳಿಂದ ಖಂಡನಾ ನಿರ್ಣಯ ಸಭೆ ನಡೆಸಲಾಯಿತು.

ನಗರದ ಬೈಪಾಸ್ ರಸ್ತೆಯಲ್ಲಿರುವ ಮಹದೇಶ್ವರ ಸಭಾಂಗಣದಲ್ಲಿ ದಲಿತ ಸಂಘರ್ಷ ಸಮಿತಿ, ರೈತ ಸಂಘಟನೆ, ಮಹಿಳಾ ಒಕ್ಕೂಟ, ಕನ್ನಡಪರ ಸಂಘಟನೆ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ, ಜನಸಂಗ್ರಾಮ ಪರಿಷತ್ ಸೇರಿದಂತೆ ತಾಲೂಕಿನ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಖಂಡನ ನಿರ್ಣಯ ಸಭೆ ನಡೆಸಿ ಸೌಜನ್ಯ ಪ್ರಕರಣವನ್ನು ಉನ್ನತ ತನಿಖೆಗೆ ಒಳಪಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ದಸಂಸ ಜಿಲ್ಲಾ ಸಂಚಾಲಕ ನಾರಾಯಣ ಮಾತನಾಡಿ, ಕೆಲವು ಪ್ರಭುತ್ವವಾದಿಗಳು ಧರ್ಮಸ್ಥಳ ಸುತ್ತಮುತ್ತ ಹಿಡಿತ ಸಾಧಿಸಿ ಧರ್ಮಸ್ಥಳದಾದ್ಯಂತ ಭೂಮಿ ಹೊಂದಿರುವವರ ಮೇಲೆ ಅತ್ಯಾಚಾರ ಮತ್ತು ಕೊಲೆ ನಡೆಸುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸುತ್ತಿದ್ದಾರೆ. ಸೌಜನ್ಯ ಪ್ರಕರಣ ಕೂಡ ಆಸ್ತಿ ಕಸಿದುಕೊಳ್ಳುವ ಹುನ್ನಾರದಿಂದ ನಡೆದ ಒಂದು ಘಟನೆಯಾಗಿದ್ದು, ಆರೋಪಿಗಳು ಪ್ರಕರಣ ಮುಚ್ಚಿ ಹಾಕುವಲ್ಲಿ ಮೇಲುಗೈ ಸಾಧಿಸಿದ್ದಾರೆ ಹಾಗೂ ಪ್ರಕರಣದ ಆರೋಪಿಯಾಗಿದ್ದ ಸಂತೋಷರಾವ್‌ನನ್ನು ನ್ಯಾಯಾಲಯ ನಿರಪರಾಧಿ ಎಂದು ತೀರ್ಪು ನೀಡಿ ಬಿಡುಗಡೆಗೊಳಿಸಿರುವುದರಿಂದ ಸರ್ಕಾರ ಈ ಪ್ರಕರಣವನ್ನು ಉನ್ನತ ತನಿಖೆಗೆ ಆದೇಶಿಸಬೇಕು. ವೀರೇಂದ್ರ ಹೆಗ್ಗಡೆಯವರ ಕುಟುಂಬದವರ ಮೇಲೆ ಆರೋಪ ಕೇಳಿ ಬಂದಿರುವುದರಿಂದ ಹೆಗಡೆಯವರು ರಾಜ್ಯಸಭಾ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಗೆ ಒಳಗಾಗಬೇಕು. ಸೌಜನ್ಯ ಪ್ರಕರಣದ ತನಿಖಾಧಿಕಾರಿಯನ್ನು ಸೇವೆಯಿಂದ ವಜಾಗೊಳಿಸಬೇಕು. ಅಲ್ಲದೇ ಧರ್ಮಸ್ಥಳದ ಆಸ್ತಿಯನ್ನು ಸಂಪೂರ್ಣ ತನಿಖೆಗೆ ಆಗ್ರಹಿಸಬೇಕು. ಪ್ರಮುಖವಾಗಿ ಪ್ರಕರಣದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಧ್ವನಿ ಎತ್ತಿರುವ ಸಮೀರ್ ಅವರಿಗೆ ಜೀವ ಬೆದರಿಕೆ ಇರುವುದರಿಂದ ಸರ್ಕಾರ ಗಂಭೀರವಾಗಿ ಪರಿಗಣಿಸಿ ಅವರಿಗೆ ಸೂಕ್ತ ರಕ್ಷಣೆ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ರೂಪಿಸಲಾಗುವುದು ಎಂದು ಎಚ್ಚರಿಸಿದರು. ಮಹಿಳಾ ಸಂಘಟನೆಯ ಸುನಂದಾ ಮಾತನಾಡಿದರು.

ಈ ವೇಳೆ ದಸಂಸ ಜಿಲ್ಲಾ ಸಂಚಾಲಕ ಮಲ್ಲೇಶ್, ಬಸವಣ್ಣ ಜನಸಂಗ್ರಾಮ ಪರಿಷತ್‌ನ ವಿಜಯಕುಮಾರ್, ಪ್ರತಿಧ್ವನಿ ವೇದಿಕೆ ಅಧ್ಯಕ್ಷ ತ್ರಿಣೇಶ್, ಸೋಮಶೇಖರ್, ಮಹದೇವಸ್ವಾಮಿ, ರೈತ ಮುಖಂಡ ನಂಜುಂಡಸ್ವಾಮಿ, ಶಿವಣ್ಣ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಕಾಲ್ನಡಿಗೆ ಜಾಥಾ, ಪ್ರತಿಭಟನೆ



ರಸ್ತೆ ದುರಸ್ತಿಗೆ ಆಗ್ರಹಿಸಿ ಕಾಲ್ನಡಿಗೆ ಜಾಥಾ, ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ, ಮಾ.12– ಪಟ್ಟಣದ ಗದ್ದಿಗೆ ವೃತ್ತದಿಂದ ಗಾಂಧಿನಗರ ಗ್ರಾಮಕ್ಕೆ ತೆರಳುವ ಮುಖ್ಯರಸ್ತೆ ದುರಸ್ತಿ ಮಾಡಿಸುವಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ ಎಂದು ಆರೋಪಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತಾಲೂಕು ಶಾಖೆ ವತಿಯಿಂದ ಗಾಂಧಿನಗರದಿಂದ ಪಟ್ಟಣದ ಗದ್ದಿಗೆ ವೃತ್ತದವರೆಗೆ ಕಾಲ್ನಡಿಗೆ ಜಾಥಾ ನಡೆಸಿ, ಪ್ರತಿಭಟನೆ ನಡೆಸಲಾಯಿತು.

ಗಾಂಧಿನಗರ ಗ್ರಾಮದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, 12 ಕಿಮೀ ಕಾಲ್ನಡಿಗೆ ಜಾಥಾ ನಡೆಸಿ ಗದ್ದಿಗೆ ವೃತ್ತದಲ್ಲಿ ಶಾಸಕ ಅನಿಲ್ ಮತ್ತು ಪಿಡಬ್ಲ್ಯೂಡಿ ಇಲಾಖೆ ಅಧಿಕಾರಿಗಳು ರಸ್ತೆ ದುರಸ್ತಿಗೊಳಿಸಲು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐ(ಎಂ) ಮುಖಂಡ ಶಿವಣ್ಣ ಮಾತನಾಡಿ, ರಸ್ತೆ ಹಾಳಾಗಿರುವುದರಿಂದ ವಾಹನ ಸವಾರರು ಈ ರಸ್ತೆಯಲ್ಲಿ ಓಡಾಡಲು ತೊಂದರೆ ಅನುಭವಿಸುವಂತಾಗಿದೆ ಪಟ್ಟಣದ ಗದ್ದಿಗೆ ಸರ್ಕಲ್‌ನಿಂದ ವಡ್ಡರಗುಡಿ, ಸವ್ವೆ ಮಾಳಕ್ಕೆ ಹೋಗುವ ತಿರುವಿನವರೆಗೂ ರಸ್ತೆ ತೀವ್ರ ಹದಗೆಟ್ಟಿದೆ. ಪಡುಕೋಟೆ ಕಾವಲ್ ಗ್ರಾಮ ಮಾರ್ಗವಾಗಿ ಗದ್ದಿಗೆಗೆ ಹೋಗುವಂತಹ ಪ್ರಯಾಣಿಕರು ಈ ರಸ್ತೆಯನ್ನೇ ಅವಲಂಬಿಸಿದ್ದು, ಗುಂಡಿಬಿದ್ದ ರಸ್ತೆಯಿಂದಾಗಿ ಜನ ನಿತ್ಯ ಬವಣೆ ಪಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು. ನಿತ್ಯ ನೂರಾರು ವಿದ್ಯಾರ್ಥಿಗಳು ಶಾಲಾ–ಕಾಲೇಜು ಗಳಿಗೆ, ರೋಗಿಗಳು ಆಸ್ಪತ್ರೆಗೆ ಇದೇ ರಸ್ತೆಯಲ್ಲಿ ಓಡಾಡಬೇಕು. ಸಾರಿಗೆ ಸಂಸ್ಥೆ ಬಸ್ಸುಗಳು ನಿಯಮಿತವಾಗಿದ್ದು, ಜನರು ಖಾಸಗಿ ವಾಹನಗಳನ್ನೇ ಅವಲಂಬಿಸಿದ್ದಾರೆ. ಆದರೆ ರಸ್ತೆಯ ಈ ದುಸ್ಥಿತಿಯಿಂದಾಗಿ ಖಾಸಗಿ ವಾಹನಗಳು ಈ ರಸ್ತೆಯಲ್ಲಿ ಬರಲು ಒಪ್ಪುತ್ತಿಲ್ಲ. ತುರ್ತು ಪರಿಸ್ಥಿತಿ ಸಂದರ್ಭದಲ್ಲಂತೂ ಜನರ ಕಷ್ಟ ಹೇಳತೀರದು. ಈ ರಸ್ತೆ ಹದಗೆಟ್ಟು ಹಲವು ವರ್ಷ ಕಳೆದರೂ ಜನಪ್ರತಿನಿಧಿಗಳು, ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸುತ್ತಿಲ್ಲ. ಜನಸಾಮಾನ್ಯರ ಬಗ್ಗೆ ಕಾಳಜಿ ಇಲ್ಲದಿರುವುದು ಈ ರಸ್ತೆ ನೋಡಿದರೆ ತಿಳಿಯುತ್ತದೆ ಎಂದು ದೂರಿದರು.

ಇಂದು ಸಾಂಕೇತಿಕವಾಗಿ ಕಾಲ್ನಡಿಗೆ ಜಾಥಾ ನಡೆಸಿ ಪ್ರತಿಭಟನೆ ನಡೆಸಿದ್ದೇವೆ. ಮುಂದಿನ ದಿನದಲ್ಲಿ ರಸ್ತೆ ಅಭಿವೃದ್ಧಿಗೊಳಿಸದಿದ್ದರೆ ತಾಲೂಕು ಕಚೇರಿ ಎದುರು ಉಗ್ರ ಪ್ರತಿಭಟನೆ ಹಮ್ಮಿಕೊಳ್ಳುತ್ತೇ ಎಂದು ಎಚ್ಚರಿಸಿದರು.

ಇದೇ ವೇಳೆ ಗ್ರೇಡ್–2 ತಹಸೀಲ್ದಾರ್ ಶ್ರೀಧರ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಕೈಬಿಟ್ಟರು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಶಾಖಾ ಕಾರ್ಯದರ್ಶಿ ದೇವರಾಜಮ್ಮ, ಫಾರೂಕ್ ಆಲಿ, ಪ್ರಶಾಂತ್, ಪ್ರಫುಲ್ಲನ್, ಬಾಬು, ಅಂಬುಜಾಕ್ಷ, ಗ್ರಾಯತ್ರಿ, ಶೇರ್ಲಿ, ಜನಾರ್ಧನ್, ರವಿ, ಮುನಿಸ್ವಾಮಿ, ಪಿ.ರವಿ, ಅಂಬಿಕ ಪ್ರಶೂಬ್ ಇತರರಿದ್ದರು.

ವಿದ್ಯಾರ್ಥಿಗಳು ಅಡಚಣೆಗಳನ್ನು ಮೆಟ್ಟಿ ನಿಲ್ಲಬೇಕು



ವಿದ್ಯಾರ್ಥಿನಿಯರಿಗೆ ಸಹಾಯಧನದ ಚೆಕ್ ವಿತರಿಸಲಾಯಿತು.

ನಂಜನಗೂಡು, ಮಾ.12– ಸಾಮಾಜಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳು ಆರ್ಥಿಕ ಅಡಚಣೆಗಳನ್ನು ಮೆಟ್ಟಿ ನಿಂತು ಗುರಿ ಮುಟ್ಟಬೇಕು ಎಂದು ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ತಿಳಿಸಿದರು.

ನಗರದ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಧ್ರುವನಾರಾಯಣ್ ಅವರ 2ನೇ ಪುಣ್ಯಸ್ಮರಣೆ ಅಂಗವಾಗಿ ವಿದ್ಯಾರ್ಥಿನಿಯರಿಗೆ ಸಹಾಯಧನದ ಚೆಕ್ ವಿತರಿಸಿ ಮಾತನಾಡಿದ ಅವರು, ಆರ್ಥಿಕವಾಗಿ ಹಿಂದುಳಿದ ಮಕ್ಕಳು ವಿದ್ಯೆಯಿಂದ ವಂಚಿತರಾಗಬಾರದು. ಶಾಲೆ ಶುಲ್ಕ ಭರಿಸಲು ಸಾಧ್ಯವಾಗದೇ ಮಕ್ಕಳು ಶಾಲೆ ತೊರೆಯಬಾರದು ಎಂಬ ಉದ್ದೇಶದಿಂದ ಶುಲ್ಕ ಭರಿಸಲಾಗುತ್ತಿದೆ ಎಂದರು.

ಈ ವೇಳೆ ಶಾಲೆ ಮುಖ್ಯೋಪಾಧ್ಯಾಯಿನಿ ಹಜೀರಾ ಬೇಗಂ, ಪ್ರಾಧ್ಯಾಪಕರಾದ ಗೌರಾಂಬಿಕ, ಕಾವ್ಯ, ಭೂಮಿಕ, ಜಯಶ್ರೀ, ಪ್ರಕಾಶ್ ಉಪಸ್ಥಿತರಿದ್ದರು.

ಪಿರಿಯಾಪಟ್ಟಣದಲ್ಲಿ ರೇಣುಕಾಚಾರ್ಯ ಜಯಂತಿ



ಪಿರಿಯಾಪಟ್ಟಣದಲ್ಲಿ ರೇಣುಕಾಚಾರ್ಯ ಜಯಂತಿ ನಡೆಯಿತು.

ಪಿರಿಯಾಪಟ್ಟಣ, ಮಾ.12– ಮಹನೀಯರ ಆದರ್ಶವನ್ನು ಕೇವಲ ಬಾಯಿ ಮಾತಲ್ಲಿ ಹೇಳದೆ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಬಹುದು ಎಂದು ಪತ್ರಕರ್ತ ಸತೀಶ್ ಆರಾಧ್ಯ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯಿಂದ ನಡೆದ ಜಗದ್ಗುರು ಶ್ರೀರೇಣುಕಾಚಾರ್ಯ ಜಯಂತಿಯಲ್ಲಿ ಮಾತನಾಡಿದ ಅವರು, ಮಾನವ ಧರ್ಮದ ಒಳಿತಿಗಾಗಿ ಶ್ರಮಿಸಿದ ಗುರು ಪರಂಪರೆಯಲ್ಲಿ ರೇಣುಕಾಚಾರ್ಯರು ಮೊದಲಿಗರು. ನಾವೆಲ್ಲ ನಮ್ಮಲ್ಲಿರುವ ಜಾತಿ ಭೇದ–ಭಾವ ಮರೆತು ಬುದ್ಧ, ಬಸವ, ಅಂಬೇಡ್ಕರ್ ಸೇರಿದಂತೆ ಮಹನೀಯರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಹಸೀಲ್ದಾರ್ ನಿಸರ್ಗಪ್ರಿಯ, ರೇಣುಕಾಚಾರ್ಯರ ಪರಂಪರೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಮನುಕುಲದ ಅಭಿವೃದ್ಧಿಗಾಗಿ ಶ್ರಮಿಸಿದ ಮಹಾನ್ ಗುರುಗಳು ಎಂದರು. ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಅಧ್ಯಕ್ಷ ಪರಮೇಶ್, ನಿವೃತ ಮುಖ್ಯಶಿಕ್ಷಕ ಎಂ.ಬಿ ಮಲ್ಲಾರಾಧ್ಯ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿದರು. ಈ ವೇಳೆ ತಾಪಂ ಇಓ ಡಿ.ಬಿ.ಸುನೀಲ್ ಕುಮಾರ್, ಪುರಸಭಾ ಸದಸ್ಯರಾದ ಮಂಜುನಾಥ್, ಶಿರಸ್ತೇದಾರ್‌ಗಳಾದ ಶಕೀಲಾ ಬಾನು, ವಿನೋದ್ ಕುಮಾರ್, ಸಣ್ಣಸ್ವಾಮಿ, ಎಪಿಎಂಸಿ ಸಹಾಯಕ ಕಾರ್ಯದರ್ಶಿ ಚೆಲುವರಾಯಿ, ಕಸಾಪ ಅಧ್ಯಕ್ಷ ನವೀನ್ ಕುಮಾರ್, ಉಪನ್ಯಾಸಕರಾದ ಮಹಮದ್ ಶಫಿವುಲ್ಲಾ ಇತರರಿದ್ದರು.

ಬಿಲಿಗೆರೆಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಚುನಾವಣೆ

ಎಂ.ಶೇಖರ್ ಅಧ್ಯಕ್ಷ, ಉಪಾಧ್ಯಕ್ಷರಾಗಿ ಚಿನ್ನಬುದ್ದಿ ಆಯ್ಕೆ

ಕಸಬಾ ಸಂಘದಿಂದ ಪ್ರತ್ಯೇಕಗೊಂಡ ಬಳಿಕ ನಡೆದ ಮೊದಲ ಚುನಾವಣೆ



ಬಿಲಿಗೆರೆಹುಂಡಿ ಪಿಎಸಿಎಸ್ ಅಧ್ಯಕ್ಷರಾಗಿ ಎಂ.ಶೇಖರ್, ಉಪಾಧ್ಯಕ್ಷರಾಗಿ ಪಿ.ಚಿನ್ನಬುದ್ದಿ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಮಾ.12– ತಿ.ನರಸೀಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಿಂದ ಪ್ರತ್ಯೇಕಗೊಂಡ ಬಳಿಕ ಇದೇ ಮೊದಲ ಬಾರಿಗೆ ನಡೆದ ಚುನಾವಣೆಯಲ್ಲಿ ಬಿಲಿಗೆರೆಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮನ್ನೇಹುಂಡಿ ಎಂ.ಶೇಖರ್ ಹಾಗೂ ಉಪಾಧ್ಯಕ್ಷರಾಗಿ ಪಿ.ಚಿನ್ನಬುದ್ದಿ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕಿರಗಸೂರು ಗ್ರಾಪಂ ವ್ಯಾಪ್ತಿಯ ಬಿಲಿಗೆರೆಹುಂಡಿ, ಡಣಾಯಕನಪುರ, ಕಿರಗಸೂರು, ಕೂಡ್ಲೂರು ಹಾಗೂ ಮನ್ನೇಹುಂಡಿ ಗ್ರಾಮಗಳು ವಿಲೀನಗೊಂಡಿದ್ದವು. ಗ್ರಾಮಗಳ ಷೇರುದಾರರು, ಮುಖಂಡರು ಬಿಲಿಗೆರೆಹುಂಡಿ ಗ್ರಾಮಕ್ಕೆ ಪ್ರತ್ಯೇಕ ಸಹಕಾರ ಸಂಘ ನೀಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ 6 ಗ್ರಾಮಗಳನ್ನು ಕಸಬಾ ಸಂಘದಿಂದ ಬಿಡುಗಡೆಗೊಳಿಸುವಂತೆ ಸಹಾಯಕ ನಿಬಂಧಕರು ಆದೇಶಿಸಿದ್ದ ಹಿನ್ನೆಲೆಯಲ್ಲಿ ಪ್ರತ್ಯೇಕ ಸಂಘ ರಚನೆಯಾಗಿ ಬುಧವಾರ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗಾಗಿ ಚುನಾವಣೆ ನಡೆಯಿತು.

ಬಿಲಿಗೆರೆಹುಂಡಿ ಗ್ರಾಮದ ಸಹಕಾರ ಸಂಘದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ಶೇಖರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಪಿ.ಚಿನ್ನಬುದ್ದಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸುಜಾತ ಪ್ರಕಟಿಸಿದರು. ಸಂಘದ ಕಾರ್ಯದರ್ಶಿ ಬಿ.ಸಿದ್ದರಾಜು ಪ್ರಮಾಣ ಪತ್ರ ವಿತರಿಸಿದರು. ಚುನಾವಣೆಯಲ್ಲಿ ನಿರ್ದೇಶಕರಾದ ಮನ್ನೇಹುಂಡಿ ಎಂ.ಎಸ್.ಮಹದೇವಸ್ವಾಮಿ, ಎಸ್.ಬಸವಣ್ಣ, ಎಂ.ವೆಂಕಟೇಶ್, ಎಸ್.ರಾಜೀವ್, ವಸಂತ ಚಿನ್ನಸ್ವಾಮಿ, ಗೌರಮ್ಮಣಿ ಮಹದೇವಸ್ವಾಮಿ, ಕೂಡ್ಲೂರು ಕೆ.ಎಂ.ದೇವರಾಜು, ಎನ್.ಅಶ್ವಿನ್ (ಅಚ್ಚು), ಹುಣಸೂರು ನಾಗರಾಜು ಹಾಗೂ ಮಹದೇವ ಹಾಜರಿದ್ದು, ಸಹಕಾರ ಸಂಘದ ವರಿಷ್ಠರ ಆಯ್ಕೆಗೆ ಸಮ್ಮತಿ ಸೂಚಿಸಿದರು.

ಈ ವೇಳೆ ಗ್ರಾಮದ ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಏಳುಮಲೆ ಮಂಜು, ತಾಪಂ ಮಾಜಿ ಸದಸ್ಯ ಎಂ.ರಮೇಶ್, ಹಿರಿಯ ಮುಖಂಡ ನಂಜುಂಡೇಗೌಡ, ತಾಲೂಕು ಕುರುಬರ ಸಂಘದ ನಿರ್ದೇಶಕ ಹೆಳವರಹುಂಡಿ ಅರುಣ್‌ಗೌಡ, ಗ್ರಾಪಂ ಸದಸ್ಯ ಕಿರಗಸೂರು ಮಹದೇವಸ್ವಾಮಿ, ಡಣಾಯಕನಪುರ ರಾಜಾಬುದ್ದಿ, ಮನ್ನೇಹುಂಡಿ ಎಸ್.ಸಿದ್ದರಾಜು, ಶಿವು, ಡಣಾಯಕನಪುರ ರಾಜಶೇಖರ್, ಮಹದೇವಸ್ವಾಮಿ, ಕುಮಾರ್, ಪಾಪನಾಯಕ, ಡಣಾಯಕನಪುರ ಡಿ.ಚಿನ್ನಸ್ವಾಮಿ ಹಾಜರಿದ್ದರು.

" ಕಸಬಾ ಸಹಕಾರ ಸಂಘದಿಂದ ನಮ್ಮ ವ್ಯಾಪ್ತಿಯ ಗ್ರಾಮಗಳು ಬಿಡುಗಡೆಯಾದ ಹಿನ್ನೆಲೆಯಲ್ಲಿ ಪ್ರತ್ಯೇಕ ಸಂಘ ರಚನೆಯಾಗಿ ಚುನಾವಣೆ ನಡೆದು ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮೊದಲಿಗೆ ನಮ್ಮ ಸಂಘ ಅಸ್ತಿತ್ವಕ್ಕೆ ಬರಲು ಸಹಕರಿಸಿದ ಸಹಾಯಕ ಸಂಘಗಳ ನಿಬಂಧಕರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮುಂಬರುವ ದಿನಗಳಲ್ಲಿ ಬಿಲಿಗೆರೆಹುಂಡಿ ಪಿಎಸಿಎಸ್ ಅಭಿವೃದ್ಧಿಗೆ ಯೋಜನೆ ಹಮ್ಮಿಕೊಳ್ಳುತ್ತೇನೆ. ಸಿಎಂ ಸಿದ್ದರಾಮಯ್ಯ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಅವರ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಘ ಇರುವ ಹಿನ್ನೆಲೆಯಲ್ಲಿ ಅವರಿಂದ ಹೆಚ್ಚಿನ ಅನುದಾನ ತಂದು ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಿಸುತ್ತೇನೆ. ರೈತರಿಗೆ ದೊರಕಬೇಕಾದ ಎಲ್ಲಾ ಸವಲತ್ತು, ಸಾಲ ಸೌಲಭ್ಯಗಳನ್ನು ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅಲ್ಲದೇ ಸಂಘವನ್ನು ಮಾದರಿ ಸಂಘವನ್ನಾಗಿ ಮಾಡಲು ನನಗೆ ಸಹಕಾರಿಗಳು ಹೆಚ್ಚಿನ ಸಹಕಾರ ನೀಡಬೇಕು.

-ಎಂ.ಶೇಖರ್, ನೂತನ ಅಧ್ಯಕ್ಷ.

'ಡೆವಿಲ್' ಶೂಟಿಂಗ್: ಮೈಸೂರು ಸರ್ಕಾರಿ ಭವನಕ್ಕೆ ಪ್ರವೇಶ ನಿರ್ಬಂಧ

- ಜೈಲಿನಿಂದ ಬಿಡುಗಡೆಯಾದ ನಂತರ ಮೊದಲ ಬಾರಿ ಬಣ್ಣ ಹಚ್ಚಿದ ದರ್ಶನ್
- ಮೈಸೂರಿನಲ್ಲಿ ನಾಲ್ಕು ದಿನ ಶೂಟಿಂಗ್
- ಚಿತ್ರೀಕರಣಕ್ಕೆ ಮುನ್ನ ಚಾಮುಂಡೇಶ್ವರಿಗೆ ವಿಶೇಷ ಪೂಜೆ
- ರಾಜಸ್ಥಾನ, ಹೈದರಾಬಾದ್‌ನಲ್ಲಿ ಕೂಡ ಚಿತ್ರೀಕರಣ



'ಡೆವಿಲ್' ಸಿನಿಮಾ ಚಿತ್ರೀಕರಣದಲ್ಲಿ ಪಾಲ್ಗೊಳ್ಳುವ ಮುನ್ನ ಚಾಲೆಂಜಿಂಗ್ ಸ್ಟಾರ್ ದರ್ಶನ್ ಚಾಮುಂಡಿ ಬೆಟ್ಟದಲ್ಲಿ ಬುಧವಾರ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು, ಮಾ.12(ಬಿಎಲ್‌ಯು)– ರೇಣುಕಾ ಸ್ವಾಮಿ ಹತ್ಯೆ ಆರೋಪಿಯಾಗಿರುವ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ 'ಡೆವಿಲ್' ಸಿನಿಮಾದ ಚಿತ್ರೀಕರಣ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದಿನಿಂದ ಪುನರಾರಂಭವಾಗಿದ್ದು, ಒಂಭತ್ತು ತಿಂಗಳ ನಂತರ ದರ್ಶನ್ ಮತ್ತೆ ಬಣ್ಣ ಹಚ್ಚಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಚಿತ್ರೀಕರಣ ನಡೆಯುತ್ತಿದ್ದು, ಸಾರ್ವಜನಿಕರು, ಅಭಿಮಾನಿಗಳು ಹಾಗೂ ಮಾಧ್ಯಮದವರಿಗೆ ಚಿತ್ರೀಕರಣ ಸ್ಥಳಕ್ಕೆ ನಿರ್ಬಂಧ ಹೇರಲಾಗಿದೆ. ಸರ್ಕಾರಿ ಅತಿಥಿ ಗೃಹದ ಮೂರು ಪ್ರವೇಶ ದ್ವಾರಗಳಿಗೆ ಬೀಗ ಜಡಿದು ಯಾರೂ ಪ್ರವೇಶಿಸದಂತೆ ಬೌನ್ಸರ್‌ಗಳು ಹಾಗೂ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ.

ದರ್ಶನ್ ಅಭಿನಯದ ಡೆವಿಲ್ ಸಿನಿಮಾದ ಚಿತ್ರೀಕರಣ ಮೈಸೂರಿನಲ್ಲೇ ನಡೆಯುತ್ತಿತ್ತು. ಈ ಮಧ್ಯೆ ರೇಣುಕಾಸ್ವಾಮಿ ಕೊಲೆ ಆರೋಪ ಹೊತ್ತ ದರ್ಶನ್‌ನನ್ನು ಜೂನ್ ತಿಂಗಳಲ್ಲಿ ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಪೊಲೀಸರು ಬಂಧಿಸಿದ್ದರು. ನಂತರ ದರ್ಶನ್ ಅವರನ್ನು 63 ದಿನಗಳ ಕಾಲ ಬೆಂಗಳೂರು ಹಾಗೂ ಬಳ್ಳಾರಿ ಜೈಲಿನಲ್ಲಿಡಲಾಗಿತ್ತು.

ಬೆನ್ನು ನೋವಿನಿಂದ ಬಳಲುತ್ತಿದ್ದ ದರ್ಶನ್‌ಗೆ ಚಿಕಿತ್ಸೆ ಪಡೆಯುವ ಉದ್ದೇಶದಿಂದ ಅಕ್ಟೋಬರ್ 30, 2024ರಂದು ಹೈಕೋರ್ಟ್ ಜಾಮೀನು ನೀಡಿತ್ತು. ಜೈಲಿನಿಂದ ಬಿಡುಗಡೆಯಾದ ದರ್ಶನ್, ಪತ್ನಿ ವಿಜಯ ಲಕ್ಷ್ಮಿ ಅವರ ಬೆಂಗಳೂರಿನ ಅಪಾರ್ಟ್‌ಮೆಂಟ್ ಹಾಗೂ ರಾಜರಾಜೇಶ್ವರಿ ನಗರದ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಅದೇ ಸಮಯದಲ್ಲಿ ಹುಟ್ಟೂರು ಮೈಸೂರಿಗೆ ಹೋಗಲು ಕೋರಿಕೊಂಡ ದರ್ಶನ್‌ಗೆ ನ್ಯಾಯಾಲಯ ಅವಕಾಶ ಮಾಡಿಕೊಟ್ಟಿತ್ತು.

ಮೈಸೂರಿನ ತಿ.ನರಸೀಪುರ ರಸ್ತೆಯ ಕೆಂಪಯ್ಯನ ಹುಂಡಿ ಬಳಿಯ ಫಾರ್ಮ್ ಹೌಸ್‌ನಲ್ಲಿ ದರ್ಶನ್ ವಿಶ್ರಾಂತಿ ಪಡೆಯುತ್ತಿದ್ದಾರೆ. ಪುತ್ರ ವಿನೀಶ್ ಹೆಸರಿನಲ್ಲಿ ಖರೀದಿ ಮಾಡಿರುವ ಈ ಫಾರಂ ಹೌಸ್‌ಗೆ ದರ್ಶನ್ 'ವಿನೀಶ್ ಕ್ಯಾಟವೇರಿ ಸ್ಟಡ್ ಫಾರ್ಮ್ ಹೌಸ್' ಎಂದು ಹೆಸರಿಟ್ಟಿದ್ದು, ಪ್ರಾಣಿ–ಪಕ್ಷಿಗಳ ನಡುವೆ ದರ್ಶನ್ ಕಾಲ ಕಳೆಯುತ್ತಿದ್ದಾರೆ.

ಬೆನ್ನು ನೋವು ಸೇರಿದಂತೆ ನಾನಾ ದೈಹಿಕ ಸಮಸ್ಯೆಗಳಿಂದ ಮುಕ್ತವಾಗಿರುವ ದರ್ಶನ್, ಈಗ ಅರ್ಧಕ್ಕೆ ನಿಲ್ಲಿಸಿದ್ದ ಡೆವಿಲ್ ಚಿತ್ರೀಕರಣದಲ್ಲಿ ಬಣ್ಣ ಹಚ್ಚಿದ್ದಾರೆ. ಇಂದು ಬೆಳಿಗ್ಗೆ ಚಾಮುಂಡಿಬೆಟ್ಟದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ದರ್ಶನ್ ಚಿತ್ರೀಕರಣ ನಡೆಯುತ್ತಿರುವ ಮೈಸೂರಿನ ಸರ್ಕಾರಿ ಅತಿಥಿ ಗೃಹಕ್ಕೆ ಇಂದು ಬೆಳಿಗ್ಗೆ ಆಗಮಿಸಿದರು.

ದರ್ಶನ್ ಸಿನಿಮಾ ಚಿತ್ರೀಕರಣ ನಡೆಯುತ್ತಿರುವ ಸರ್ಕಾರಿ ಅತಿಥಿ ಗೃಹಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಬೆಂಗಳೂರು–ನೀಲಗಿರಿ ರಸ್ತೆಯ ದ್ವಾರ, ಎಸ್ಪಿ ಕಚೇರಿ ಕಡೆಯಿಂದ ಪ್ರವೇಶ ಪಡೆಯುವ ದ್ವಾರ ಹಾಗೂ ತಾಲೂಕು ಕಚೇರಿ ಕಡೆಯಿಂದ ಪ್ರವೇಶ ಪಡೆಯುವ ದ್ವಾರವನ್ನು ಮುಚ್ಚಲಾಗಿದೆ. ಚಿತ್ರೀಕರಣ ಸ್ಥಳಕ್ಕೆ ಯಾರೂ ನುಸುಳದಂತೆ ಬೌನ್ಸರ್‌ಗಳನ್ನು ನಿಯೋಜನೆ ಮಾಡಲಾಗಿದೆ.

ಚಿತ್ರೀಕರಣಕ್ಕೆ ಡಿಸಿಪಿ ಮುತ್ತುರಾಜ್ ಅನುಮತಿ ನೀಡಿದ್ದಾರೆ. ಚಿತ್ರೀಕರಣದ ಭದ್ರತೆಗೆ 32 ಪೊಲೀಸರನ್ನು ನಿಯೋಜನೆ ಮಾಡಿದ್ದು, ಇದಕ್ಕಾಗಿ ಚಿತ್ರತಂಡ ಪೊಲೀಸ್ ಇಲಾಖೆಗೆ 1,64,785 ರೂಪಾಯಿ ಪಾವತಿ ಮಾಡಿದೆ.

ಶ್ರೀ ಜೈ ಮಾತಾ ಕಂಬೈನ್ಸ್ ಬ್ಯಾನರ್ ಅಡಿ ನಿರ್ಮಾಣವಾಗುತ್ತಿರುವ ಡೆವಿಲ್ ಸಿನಿಮಾಕ್ಕೆ ಪ್ರಕಾಶ್ ವೀರ್ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಈಗಾಗಲೇ ಮೊದಲ ಹಂತದ ಚಿತ್ರೀಕರಣ ಮುಗಿದಿದ್ದು, ಎರಡನೇ ಹಂತದ ಚಿತ್ರೀಕರಣಕ್ಕೆ ಇಂದು ಚಾಲನೆ ನೀಡಲಾಗಿದೆ.

ಸರ್ಕಾರಿ ಅತಿಥಿ ಗೃಹದಲ್ಲಿ ಇಂದಿನಿಂದ ಮಾರ್ಚ್ 15ರವರೆಗೆ ಚಿತ್ರೀಕರಣ ನಡೆಯಲಿದ್ದು, ಬೆಳಿಗ್ಗೆ 7ರಿಂದ ರಾತ್ರಿ 7 ಗಂಟೆ ತನಕ ನಿರಂತರವಾಗಿ ಶೂಟಿಂಗ್ ಮಾಡಲಾಗುತ್ತಿದೆ. ತರುವಾಯ ಒಂದು ದಿನ ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಕೂಡ ಶೂಟಿಂಗ್ ಮಾಡಲಾಗುತ್ತದೆ.

ಕರ್ನಾಟಕದಲ್ಲಿ ಚಿತ್ರೀಕರಣ ಮುಗಿಸಿದ ನಂತರ ಹೈದರಾಬಾದ್ ಹಾಗೂ ರಾಜಸ್ಥಾನದಲ್ಲಿ ಶೂಟಿಂಗ್ ನಡೆಯಲಿದೆ. ದರ್ಶನ್‌ಗೆ ನಾಯಕಿಯಾಗಿ ರಚನಾ ರೈ ಅಭಿನಯಿಸುತ್ತಿದ್ದು, ತುಳಸಿ, ಅಚ್ಯುತ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸ ಪ್ರಭು, ಶೋಭರಾಜ್ ಸೇರಿದಂತೆ ಹಲವು ನಟರ ತಾರಾಗಣವಿದೆ.

ಕೋಟ್ಯಾಂತರ ರೂಪಾಯಿ ಬಂಡವಾಳ ಹೂಡಿದ್ದ ಡೆವಿಲ್ ಚಿತ್ರದ ನಿರ್ಮಾಪಕರು ದರ್ಶನ್ ಬಂಧನದ ತರುವಾಯ ಆಘಾತಕ್ಕೊಳಗಾಗಿದ್ದರು. ಆದರೆ ಈಗ ದರ್ಶನ್ ಜೈಲಿನಿಂದ ಬಿಡುಗಡೆಯಾಗಿದ್ದು, ಚಿತ್ರೀಕರಣದಲ್ಲಿ ಭಾಗಿಯಾಗಿರುವುದು ನಿರ್ಮಾಪಕರು ನಿಟ್ಟುಸಿರು ಬಿಡುವಂತಾಗಿದೆ.

'ಸಾರಥಿ'ಯಂತೆ ಡೆವಿಲ್ ಕ್ಲಿಕ್ ಆಗುತ್ತಾ....

ದರ್ಶನ್ ಅವರು ಜೈಲಿನಿಂದ ಬಿಡುಗಡೆಯಾದ ನಂತರ ಡೆವಿಲ್ ಬಿಡುಗಡೆಯಾಗುತ್ತಿರುವ ಮೊದಲ ಚಿತ್ರವಾಗಿದೆ. ರೇಣುಕಾಸ್ವಾಮಿ ಹತ್ಯೆಯಲ್ಲಿ ಎ2 ಆರೋಪಿಯಾಗಿರುವ ದರ್ಶನ್ ಅವರನ್ನು ಜನರು ಯಾವ ರೀತಿ ಸ್ವೀಕರಿಸುತ್ತಾರೆ ಎಂಬುದನ್ನು ಕಾದು ನೋಡಬೇಕು. ದರ್ಶನ್, ಈ ಹಿಂದೆಯೂ ವಿವಾದವೊಂದರಲ್ಲಿ ಜೈಲಿಗೆ ಹೋಗಿ ಬಂದು, 'ಸಾರಥಿ' ಸಿನಿಮಾದಲ್ಲಿ ನಟಿಸಿದ್ದರು. ಈ ಚಿತ್ರ ಸೂಪರ್ ಡೂಪರ್ ಹಿಟ್ ಆಗಿತ್ತು.

ಹಾಗೆಯೇ ಡೆವಿಲ್ ಕೂಡ ಯಶಸ್ವಿಯಾಗುವುದೇ ಎಂಬುದನ್ನು ಕಾದು ನೋಡಬೇಕಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರಾಕ್ಷಸ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಕ್ಷಸ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಕ್ಷಸ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಕಪಾತಿ (ಕ)+ ಸೂರಿ ಲವ್ಸ್ ಸಂಧ್ಯಾ(ಕ)	2+2 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಕ್ಷಸ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೆಪಿಎಸ್‌ಸಿ ಪರೀಕ್ಷೆ ಅವಾಂತರ: ಭಾಷಾಂತರಕಾರರು ಕಪ್ಪು ಪಟ್ಟಿಗೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಮಹತ್ವದ ಘೋಷಣೆ

ಬೆಂಗಳೂರು, ಮಾ.12– ಕೆಪಿಎಸ್‌ಸಿ ಪರೀಕ್ಷೆಯಲ್ಲಿ ನಡೆದ ಅವಾಂತರ ಹಿನ್ನಲೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ ಮಾಡಿದ ಭಾಷಾಂತರಕಾರರನ್ನು ಕಪ್ಪು ಪಟ್ಟಿಗೆ ಸೇರ್ಪಡೆ ಮಾಡುವ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.



ನಿಯಮ 69 ಅಡಿಯಲ್ಲಿ ವಿಧಾನ ಸಭೆಯಲ್ಲಿ ನಡೆದ ಸುದೀರ್ಘ ಚರ್ಚೆಗೆ ಬುಧವಾರ ಸಿಎಂ ಸಿದ್ದರಾಮಯ್ಯ ಉತ್ತರ ನೀಡಿದರು. ಕೆಪಿಎಸ್‌ಸಿ ಭಾಷಾಂತರ ಕಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಸೂಚಿಸುತ್ತೇವೆ. ಶಿಸ್ತುಕ್ರಮ, ಕ್ರಿಮಿನಲ್ ಕ್ರಮ ಕೈಗೊಳ್ಳಲು ಸೂಚಿಸುತ್ತೇವೆ ಎಂದರು.

ಕೆಪಿಎಸ್‌ಸಿ ನಿಯಮಾವಳಿಗಳಲ್ಲಿ ಕೆಲ ಬದಲಾವಣೆ ಮಾಡುತ್ತಿದ್ದೇವೆ. ಸದ್ಯ ಕೆಇಟಿಯಲ್ಲಿ ಇರುವ ಪ್ರಕರಣದ ತೀರ್ಪು ಬರಬೇಕು. ಮೊದಲು ಕನ್ನಡದಲ್ಲಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿ, ನಂತರ ಇಂಗ್ಲಿಷ್‌ಗೆ ಭಾಷಾಂತರ ಮಾಡಿ ಎಂದು ಕೆಪಿಎಸ್‌ಸಿಗೆ ಸೂಚನೆ ಕೊಡುತ್ತೇವೆ. ಕೆಪಿಎಸ್‌ಸಿ ಸುಧಾರಣೆ ಆಗಬೇಕು. ಇದಕ್ಕೆ ವಿಪಕ್ಷಗಳು ಸಲಹೆ ಕೊಡಲಿ, ಸ್ವೀಕರಿಸುತ್ತೇವೆ ಎಂದರು.

ಆಯೋಗದ ಸುಧಾರಣೆಗೆ 2 ಬಾರಿ ತಜ್ಞರ ಸಮಿತಿ ಮಾಡಲಾಗಿದೆ. ಆಯೋಗದ ಲೋಪಗಳ ಬಗ್ಗೆ ತಜ್ಞರ ಸಮಿತಿ ವರದಿ ಕೊಟ್ಟಿವೆ. ಕೆಪಿಎಸ್‌ಸಿ ಸದಸ್ಯರ ಸಂಖ್ಯೆ ಹೆಚ್ಚಾಗಿರುವ ಕುರಿತು ಸದನದಲ್ಲಿ ಪ್ರಸ್ತಾಪವಾಗಿದೆ. ಸದಸ್ಯರ ಸಂಖ್ಯೆ ಎಲ್ಲ ಸರ್ಕಾರದ ಅವಧಿಯಲ್ಲಿ ಹೆಚ್ಚಾಗಿದೆ ಬಸವರಾಜ ಬೊಮ್ಮಾಯಿ ಕಾಲದಲ್ಲೂ ಸದಸ್ಯರ ನೇಮಕ ಆಗಿದೆ. ನಮ್ಮ ರಾಜ್ಯದ ಕೆಪಿಎಸ್‌ಸಿಯಲ್ಲಿ 15 ಸದಸ್ಯರು ಮತ್ತು ಓರ್ವ ಅಧ್ಯಕ್ಷ ಇದ್ದಾರೆ ಅದನ್ನು ಕಡಿಮೆ ಮಾಡಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಇದೇ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದರು.

ಕೆಪಿಎಸ್‌ಸಿ ಪರೀಕ್ಷೆ ಅಕ್ರಮದ ಹಿನ್ನೆಲೆಯಲ್ಲಿ ಮರು ಪರೀಕ್ಷೆ ಆಗಲೇಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆಗ್ರಹಿಸಿದರು. ಪರೀಕ್ಷೆ ಪ್ರಶ್ನೆ ಪತ್ರಿಕೆಯಲ್ಲಿ 79 ತಪ್ಪುಗಳನ್ನು ಮಾಡಲಾಗಿದೆ. ಆದರೆ ತಜ್ಞರ ಸಮಿತಿ 3 ತಪ್ಪು ಆಗಿದೆ ಎಂದು ವರದಿ ಕೊಟ್ಟಿದೆ. ಆದರೆ 5 ಕ್ಕೆ ಗ್ರೇಸಿಂಗ್ ಮಾರ್ಕ್ಸ್ ಕೊಡಲಾಗಿದೆ. ಈ ನಿಟ್ಟಿನಲ್ಲಿ ಕೆಪಿಎಸ್‌ಸಿ ಪರೀಕ್ಷೆ ಅವಾಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ಮರು ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಮೂವರು ಐಪಿಎಸ್ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಕೇಂದ್ರ ಜಾಗೃತ ಆಯೋಗಕ್ಕೆ ದೂರು

ಮೈಸೂರು, ಮಾ.12(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳಿದ್ದರೂ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸದೆ ರಾಜಕೀಯ ಪ್ರಭಾವಕ್ಕೆ ಒಳಗಾಗಿರುವ ಮೂವರು ಐಪಿಎಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ, ನವದೆಹಲಿಯ ಕೇಂದ್ರ ಜಾಗೃತ ಆಯೋಗಕ್ಕೆ ದೂರು ನೀಡಿದ್ದಾರೆ.



ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ಮನೀಶ್ ಕರ್ಬಿಕರ್, ಪೊಲೀಸ್ ಮಹಾ ನಿರೀಕ್ಷಕ (ಐಜಿಪಿ) ಡಾ.ಸುಬ್ರಹ್ಮಣ್ಯ ರಾವ್ ಹಾಗೂ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಭಾಗಿಯಾಗಿರುವ ಬಗ್ಗೆ ಸಾಕಷ್ಟು ಸಾಕ್ಷ್ಯಗಳಿತ್ತು. 1996ರಲ್ಲಿ ದೇವರಾಜು ಡಿ ನೋಟಿಫಿಕೇಷನ್‌ಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಂದು ಡಿಸಿಎಂ ಆಗಿದ್ದ ಸಿದ್ದರಾಮಯ್ಯ ಹೆಸರಿನ ಉಲ್ಲೇಖವಿದೆ ಎಂದು ಆರೋಪಿಸಿದ್ದಾರೆ.

ಇದರ ಜೊತೆಗೆ ಜುಲೈ 13, 1993ರಲ್ಲಿ ಡಿ ನೋಟಿಫಿಕೇಷನ್ ಪ್ರಕ್ರಿಯೆಯಲ್ಲಿ ಹಿಂಬರಹ ನೀಡುವಂತೆ ತಮ್ಮ ಭಾವಮೈದ ಮಲ್ಲಿಕಾರ್ಜುನ ಸ್ವಾಮಿ ಹೆಸರಿಗೆ ಹಿಂಬರಹ ನೀಡುವಂತೆ ಸಿದ್ದರಾಮಯ್ಯ ಸೂಚಿಸಿದ್ದಾರೆ ಎಂದು ದೂರಿದ್ದಾರೆ.

ಇದಲ್ಲದೆ ದಾಖಲಾತಿಯಲ್ಲಿ ವೈಟ್ನರ್ ಹಾಕಿ ತಿದ್ದಿರುವುದು ಸ್ಪಷ್ಟವಾಗಿದೆ. ಇಂತಹ ಹಲವು ಸಾಕ್ಷ್ಯಗಳನ್ನು ಪೊಲೀಸ್ ಅಧಿಕಾರಿಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿಲ್ಲ. ಇವರೆಲ್ಲಾ ಸಿದ್ದರಾಮಯ್ಯ ಅವರ ಪ್ರಭಾವಕ್ಕೆ ಒಳಗಾಗಿದ್ದು, ಏಕ ಪಕ್ಷೀಯವಾಗಿ ನಡೆದುಕೊಂಡಿದ್ದಾರೆ ಎಂದು ಕೃಷ್ಣ ಆಪಾದಿಸಿದ್ದಾರೆ.

ಐಪಿಎಸ್ ಅಧಿಕಾರಿಗಳಾಗಿರುವ ಇವರಿಗೆ ಸಾಮಾನ್ಯ ಜ್ಞಾನ ಇಲ್ಲವೆ ಎಂದು ಪ್ರಶ್ನಿಸಿರುವ ಸ್ನೇಹಮಯಿ ಕೃಷ್ಣ, ಇಂತಹವರಿಂದ ಭ್ರಷ್ಟಾಚಾರ, ಅಕ್ರಮ, ಅನ್ಯಾಯಗಳನ್ನು ತಡೆಯಲು ಸಾಧ್ಯವೆ ಎಂದು ಮರು ಪ್ರಶ್ನಿಸಿದ್ದಾರೆ.

ರಾಜ್ಯ ಮಹಿಳಾ ನಿಲಯದಲ್ಲಿ ಆಶ್ರಯ ಪಡೆದಿದ್ದ ಯುವತಿಯರ ಮದುವೆ

ಮೈಸೂರು, ಮಾ.12(ಬಿಎಲ್‌ಯು)– ಮೈಸೂರಿನ ರಾಜ್ಯ ಮಹಿಳಾ ನಿಲಯದಲ್ಲಿ ಆಶ್ರಯ ಪಡೆದಿದ್ದ ಇಬ್ಬರು ಯುವತಿಯರ ಮದುವೆ ಸರಳ ಹಾಗೂ ಅರ್ಥಪೂರ್ಣವಾಗಿ ಇಂದು ನೆರವೇರಿತು.

ರಾಜ್ಯ ಮಹಿಳಾ ನಿಲಯದಲ್ಲಿದ್ದ ಅಶ್ವಿನಿ ಅವರನ್ನು ಚಿತ್ರದುರ್ಗದ ಜಿ.ಆರ್. ಸಂದೀಪ್ ಅವರು ವಿವಾಹವಾದರು. ಇಲ್ಲಿಯೇ ಆಶ್ರಯ ಪಡೆದಿದ್ದ ಮತ್ತೊಬ್ಬ ಯುವತಿ ಆಯೇಷಾ ಬಾನು ಅವರನ್ನು ವಿಜಯನಗರ ಜಿಲ್ಲೆಯ ಕೆ.ವಿಕಾಸ್ ಮದುವೆಯಾದರು.

ಮೈಸೂರಿನ ವಿಜಯನಗರ ಎರಡನೇ ಹಂತದ ಸರ್ಕಾರಿ ರಾಜ್ಯ ಮಹಿಳಾ ನಿಲಯದ ಆವರಣದಲ್ಲಿ ಗುರು–ಹಿರಿಯರು, ಅಧಿಕಾರಿಗಳ ಸಮ್ಮುಖದಲ್ಲಿ ವಿವಾಹ ನೆರವೇರಿತು.

ಈ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಜಿ. ದಿನೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಬಸವರಾಜು, ಮಹಿಳಾ ನಿಲಯದ ಅಧೀಕ್ಷಕಿ ಶೈಲ ಇತರರು ನೂತನ ವಧುವರರನ್ನು ಆಶೀರ್ವದಿಸಿದರು.



ಮೈಸೂರಿನ ವಿಜಯನಗರ ಎರಡನೇ ಹಂತದ ಸರ್ಕಾರಿ ರಾಜ್ಯ ಮಹಿಳಾ ನಿಲಯದ ಆವರಣದಲ್ಲಿ ಮಂಗಳವಾರ ರಾಜ್ಯ ಮಹಿಳಾ ನಿಲಯದಲ್ಲಿ ಆಶ್ರಯ ಪಡೆದಿದ್ದ ಇಬ್ಬರು ಯುವತಿಯರ ಮದುವೆ ನೆರವೇರಿತು.

ಹುಟ್ಟುಹಬ್ಬದ ಶುಭಾಶಯ



ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕನಕ ಮೂರ್ತಿ ಅವರ ಹುಟ್ಟುಹಬ್ಬವನ್ನು ವಿಶೇಷ ಚೇತನ ಮಕ್ಕಳ ಶಾಲೆಯಲ್ಲಿ ಊಟ ಬಡಿಸುವುದರ ಮೂಲಕ ಆಚರಣೆ ಮಾಡಲಾಯಿತು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಚೇತನ್ ರಾಜ್, ಎನ್. ಯೋಗೇಶ್, ಶಶಿ, ಚುಂದ್ರು, ಸಂಜು, ರಂಗಸ್ವಾಮಿ, ಅಂಕಪ್ಪ, ಮರಿಗೌಡ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು

ಹತ್ತು ದಿನಗಳ ಕ್ಯಾತಮಾರಹಳ್ಳಿ ಹುಲಿಯಮ್ಮ ಜಾತ್ರೋತ್ಸವಕ್ಕೆ ಅದ್ಧೂರಿ ತೆರೆ

ಭಕ್ತರ ಮನೆ-ಮನಗಳಲ್ಲಿ ಭಕ್ತಿ ಪರಾಕಾಷ್ಟೆ

ಮೈಸೂರು, ಮಾ.12(ಎಂಕೆ)– ಗ್ರಾಮೀಣ ಸಂಸ್ಕೃತಿಯ ಪರಂಪರೆಯ ಸಂಕೇತವಾಗಿ ಅತ್ಯಂತ ವಿಜೃಂಭಣೆಯೊಂದಿಗೆ 10 ದಿನಗಳ ಕಾಲ ಅಪಾರ ಭಕ್ತರ ಮನೆ–ಮನಗಳಲ್ಲಿ ಭಕ್ತಿ ಸುಧೆ ಹರಿಸಿದ ಮೈಸೂರಿನ ಕ್ಯಾತಮಾರನಹಳ್ಳಿ ಗ್ರಾಮ ದೇವತೆ ಹುಲಿಯಮ್ಮ ದೇವಿ ಜಾತ್ರಾ ಮಹೋತ್ಸವ ಬುಧವಾರ ಸಂಪನ್ನಗೊಂಡಿತು.

ರಾಮಾನುಜ ರಸ್ತೆ ಎಲೆ ತೋಟ (ಮಧುವನ)ದಿಂದ ವಾದ್ಯಮೇಳ ಸಮೇತ ಸಾವಿರಾರು ಮಂದಿ ಹೊತ್ತುಕೊಂಡು ಬಂದ 60–70 ಅಡಿ ಉದ್ದದ ನಿಶಾನಿ ಮರದೊಂದಿಗೆ ಆರಂಭವಾದ ಹುಲಿಯಮ್ಮ ದೇವಿ ಜಾತ್ರಾ ಮಹೋತ್ಸವ, ತಂಬಿಟ್ಟು ಆರತಿ, ಬೆಲ್ಲದ ಆರತಿ, ಕರಕಲು ಹಾಕುವ ಸಂಪ್ರದಾಯ, ಕೋಲಾಟ ಕುಣಿತ, ಕುಸ್ತಿ ಪಂದ್ಯಾವಳಿ, ಬಾಳೆಕಂಬ ಅಲಂಕಾರ, ಸಾಂಸ್ಕೃತಿಕ ಕಲಾ ತಂಡಗಳ ಮೆರವಣಿಗೆ, ಇಷ್ಟಾರ್ಥ ಸಿದ್ದಿಗಾಗಿ ಹರಕೆ ಕಟ್ಟಿಕೊಂಡ ಭಕ್ತಾದಿಗಳಿಂದ ಬಾಯಿಗೆ ಬೀಗ(ಬಾಯಿಬೀಗ) ಹಾಕಿಸಿಕೊಂಡು ಪೂಜಾ ವಿಧಿ ವಿದಾನಗಳೊಂದಿಗೆ ಹರಕೆ ಸಲ್ಲಿಕೆ, ನೆಂಟರಿಷ್ಟರಿಗೆ ಬಾಡೂಟದ ಆತಿಥ್ಯದ ಸಂಭ್ರಮ ಹಾಗೂ ಆತ್ಯಾಕರ್ಷಣೆಯ ಪೌರಾಣಿಕ ಕುರುಕ್ಷೇತ್ರ ನಾಟಕ ಪ್ರದರ್ಶನದೊಂದಿಗೆ ತೆರೆಕಂಡಿತು.

ಜಾತ್ರಾ ಮಹೋತ್ಸವದ ಕಡೆಯ ದಿನವಾದ ಬುಧವಾರ ಬೆಳಗ್ಗೆ 10.30ಗಂಟೆಗೆ ಕುಲದ ತೋಟ(ಮಹದೇಶ್ವರ ಮುಖ್ಯ ರಸ್ತೆ)ಕ್ಕೆ ಗ್ರಾಮದಿಂದ ಮೆರವಣಿಗೆ ಹೋಗಿ, ಅಲ್ಲಿಂದ ಕವಲುಗಡ್ಡಿ ಹಾಗೂ ಒನಕೆ ಪ್ರದರ್ಶನದೊಂದಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಈ ವೇಳೆ ಭಕ್ತರು ತಮ್ಮ ಇಷ್ಟಾರ್ಥ ಸಿದ್ದಿಗಾಗಿ ನೆರವೇರಲು ಮಹದೇಶ್ವರ ಗುಡ್ಡಪ್ಪನವರಿಂದ ಬಾಯಿಬೀಗ ಹಾಕಿಸಿಕೊಂಡು ಹುಲಿಯಮ್ಮ ದೇವಿಗೆ ಹರಕೆ ಸಲ್ಲಿಸಿದರು. ಕುಲದ ತೊಟದಿಂದ ಹುಲಿಯಮ್ಮ ದೇವಿಯ ಉತ್ಸವ ಮೂರ್ತಿಯೊಂದಿಗೆ ವೈಭವದ ಮೆರವಣಿಗೆ ನಡೆಯಿತು. ಹತ್ತಾರು ಕಲಾತಂಡಗಳೊಂದಿಗೆ ಹರಕೆ ಕಟ್ಟಿಕೊಂಡಿದ್ದ ಭಕ್ತರು, ದೇವಸ್ಥಾನದ ವರೆಗೂ ಮೆರವಣಿಗೆಯಲ್ಲಿ ಸಾಗಿದರು.

ನಂತರ ಸರತಿ ಸಾಲಿನಲ್ಲಿ ಹುಲಿಯಮ್ಮ ದೇವಿಯ ದರ್ಶನ ಪಡೆದರು. ರಾತ್ರಿ ಸುಮಾರು 9 ಗಂಟೆಯವರೆಗೆ ಪೂಜಾ ಕೈಂಕರ್ಯಗಳು ನಡೆದವು. ರಾತ್ರಿ 10 ಗಂಟೆಗೆ ದೇವಸ್ಥಾನದ ಎದುರು ಸಿದ್ದವಾದ ವೇದಿಕೆಯಲ್ಲಿ ಗ್ರಾಮದ ಅಶ್ವಥ್‌ಕಟ್ಟೆ ಶ್ರೀ ನಾರಾಯಣಸ್ವಾಮಿ ಸಂಘದ ವತಿಯಿಂದ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನಗೊಂಡಿತು. ಗ್ರಾಮಸ್ಥರು, ನೆಂಟರಿಷ್ಟರು ನಾಟಕ ವೀಕ್ಷಿಸಿ, ಕಲಾವಿದರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹತ್ತಾರು ಹಳ್ಳಿಗಳ ಮನೆ ಮಾತಾಗಿರುವ ಜಾತ್ರೆ: ಪ್ರತಿ 2 ವರ್ಷಕ್ಕೊಮ್ಮೆ ಜರುಗುವ ಕ್ಯಾತಮಾರನಹಳ್ಳಿ ಗ್ರಾಮ ದೇವತೆ ಹುಲಿಯಮ್ಮ ದೇವಿಯ ಜಾತ್ರಾ ಮಹೋತ್ಸವ ಮೈಸೂರು ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಮನೆ ಮಾತಾಗಿದೆ. ಅದರಲ್ಲೂ ನಗರ ವ್ಯಾಪ್ತಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯುವ ಜಾತ್ರೆ ಇದಾಗಿದ್ದು, ಆರಂಭದಿಂದ ಕೊನೆಯ ದಿನದವರೆಗೂ ಭಕ್ತ ಸಮೂಹವೇ ಸೇರಿತ್ತು.

ಪೊಲೀಸ್ ಭದ್ರತೆ: ಕ್ಯಾತಮಾರಹಳ್ಳಿ ಜಾತ್ರಾ ಮಹೋತ್ಸವದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನಗರ ಪೊಲೀಸ್ ವತಿಯಿಂದ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಡಿಸಿಪಿ ಮುತ್ತುರಾಜ್ ಅವರ ನೇತೃತ್ವದಲ್ಲಿ ಹತ್ತು ದಿನಗಳು ಕೂಡ ಹುಲಿಯಮ್ಮ ದೇವಸ್ಥಾನ ಆವರಣ ಹಾಗೂ ಕ್ಯಾತಮಾರನ ಹಳ್ಳಿಯ ಪ್ರಮುಖ ಸ್ಥಳಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ದೇವಸ್ಥಾನದ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಕಡಿವಾಣ ಹಾಕಿ, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಲು ಅವಕಾಶ ಮಾಡಿಕೊಡಲಾಯಿತು. ಅಲ್ಲದೆ ರೂಟ್‌ಮಾರ್ಚ್ ನಡೆಸುವ ಮೂಲಕವೂ ಗ್ರಾಮಸ್ಥರಲ್ಲಿ ಧೈರ್ಯ ತುಂಬಲಾಯಿತು.

ಸಮುದಾಯಗಳ ಸಂಭ್ರಮ: 10 ದಿನದ ಹುಲಿಯಮ್ಮ ಜಾತ್ರೆಯಲ್ಲಿ ಪ್ರಮುಖವಾಗಿ ನಾಯಕ ಜನಾಂಗ ಹಾಗೂ ದಲಿತರು ಒಟ್ಟಿಗೆ ಸೇರಿ ಆಚರಿಸುವುದೇ ವಿಶೇಷವಾಗಿತ್ತು. ಜೊತೆಗೆ ಅರಸು, ಬ್ರಾಹ್ಮಣ, ಒಕ್ಕಲಿಗ, ವೀರಶೈವರು ಸೇರಿದಂತೆ ಇತರೆ ಎಲ್ಲಾ ಜನಾಂಗಗಳೂ ತಮ್ಮ ಸಹಕಾರವೂ ಉತ್ತಮವಾಗಿತ್ತು. ಜಾತ್ರೆಯ 9 ಮತ್ತು 10ನೇ ದಿನವಂತೂ ಪ್ರತೀ ಮನೆಯಲ್ಲೂ ಬಾಡೂಟ ಔತಣಕೂಟ ನಡೆಯಿತು. ನೆಂಟರಿಷ್ಟರಿಗೆ, ಅತಿಥಿಗಳಿಗೆ ಭರ್ಜರಿ ಬಾಡೂಟ ಬಡಿಸಿ ಪರಸ್ಪರ ಸಾಮರಸ್ಯ ಬಿಂಬಿಸಲಾಯಿತು.



ಕ್ಯಾತಮಾರನಹಳ್ಳಿ ಹುಲಿಯಮ್ಮ ದೇವಸ್ಥಾನದ ಎದುರು ಭಕ್ತರು ಜಮಾವಣೆಗೊಂಡಿರುವುದು



ಬಾಯಿಬೀಗ ಹರಕೆ ಸಲ್ಲಿಸಲು ಭಕ್ತರು ಬಾಯಿಗೆ ಬೀಗ ಹಾಕಿಸಿಕೊಳ್ಳುತ್ತಿರುವುದು

> 2 ವರ್ಷಕ್ಕೊಮ್ಮೆ ನಡೆಯುವ ಹುಲಿಯಮ್ಮ ತಾಯಿ ಜಾತ್ರಾ ಮಹೋತ್ಸವ ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿದೆ. ಹತ್ತು ದಿನವೂ ದೇವಿಗೆ ವಿವಿಧ ಪೂಜಾ ಕೈಂಕರ್ಯಗಳು ಭಕ್ತಿಯಿಂದ ನೆರವೇರಿದೆ. ಕ್ಯಾತಮಾರನಹಳ್ಳಿ ಹಾಗೂ ಅಕ್ಕ–ಪಕ್ಕದ ಗ್ರಾಮಸ್ಥರು, ಪೊಲೀಸ್ ಅಧಿಕಾರಿಗಳು ಉತ್ತಮ ಸಹಕಾರ ನೀಡಿದ್ದಾರೆ.
> – ಎಂ.ಲೋಕೇಶ್, ಅಧ್ಯಕ್ಷ, ಶ್ರೀ ಹುಲಿಯಮ್ಮ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್

> ಈ ವರ್ಷವೂ ತಾಯಿ ಹುಲಿಯಮ್ಮ ದೇವಿಯ ಕೃಪೆಯಿಂದ ಜಾತ್ರಾ ಮಹೋತ್ಸವ ಯಾವುದೇ ವಿಘ್ನವಿಲ್ಲದೆ ಯಶಸ್ವಿಯಾಗಿದೆ. ಅಪಾರ ಸಂಖ್ಯೆಯ ಭಕ್ತಾದಿಗಳು ದೇವಿಯ ದರ್ಶನ ಪಡೆದು, ಹರಕೆ ಸಲ್ಲಿಸಿದ್ದಾರೆ. ಅಕ್ಕ–ಪಕ್ಕದ ಹಳ್ಳಿಗಳಿಂದ ಬಂದಿದ್ದ ಭಕ್ತರು, ನೆಂಟರಿಷ್ಟರೂ ದೇವಿಯ ಕೃಪೆಗೆ ಪಾತ್ರರಾಗಿದ್ದಾರೆ. ಕ್ಯಾತಮಾರನಹಳ್ಳಿ ಜಾತ್ರೆಯೇ ಅತ್ಯಂತ ವಿಶೇಷವಾಗಿದೆ.
> – ಉಷಾ ನಾರಾಯಣಪ್ಪ, ನಗರಪಾಲಿಕೆ ಮಾಜಿ ಸದಸ್ಯರು

ಎಐ ಜ್ಞಾನಾಧಾರಿತ ಕಾರ್ಯಾಗಾರ



ಟೆರೆಷಿಯನ್ ಕಾಲೇಜಿನಲ್ಲಿ ಕೃತಕ ಬುದ್ಧಿಮತೆ ಕುರಿತು ಮೂರು ದಿನಗಳ ಕಾರ್ಯಾಗಾರ ನಡೆಯಿತು.

ಮೈಸೂರು, ಮಾ.12(ಎಂಕೆ)– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಟೆರೆಷಿಯನ್ ಕಾಲೇಜಿನಲ್ಲಿ ಸ್ನಾತಕೋತ್ತರ ವಿಭಾಗ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ) ವತಿಯಿಂದ ಮುಂದಿನ 'ಪೀಳಿಗೆಯ ಸಂಶೋಧನಾ ವಿಧಾನಗಳು: ಎಐ–ಚಾಲಿತ ನಾವೀನ್ಯತೆಗಳು' ಶೀರ್ಷಿಕೆಯಡಿ ಮೂರು ದಿನಗಳ ಕಾರ್ಯಾಗಾರ ನಡೆಯಿತು.

ಕರ್ನಾಟಕದಾದ್ಯಂತ ವಿವಿಧ ಸಂಸ್ಥೆಗಳ ವಿದ್ಯಾರ್ಥಿಗಳು, ಸಂಶೋಧನಾ ವಿದ್ವಾಂಸರು ಮತ್ತು ಅಧ್ಯಾಪಕರನ್ನು ಕೃತಕ ಬುದ್ಧಿಮತ್ತೆ(ಎಐ) ಚಾಲಿತ ಅತ್ಯಾಧುನಿಕ ಸಂಶೋಧನಾ ತಂತ್ರಗಳೊಂದಿಗೆ ಸಜ್ಜುಗೊಳಿಸುವ ಗುರಿ ಹೊಂದಿದ್ದ ಕಾರ್ಯಾಗಾರವನ್ನು ತುಮಕೂರು ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರೊ. ಬಿ.ಟಿ.ಸಂಪತ್ ಕುಮಾರ್ ಮಾತನಾಡಿ, ಸಂಶೋಧನೆಯಲ್ಲಿ ವ್ಯವಸ್ಥಿತ ವಿಧಾನ ಮತ್ತು ಅದರ ಅಗತ್ಯತೆಯನ್ನು ಅನುಸರಿಸಬೇಕು. ಆಧುನಿಕ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪರಿಣಾಮಕಾರಿ ಸಂಶೋಧನೆಗಳಿಗೆ ಅಗತ್ಯವಾದ ಹಂತಗಳನ್ನು ತಿಳಿಸಿಕೊಟ್ಟರು.

ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ವಿಭಾಗದ ಪ್ರೊ. ಚಂದ್ರಶೇಖರ್, ಪ್ರೊ.ಎನ್.ಎಸ್. ಹರಿನಾರಾಯಣ, ಡಾ.ಚಿಕ್ಕು ಬಾಲಚಂದ್ರನ್ ಕೃತಕ ಬುದ್ಧಿಮತೆ ಕುರಿತು ತಿಳಿಸಿದರು. ಮಹಾರಾಜ ಕಾಲೇಜಿನ ಪ್ರೊ.ಲ್ಯಾನ್ಸಿ ಡಿಸೋಜಾ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಪ್ರೊ.ಎಸ್.ಪಿ.ಶಿವಪ್ರಕಾಶ್, ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ನ ಡಾ.ಎಂ.ವಿ.ಸುನಿಲ್, ಟೆರೆಷಿಯನ್ ಕಾಲೇಜಿನ ನಿರ್ದೇಶಕಿ ರೆವರೆಂಡ್ ಡಾ.ಜುವಾನಿಟಾ, ಪ್ರಾಂಶುಪಾಲರಾದ ರೆವರೆಂಡ್ ಡಾ. ರೋಹಿಣಿ, ಐಕ್ಯೂಎಸಿ ಸಂಯೋಜಕ ವಿವೇಕ್ ಚಾರ್ಲ್ಸ್ ಮತ್ತಿತರರಿದ್ದರು.


ದಿ|| ಕೆಂಪಬೋರಮ್ಮ ಮತ್ತು ದಿ|| ಬೋರಮ್ಮನ ಸಿದ್ದೇಗೌಡ
ದಿ|| ಸಿದ್ದಮ್ಮ ಮತ್ತು ದಿ|| ಕೆಂಚೇಗೌಡ, ಮರಟಿಕ್ಯಾತನಹಳ್ಳಿ
ಶ್ರೀಮತಿ. ಪುಟ್ಟಲಿಂಗಮ್ಮ ಮತ್ತು ಶ್ರೀ ಚಿಕ್ಕಹೊನ್ನೇಗೌಡ, ದಾಸನಕೊಪ್ಪಲು
ಶ್ರೀಮತಿ ಗೌರಮ್ಮ ಮತ್ತು ಶ್ರೀ ಕೆ.ಗಂಗಾಧರ ಮರಟಿಕ್ಯಾತನಹಳ್ಳಿ
ರವರುಗಳ ಕುಟುಂಬದವರುಗಳ ಆಶೀರ್ವಾದಗಳೊಂದಿಗೆ
25
ನೇ
ಶ್ರೀಮತಿ ಎಂ.ಜಿ. ರೂಪಾದೇವಿ
ಮತ್ತು ಶ್ರೀ ಶ್ರೀನಿವಾಸ
ದಾಸನಕೊಪ್ಪಲು ರವರುಗಳಿಗೆ
ವಿವಾಹ ವಾರ್ಷಿಕೋತ್ಸವದ
ಹಾರ್ದಿಕ ಶುಭಾಶಯಗಳು
VISMAYA ADVERTISERS
8050302424
ಶುಭಾಶಯ ಕೋರುವವರು
ಕುಟುಂಬವರ್ಗದವರು
ಮತ್ತು ಗ್ರಾಮಸ್ಥರು